Digitization by eGangotri-South Center

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ
ಮಾನಸಗಂಗೋತ್ರಿ, ಮೈಸೂರು ೫೭೦ ೦೦೬.

KARNATAKA STATE OPEN UNIVERSITY
Manasagangotri, Mysore - 570 006

M.A. (Final)

SANSKRIT

- KANNADA MEDIUM -

096

ARTHAŚĀSTRA - 2

COURSE - 7

BLOCK - 9

CC-0. In Public Domain. Cuddalore Collection. TN.

Digitization by eGangotri-South Center

ಉನ್ನತ ಶಿಕ್ಷಣಕ್ಕಾಗಿ ಇರುವ ಅವಕಾಶಗಳನ್ನು ಹೆಚ್ಚಿಸುವುದಕ್ಕೆ ಮತ್ತು ಶಿಕ್ಷಣವನ್ನು ಪ್ರಜಾತಂತ್ರೀಕರಿಸುವುದಕ್ಕೆ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥೆಯನ್ನು ಆರಂಭಿಸಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ 1986

ಮುಕ್ತ ವಿಶ್ವವಿದ್ಯಾನಿಲಯವು ದೂರಶಿಕ್ಷಣ ಪದ್ಧತಿಯಲ್ಲಿ ಬಹುಮಾದ್ಯಮಗಳನ್ನು ಉಪಯೋಗಿಸುತ್ತದೆ.

.... ವಿದ್ಯಾಕಾಂಕ್ಷಿಗಳನ್ನು ಜ್ಞಾನ ಸಂಪಾದನೆಗಾಗಿ ಕಲಿಕಾ ಕೇಂದ್ರಕ್ಕೆ ಕೊಂಡೊಯ್ಯುವ ಬದಲು, ಜ್ಞಾನ ಸಂಪತ್ತನ್ನು ವಿದ್ಯೆ ಕಲಿಯುವವರ ಬಳಿ ಕೊಂಡೊಯ್ಯುವ ವಾಹಕವಾಗಿದೆ.

ಡಾ. ಕುಳಂದೈಸ್ವಾಮಿ

The Open University system has been initiated in order to augment opportunities for higher education and as instrument of democrating education.

National Education Policy 1986

"The Open University system makes use of Multimedia in distance education system.

.. It is vehicle which transports knowledge to the place of learners rather than transport to the place of learning

Dr. Kulandai Swamy

CC-0. In Public Domain. Cuddalore Collection. TN.

Digitization by eGangotri-South Center

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

अर्थशास्त्र-२

Block 9

Unit No. 1 to 4			Page No.
ಘಟಕ 1	-	गूढपुरुषोत्पत्तिः	1
ಘಟಕ 2	-	मन्त्राधिकारः	27
ಘಟಕ 3	-	राजपुत्ररक्षणम्	49
ಘಟಕ 4	-	राजप्रणिधिः	63

CC-0. In Public Domain. Cuddalore Collection. TN.

Digitization by eGangotri-South Center

Course Design and Editorial Committee

Prof. B. A. Vivek Rai
Vice-Chancellor & Chairman
Karnataka State Open University
Mysore-570 006

Prof. K. T. Shivanna
Dean (Academic)-Convener
Karnataka State Open University
Mysore-570 006

Dr. N. Radhakrishna Bhat
Chairman
Department of Studies
and Research in Sanskrit
Karnataka State Open University
Mysore - 570 006

Subject Co-ordinator & Editor

Course Writer

Dr. Michael
Reader in Sanskrit
Gulbarga University
Gulbarga

Developed by Academic Section KSOU, Mysore

© Karnataka State Open University, 2004

All rights reserved. No part of this work may be reproduced in any form, by mimeography or any other means, without permission in writing from the Karnataka State Open University.

Further information on the Karnataka State Open University Programmes may obtained from the University's Office at Manasagangotri, Mysore - 6.

Printed and Published on behalf of Karnataka State Open University, Mysore-6 by Registrar (Administration).

CC-0. In Public Domain. Cuddalore Collection. TN.

Digitization by eGangotri-South Center

प्रस्तावना

प्रियाः संस्कृतविद्यार्थिनः

अस्मदीयकर्णाटकराज्यमुक्तविश्वविद्यानिलयस्य स्नातकोत्तरशिक्षणविभागे अन्तिमवर्षस्य संस्कृतकक्ष्यां प्रवेष्टृभ्यः भवद्भ्यः सर्वेभ्यः हार्दं सुस्वागतं व्याहरामि।

जगतीतलस्य प्राचीनतमभाषासु अग्रिमपङ्क्तौ विराजमाना संस्कृतभाषा अद्वितीयत्वेन वर्तते। वैदिकसंस्कृतं लौकिकसंस्कृतमिति संस्कृतं द्विधा विभक्तमस्ति। क्रिस्तपूर्वकाले वेदेषु दृश्यमानेयं भाषा क्रिस्तपूर्वपञ्चमशतके काव्यस्वरूपमलभत इति विदग्धाः विद्वांसः वदन्ति। उत्तरोत्तरकाले संस्कृतभाषासौ उन्नतशिक्षण-शासन-लेखन-काव्यादिषु सततं समुपयुज्यमाना सती सर्वत्र व्याप्तासीत्। विश्वस्य प्राचीनतमभाषासु संस्कृतभाषैव प्रप्रथमा इति भाषाविदः विमर्शकाश्च कथयन्ति। प्रायः लोके पञ्चसहस्र-वर्षाधिकम् इतिहासं लब्धवती संस्कृतादन्या भाषा एकापि नास्ति।

चत्वारो वेदाः विविधानि शास्त्राणि रामायण-महाभारतनामकादीतिहासाः अष्टादशपुराणानि-उपपुराणानि षड्दर्शनानि अनेकानि काव्यानि शास्त्र-व्याख्यानानि प्रशस्तयः शासनानि चाटुपद्यानि सुभाषितानीत्येवं रीत्या विविधप्रकारेषु निबद्धाः कृतयः संस्कृतवाङ्मये भूरि विलसन्ति। एतेषां परिचयः पाठ्यक्रमानुरोधेन यथावकाशं कारयिष्यते। संस्कृते विशेषाध्ययनार्थं गहनतमसंशोधनार्थं च युष्माकं सज्जीकरणमेव स्नातकोत्तरशिक्षणस्य मुख्यः उद्देशः।

आसु अन्तिमवर्षस्य कक्ष्यासु यूयं वेदसूक्तानि उपनिषदं-भगवद्गीतां वैदिकसाहित्यचरित्रं कौटलीयम्-अर्थशास्त्रम् याज्ञवल्क्यस्मृतिं वाल्मीकिरामायणे सुन्दरकाण्डस्य कांश्चन सर्गान् प्रबन्धलेखनानि वैयाकरणसिद्धान्तकौमुद्यां समासप्रकरणं भाषाशास्त्रम् आनन्दवर्धनस्य ध्वन्यालोकं मम्मटस्य काव्यप्रकाशं प्राचीना-र्वाचीनालङ्कारिकाणां परिचयं भारतीय-पाश्चात्यसाहित्यविमर्शयोः तुलनात्मकमध्ययनं च करिष्यथ।

युष्माकं स्वाध्यायसुलभाय स्वयंबोधनपद्धत्या (SIM) उपर्युक्तविषयेषु पाठाः विशिष्टरूपेण विद्वद्भिः आरचितास्सन्ति। अनेके विद्वांसः एतान् पाठान् महता परिश्रमेण सज्जीकृतवन्तः तेषां साहाय्यं सकार्तज्ञं संस्मरामि।

यूयं सर्वे एतान् सम्यगधीत्य एतेषु विषयेषु विशिष्टं ज्ञानं सम्पादयत इत्याशासे। "श्रद्धयाग्निः ज्ञानं समिध्यते" इति वेदवाण्यनुसारात् युष्माभिः श्रद्धाकृतमध्ययनं फलप्रदं यशःप्रदं च भूयादिति मदीयः आशयः। शुभं भवतु।

जीयात् गीर्वाणभारती

डा. एन्. राधाकृष्ण भट्
संस्कृतविभागाध्यक्षः
कर्णाटकराज्य-मुक्तविश्वविद्यानिलयः
मानसगङ्गोत्री, मैसूरु

CC-0. In Public Domain. Cuddalore Collection. TN.

Digitization by eGangotri-South Center

ಖಂಡದ ಬೋಧನೋದ್ದೇಶಗಳು :

ಈ ಖಂಡದಲ್ಲಿ ನೀವು ಪಾಠ್ಯಭಾಗವಾದ ಅರ್ಥಶಾಸ್ತ್ರದ 11ನೆಯ ಅಧ್ಯಾಯದಿಂದ 20ನೆಯ ಅಧ್ಯಾಯದವರೆಗಿನ ವಿಷಯಗಳನ್ನು ತಿಳಿದುಕೊಳ್ಳಲಿರುವಿರಿ.

CC-0. In Public Domain. Cuddalore Collection. TN.

Digitization by eGangotri-South Center

UNIT-1
गूढपुरुषोत्पत्तिः

1.1. पाठ्यभागः

1.2. पाठ्यभागः

1.3. पाठ्यभागः

1.4. पाठ्यभागः

CC-0. In Public Domain. Cuddalore Collection. TN.

Digitization by eGangotri-South Center

UNIT-1
गूढपुरुषोत्पत्तिः

1.1. पाठ्यभागः

७. प्रकरण - गूढपुरुषोत्पत्तिः ११-अध्यायः

तत्र - संस्थोत्पत्तिः

गूढचारनियोजनविधिः -

उपधाभिश्शुद्धामात्यवर्गो गूढपुरुषानुत्पादयेत्। कापटिको-दास्थित-गृहपतिक-वैदेहक-तापस-व्यञ्जनान् सत्रि-तीक्ष्ण-रसद-भिक्षुकीश्च।।

तत्र कापटिकनियोजनम् -

परमर्मज्ञः प्रगल्भः छात्रः कापटिकः। तमर्थमानाभ्यामुत्साह्य मन्त्री ब्रूयात् - राजानं मां च प्रमाणं कृत्वा, यस्य यदकुशलं पश्यसि तत्तदानीमेव प्रत्यादिशेति।।

उदास्थितनियोजनम् -

प्रव्रज्याप्रत्यवसितः प्रज्ञाशौचयुक्त उदास्थितः। स वार्ता कर्मप्रदिष्टायां भूमौ प्रभूतहिरण्यान्तेवासी कर्म कारयेत्। कर्मफलाच्च सर्वप्रव्रजितानां ग्रासाच्छादनावसथान् प्रतिविदध्यात्। वृत्तिकामांश्चोपजपेत् - एतेनैव दोषेण राजार्थश्चरितव्यो भक्तवेतनकाले चोपस्थातव्यमिति।

गृहपतिकव्यञ्जननियोजनम् -

सर्वप्रव्रजिताश्च स्वं स्वं वर्गमुपजपेयुः। कर्षको वृत्तिक्षीणः प्रज्ञाशौचयुक्तो गृहपतिकव्यञ्जनः। स कृषिकर्मप्रदिष्टायां भूमाविति - समानं पूर्वेण।।

CC-0. In Public Domain. Cuddalore Collection. TN.

Digitization by eGangotri-South Center

वैदेहकव्यञ्जननियोजनम् -

वाणिजको वृत्तिक्षीणः प्रज्ञाशौचयुक्तो वैदेहकव्यञ्जनः। स वणिक्कर्मप्रदिष्टायां भूमाविति - समानं पूर्वेण।।

तापसव्यञ्जननियोजनम् -

मुण्डो जटिलो वा वृत्तिकामस्तापसव्यञ्जनः। स नगराभ्याशे प्रभूतमुण्डजटिलान्तेवासी शाकं यवसमुष्टिं वा मासद्विमासान्तरं प्रकाशमश्नीयात्, गूढमिष्टमाहारम्। वैदेहकान्तेवासिनश्चैनं समिद्धयोगैरर्चयेयुः। शिष्याश्चास्यावेदयेयुः - 'असौ सिद्धस्सामेधिकः' इति। समेधाशास्तिभिश्चाभिगतानामङ्गविद्यया शिष्यसंज्ञाभिश्च कर्माप्यभिजनेऽवसितान्यादिशेदल्पलाभमग्निदाहं चोरभयं दूष्यवधं तुष्टदानं विदेशप्रवृत्तिज्ञानम् - 'इदमद्य श्वो वा भविष्यतीदं वा राजा करिष्यति' इति।।

नियोजनानन्तरकर्तव्यानि -

तदस्य गूढास्सत्रिणश्च संवादयेयुः। सत्त्वप्रज्ञावाक्यशक्तिसम्पन्नानां राजभाव्यमनुव्याहरेत्, मन्त्रिसंयोगं च। मन्त्री चैषां वृत्तिकर्मभ्यां वियतेत। ये च कारणादभिक्रुद्धास्तानर्थमानाभ्यां शमयेत्। अकारणक्रुद्धान् तूष्णीदण्डेन राजद्विष्टकारिणश्च।।

पूजिताश्चार्थमानाभ्यां राज्ञा राजोपजीविनाम्।

जानीयुः शौचमित्येताः पञ्च संस्थाः प्रकीर्तिताः।।१८।।

इति विनयाधिकारिके गूढपुरुषोत्पत्तौ संस्थोत्पत्तिः एकादशोऽध्यायः (११)

CC-0. In Public Domain. Cuddalore Collection. TN.

Digitization by eGangotri-South Center

1.1.1 ಕನ್ನಡಾನುವಾದ

ಪ್ರಕರಣ - 7 ಗೂಢಪುರುಷೋತ್ಪತ್ತಿ

ಅಧ್ಯಾಯ - 11 ಸಂಸ್ಥಾನಗಳು

ಗೂಢಾಚಾರ ನಿಯೋಜನ ವಿಧಿ :

ಉಪಧಾಗಳಿಂದ ಶುದ್ಧರಾದ ಅಮಾತ್ಯರಿಂದ ಕೂಡಿದ (ರಾಜನು) ಗೂಢಪುರುಷರ ಏರ್ಪಾಡನ್ನು ಮಾಡಬೇಕು. ಅವರಾರೆಂದರೆ : ಕಾಪಟಿಕ, ಉದಾಸ್ಥಿತ, ಗೃಹಪತಿಕ ವ್ಯಂಜನ, ವೈದೇಹಕ ವ್ಯಂಜನ, ತಾಪಸವ್ಯಂಜನ ಹಾಗೂ ಸತ್ರಿ, ತೀಕ್ಷ್ಣ, ರಸದ ಭಿಕ್ಷುಕಿ.

ಕಾಪಟಿಕ ನಿಯೋಜನೆ :

ಇತರರ ರಹಸ್ಯ ಆಶಯಗಳನ್ನು ಊಹಿಸಬಲ್ಲ ಮತ್ತು ಚತುರನಾದ ಛಾತ್ರನು (ವಿದ್ಯಾರ್ಥಿ) ಕಾಪಟಿಕ. ಅಂಥವನನ್ನು ಹಣ ಮತ್ತು ಗೌರವಗಳಿಂದ ಪ್ರೋತ್ಸಾಹಿಸಿ, 'ರಾಜನ ಅಥವಾ ನನ್ನ ಬಗೆಗೆ ಏನು ದೋಷವನ್ನು ಕಾಣುವೆಯೋ (ಕೇಳುವೆಯೋ), ಅದನ್ನು ಆಗಲೇ ನಮಗೆ ತಿಳಿಸು' ಎಂದು ಮಂತ್ರಿ ಹೇಳಬೇಕು.

ಉದಾಸ್ಥಿತ ನಿಯೋಜನೆ :

ಪ್ರವ್ರಾಜಕ ಅಥವಾ ಶ್ರಮಣನಾಗಿದ್ದು ಹಿಂದಕ್ಕೆ ಬಂದ, ಪ್ರಜ್ಞೆ ಮತ್ತು ಶುದ್ಧವಾದ ಬುದ್ಧಿಯಿಂದ ಕೂಡಿದವನು ಉದಾಸ್ಥಿತ. ಅಂಥವನು ವಾರ್ತಾ ಕರ್ಮಕ್ಕಾಗಿ ಕೊಡಲಾದ ಭೂಮಿಯಲ್ಲಿ ಹೇರಳವಾದ ಹಣದೊಡನೆ ಅನೇಕಜನ ಶಿಷ್ಯರೊಂದಿಗೆ (ವಾರ್ತಾ) ಕರ್ಮ ನಡೆಸುತ್ತಾನೆ. ಅದರಿಂದ ದೊರೆತ ಫಲ (ಲಾಭ)ದಿಂದ ಎಲ್ಲ ಆ ಪರಿವ್ರಾಜಕರಿಗೂ ಅಶನ-ವಸನ-ವಸತಿಗಳನ್ನು ಏರ್ಪಡಿಸಬೇಕು. ಅವರಲ್ಲಿ ವೃತ್ತಿಕಾಮರಾದವರಿಗೆ (ರಾಜನ ಕೆಲಸ ಮಾಡಲು ಇಚ್ಛಿಸುವವರಿಗೆ) ಗುಟ್ಟಾಗಿ ಹೇಳುವುದು : ಇದೇ ವೇಷದಲ್ಲಿಯೇ ರಾಜನಿಗಾಗಿ ಸುದ್ದಿ ಸಂಗ್ರಹಿಸಬೇಕು; ಆಹಾರ-ವೇತನದ ವೇಳೆಗೆ ಹಾಜರಿರಬೇಕು" ಎಂದು ಹೇಳಬೇಕು. ಎಲ್ಲ ಪರಿವ್ರಾಜಕರೂ ತಮ್ಮ ತಮ್ಮ ವರ್ಗದವರಿಗೆ ಗುಟ್ಟಿನಲ್ಲಿ ಈ ಕೆಲಸವನ್ನು ತಿಳಿಸಬೇಕು.

CC-0. In Public Domain. Cuddalore Collection. TN.

Digitization by eGangotri-South Center

ಗೃಹಪತಿಕ ವ್ಯಂಜನ ನಿಯೋಜನೆ :

ಬೇಸಾಯಗಾರನಾಗಿದ್ದ ಆದರೆ ವೃತ್ತಿಯನ್ನು ಕಳೆದುಕೊಂಡು; ಪ್ರಜ್ಞೆ, ಶೌಚಗಳಿಂದ ಕೂಡಿದವನು ಗೃಹಪತಿಕವ್ಯಂಜನ. ಅವನು ಕೃಷಿಕರ್ಮಕ್ಕಾಗಿ ನಿರ್ದಿಷ್ಟವಾದ ಭೂಮಿಯಲ್ಲಿ ಕೆಲಸ ಮಾಡಿಸಬೇಕು ಇತ್ಯಾದಿ ಹಿಂದಿನಂತೆಯೇ.

ವೈದೇಹಕ ವ್ಯಂಜನ ನಿಯೋಜನೆ :

ವೃತ್ತಿಕಳೆದುಕೊಂಡ ವರ್ತಕ ಪ್ರಜ್ಞಾಶೌಚಗಳಿಂದ ಕೂಡಿದ್ದರೆ, ಅವನು ವೈದೇಹಕ ವ್ಯಂಜನ. ಅವನು ವರ್ತಕನ ಕೆಲಸಕ್ಕಾಗಿ ನಿರ್ದಿಷ್ಟವಾದ ಭೂಮಿಯಲ್ಲಿ ಕೆಲಸಮಾಡಿಸಬೇಕು ಇತ್ಯಾದಿ ಹಿಂದಿನಂತೆಯೇ.

ತಾಪಸವ್ಯಂಜನ ನಿಯೋಜನೆ :

ವೃತ್ತಿ (ಜೀವಿಕೆ)ಯನ್ನು ಬಯಸುವ ಬೋಳು ತಲೆಯವನು ಅಥವಾ ಜಟೆ ಬೆಳೆಸಿದವನು ತಾಪಸವ್ಯಂಜನ. ಅವನು ನಗರದ ಬಳಿ ಬೋಳುತಲೆಯವರು ಹಾಗೂ ಜಟೆಯುಳ್ಳವರೂ ಆದ ಅನೇಕ ಶಿಷ್ಯರೊಡಗೂಡಿ ಒಂದು ಹಿಡಿ ತರಕಾರಿ ಅಥವಾ ಒಂದು ಹಿಡಿ ಯವಸವನ್ನು ತಿಂಗಳು, ಎರಡು ತಿಂಗಳಿಗೊಮ್ಮೆ ಎಲ್ಲರೂ ಕಾಣುವಂತೆ ತಿನ್ನಬೇಕು; ಗುಟ್ಟಾಗಿ ಇಷ್ಟವಾದ ಆಹಾರವನ್ನು ತಿನ್ನಬೇಕು. ವೈದೇಹಕರಾದ ಶಿಷ್ಯರು ಅವನನ್ನು ಭವಿಷ್ಯವನ್ನು ಅರಿತ ಯೋಗಿ ಎಂದು ಪೂಜಿಸುವರು, ಅವನ (ಇತರ) ಶಿಷ್ಯರು 'ಈತ ಮುಂದಾಗುವುದನ್ನು ಹೇಳಬಲ್ಲ ಸಿದ್ಧ' ಎಂದು ಘೋಷಿಸುವರು. ತಮ್ಮ ಭವಿಷ್ಯವನ್ನು ತಿಳಿಯಲಿಚ್ಛಿಸಿ ಬಂದವರಿಗೆ ಅಂಗವಿದ್ಯೆ, ಶಿಷ್ಯರ ಸಂಜ್ಞೆ-ಇವುಗಳ ಮೂಲಕ ಉತ್ತಮ ಕುಲದವರಲ್ಲಿ ಪ್ರಸಿದ್ಧವಾದ ಕರ್ಮ (ವೃತ್ತಿ)ಗಳನ್ನು ಆದೇಶಿಸಬೇಕು; 'ಇದು ಇಂದೋ ನಾಳೆಯೋ ನಡೆಯುವುದು; ಇದನ್ನು ರಾಜನು ಮಾಡುವನು' ಎಂಬುದಾಗಿ ಅಲ್ಪಲಾಭವನ್ನು, ಅಗ್ನಿದಾಹ, ಕಳ್ಳಕಾಕರಭಯ, ದುಷ್ಟರಿಗೆ ಶಿಕ್ಷೆ, ಶಿಷ್ಟರಿಗೆ ಮರ್ಯಾದೆ, ಹೊರದೇಶಗಳ ಸಮಾಚಾರ ಸೂಚನೆ ಇವುಗಳನ್ನು ನುಡಿಯಬೇಕು.

ಈ ರೀತಿಯ ಇವನ ಭವಿಷ್ಯ ನುಡಿಗಳನ್ನು ಗೂಢ ಪುರುಷರಾದ ಸತ್ರಿಗಳು ಈಡೇರಿಸುವರು. ದೂರದರ್ಶಿತ್ವ, ಪ್ರಜ್ಞೆ, ವಾಗ್ಮಿತಾಶಕ್ತಿಸಂಪನ್ನರಾದವರಿಗೆ ರಾಜನಿಂದ ಲಭಿಸಬಹುದಾದ ಖಿಲ್ಲತ್ತನ್ನೂ, ಮಂತ್ರಿಗಳ ಭೇಟಿಯನ್ನೂ ನುಡಿಯಬೇಕು. ಮಂತ್ರಿಯೂ ಸಹ ಅಂಥಹವರಿಗೆ (ಅನುರೂಪವಾದ) ವೃತ್ತಿ ಅಥವಾ ಕರ್ಮವನ್ನು

CC-0. In Public Domain. Cuddalore Collection. TN.

Digitization by eGangotri-South Center

ಒದಗಿಸಲು ಯತ್ನಿಸಬೇಕು. ಯಾರು ಸಕಾರಣವಾಗಿ ಕುಪಿತರಾಗುತ್ತಾರೆಯೋ, ಅವರನ್ನು ಹಣ ಮತ್ತು ಮರ್ಯಾದೆಗಳಿಂದ ಶಾಂತಗೊಳಿಸಬೇಕು. ಯೋಗ್ಯ ಕಾರಣವಿಲ್ಲದೆ ಅಥವಾ ಕಾರಣವೇ ಇಲ್ಲದೆ ಅಸಂತುಷ್ಟರಾದವರನ್ನೂ, ರಾಜನಿಗೆ ದ್ರೋಹವೆಸಗಿದವರನ್ನೂ ಪ್ರಚ್ಛನ್ನವಾದ ದಂಡನೆಯಿಂದ ಶಾಂತಗೊಳಿಸಬೇಕು. ರಾಜನಿಂದ ಹಣ ಮತ್ತು ಗೌರವಗಳಿಂದ ಪೂಜಿತರಾಗಿ ಈ ಐದು ಸಂಸ್ಥಾಗಳು ರಾಜನ ಸೇವಕರ ಶೌಚವನ್ನು ತಿಳಿಯುವರು ಎಂದು ಹೇಳಲಾಗಿದೆ.

1.12 ಟಿಪ್ಪಣಿ :

गूढचार :

ಗೂಡಾಚಾರರು ಆವಶ್ಯಕವೆಂಬುದನ್ನು ಹಿಂದಿನ ಅಧ್ಯಾಯ ಏಳರಲ್ಲಿ 'चारेण चक्षुः' ಎನ್ನುವ ಮಾತಿನಲ್ಲಿ ಬಂದಿದೆ. ಅಲ್ಲದೆ ಹತ್ತನೆಯ ಅಧ್ಯಾಯದಲ್ಲಿಯೂ ಇವರುಗಳಿಂದ ಆಗುವ ಕೆಲಸದ ಪ್ರಸ್ತಾಪವಿದೆ. ತನ್ನ ಸಿಬ್ಬಂದಿ ಸಮರ್ಪಕವಾಗಿ, ನ್ಯಾಯಯುತವಾಗಿ ಕೆಲಸ ಮಾಡುತ್ತಿರುವರೇ, ರಾಜ್ಯದ ಪ್ರಜಾವರ್ಗ ಹೇಗೆ ನಡೆದುಕೊಳ್ಳುತ್ತಿದೆ ಎಂದಿತ್ಯಾದಿಗಳನ್ನು ರಾಜನು ಚಾರರ ಮೂಲಕವೇ ತಿಳಿಯಬೇಕಾಗುತ್ತದೆ. ಪ್ರಾಚೀನಕಾಲದಿಂದಲೂ ಗೂಢಾಚಾರರ ಮಹತ್ವವು ಪ್ರವಿದಿತವಾಗಿದೆ. ಅವರನ್ನು 'ರಾಜನ ಕಣ್ಣು' ಎಂದೇ ಕರೆಯಲಾಗಿತ್ತು. ನೀತಿವಾಕ್ಯಾಮೃತವು "स्वपरमण्डलकार्याकार्य विलोकने चाऽचक्षूंषि क्षितिपतीनाम्" ಎಂದರೆ, ಮಹಾಭಾರತದಲ್ಲಿ "गावः पश्यन्ति गन्धेन वेदैः पश्यन्ति पण्डिताः। चारैः पश्यन्ति राजानश्चक्षुर्भ्यामितरे जनाः" ಎಂದಿದೆ. ಭಾರವಿಯ ಕಿರಾತಾರ್ಜುನೀಯದಲ್ಲಿ "क्रियासु युक्तैर्नृप चारचक्षुषो न वञ्चनीया प्रभवोऽनुजीविभिः।।"

ಗೂಢಾಚಾರರಲ್ಲಿ ಎರಡು ಬಗೆ :

ಸಂಸ್ಥಾಗಳು, ಸಂಚಾರರು, ಸಂಸ್ಥಾಗಳಲ್ಲಿ ಕಾಪಟಿಕ ಮೊದಲಾದ ಐದು ಪ್ರಭೇದಗಳು. ಸಂಚಾರರಲ್ಲಿ ಸತ್ರಿ. ಮೊದಲಾದ ನಾಲ್ಕು ಪ್ರಭೇದಗಳು; ಸಂಸ್ಥಾ ಹೆಸರಿನ ಚಾರರು ಒಂದು ನೆಲೆಯನ್ನು ಹೊಂದಿರುತ್ತಾರೆ. ಆ ನೆಲೆಯನ್ನು ಗೂಢಪುರುಷರ ಸಂಸ್ಥೆ ಎಂದೂ ಹೇಳಬಹುದು. ಎಂದರೆ ಈ ವೃತ್ತಿಯ ಅನೇಕ ಜನ ಒಂದೆಡೆ ಇರುತ್ತಾರೆ; ವೇತನ, ಬಟ್ಟೆ, ಊಟ, ವಸತಿಗಳನ್ನು ಪಡೆದಿರುತ್ತಾರೆ. ಸಂಚಾರರು

CC-0. In Public Domain. Cuddalore Collection. TN.

Digitization by eGangotri-South Center

ಒಂಟೊಂಟಿಯಾಗಿರುತ್ತಾರೆ ಮತ್ತು ಬೇರೆ ಬೇರೆ ವೃತ್ತಿಯಲ್ಲಿದ್ದುಕೊಂಡು ಸುದ್ದಿಸಂಗ್ರಹ ಮಾಡುತ್ತಾರೆ. ಸಂಸ್ಥಾಚಾರರು ವೃತ್ತಿಯಿಂದ ಗೂಢಪುರುಷರು, ಸಂಚಾರರು ಬೇರೆ ಬೇರೆ ವೃತ್ತಿಗಳನ್ನು ಹೊಂದಿದ್ದು ವರ್ತಮಾನಗಳನ್ನೂ ಸಂಗ್ರಹಿಸುತ್ತಾರೆ.

ಈ ಸಂಸ್ಥಾಚಾರರನ್ನು ಸರಿಯಾಗಿ ಪೋಷಿಸಿದರೆ, ಅವರು ರಾಜನ ಉಪಜೀವಿಗಳು (ಸೇವಕರು) ಎಷ್ಟರ ಮಟ್ಟಿಗೆ ಶುದ್ಧರಾಗಿದ್ದಾರೆಂಬುದನ್ನು ಪತ್ತೆಹಚ್ಚಿ ರಾಜನಿಗೆ ಸುದ್ದಿ ಮುಟ್ಟಿಸುತ್ತಾರೆ. ಅಧಿಕರಣ 5 ಅಧ್ಯಾಯ 3ರಲ್ಲಿ ಇವರೆಲ್ಲರಿಗೂ ಕೊಡಬೇಕಾದ ಕನಿಷ್ಟ ವೇತನವನ್ನು ನಿಗದಿಪಡಿಸಿರುತ್ತಾರೆ. 4ನೇ ಅಧಿಕರಣದಲ್ಲಿ ಸಮಾಹರ್ತೃವಾದವನು ಗೂಢಚಾರರನ್ನು ನಿಯಮಿಸಿ ಶಾಂತಿಭಂಗ ಮಾಡುವವರನ್ನು ಮಟ್ಟಮಾಡಬೇಕೆಂದೂ, ಭ್ರಷ್ಟ ಅಧಿಕಾರಿಗಳನ್ನು, ಖೋಟಾನಾಣ್ಯ ಮಾಡುವವರನ್ನು, ವ್ಯಭಿಚಾರಿಗಳನ್ನು, ಕಳ್ಳರನ್ನು, ದರೋಡೆಕೋರರನ್ನು ಮತ್ತು ಇತರ ಅಪರಾಧಿಗಳನ್ನು ಗೂಢಚಾರರ ಮೂಲಕ ಕಂಡುಹಿಡಿಯಬೇಕೆಂದೂ ಹೇಳಿದೆ. ಕಾನೂನಿಗೆ ಸಂಬಂಧಪಟ್ಟ ವಿಚಾರಗಳ ನಿರ್ಣಯಗಳಲ್ಲೂ ಗೂಢಚಾರರ ಮಾಹಿತಿಯನ್ನು ಕೌಟಿಲ್ಯನು ಅವಲಂಬಿಸಿದ್ದಾನೆ : "पूर्वोत्तरार्थव्याघाते साक्षिवक्तव्य कारणे चारहस्ताच्च निष्पाते प्रदेष्टव्यः पराजयः ||" (ಪು.193). ಮಾನವರು ಭವಿಷ್ಯವನ್ನು ಅರಿಯುವ ಚಾಪಲ್ಯವನ್ನೂ, ಸಿದ್ಧರು, ಯೋಗಿಗಳಲ್ಲಿ ಅತಿಶಯ ಭಕ್ತಿಯನ್ನೂ ಹೊಂದಿರುವುದನ್ನು ಕೌಟಿಲ್ಯ ಗಮನಿಸಿ, ಈ ಬಗೆಯ ಗೂಢಚಾರನ ವಿಷಯದಲ್ಲಿ ಮಹತ್ವ ಕೊಟ್ಟಿರುವಂತೆ ಕಾಣುತ್ತದೆ.

1.2 पाठ्यभागः

---

८. प्रकरणम् - गूढपुरुषप्रणिधिः १२-अध्यायः

गूढपुरुषोत्पत्तौ सञ्चारोत्पत्तिश्च

राजकार्यनिर्वाहकाणां सञ्चाराणां स्वरूपम् -

ये चाप्यसम्बन्धिनोऽवश्यभर्तव्यास्ते लक्षणमङ्गविद्यां जम्भकविद्यां मायागतमाश्रमधर्मनिमित्तमन्तरचक्रमित्यधीयानाः सत्रिणस्संसर्गविद्या वा। ये जनपदे शूरस्त्यक्तात्मानो हस्तिनं व्यालं वा द्रव्यहेतोः प्रतियोधयेयुस्ते तीक्ष्णाः। ये बन्धुषु निस्स्नेहाः क्रूराश्चालसाश्च ते रसदाः। परिव्राजिका वृत्तिकामा दरिद्रा विधवा प्रगल्भा ब्राह्मण्यन्तःपुरे कृतसत्कारा महामात्रकुलान्यधिगच्छेत्।

CC-0. In Public Domain. Cuddalore Collection. TN.

Digitization by eGangotri-South Center

एतया मुण्डावृषल्यो व्याख्याताः। इति सञ्चाराः।।

(इति सप्तमाधिकरणशेषः)

तेषां नियोजनक्रमः -

तान् राजा स्वविषये मन्त्रि-पुरोहित-सेनापति-युवराज-दौवारिकान्तर्वंशिक-प्रशास्तृ-समाहर्तृ-सन्निधातृ-प्रदेष्टृनायकपौरव्यावहारिक-कार्मान्तिक-मन्त्रि-परिषद-ध्यक्ष-दण्ड-दुर्गान्तपालाटविकेषु श्रद्धेयदेशवेषशिल्पभाषाभिजनापदेशान् भक्तितस्सामर्थ्ययोगाच्चापसर्पयेत्।।

तैः मन्त्रिप्रभृतीनां बाह्यवर्तनपरिज्ञानकामः -

तेषां बाह्यं चारं छत्रभृङ्गार व्यजनपादुकासनयानवाहनोपग्राहिणः तीक्ष्णा विद्युः। तं सत्रिणः संस्थास्वर्पयेयुः।।

तेषां आन्तरवर्तनपरिज्ञानक्रमः -

सूदारालिकस्नापकसंवाहकाऽस्तरककल्पकप्रसाधकोद कपरिचारका रसदाः कुब्जवा मनकिरातमूकबधिरजडान्धच्छद्मानो नटनर्तक गायनवादकवाग्जीवन-कुशीलवाः स्त्रियश्चाभ्यतरं चारं विद्युः। तं भिक्षुक्यः संस्थास्वर्पयेयुः।।

एवं ज्ञातानां तदीयवृत्तानां राज्ञि निवेदनविधिः -

संस्थानामन्तेवासिनः संज्ञालिपिभिश्चारसञ्चारं कुर्युः। न चान्योन्यं संस्थास्ते वा विद्युः। भिक्षुकीप्रतिषेधे द्वास्स्थपरम्परा मातापितृव्यञ्जनाः शिल्पकारिकाः कुशीलवा दास्यो वा गीतवाद्यभाण्डगूढालेख्यसंज्ञाभिर्वा चारं निर्हरेयुः। दीर्घरोगोन्मादाग्निरसविसर्गेण वा गूढनिर्गमनम्।।

राज्ञा तत्परीक्षाः -

त्रयाणामेकवाक्ये सम्प्रत्ययः। तेषामभीक्ष्णविनिपाते तूष्णींदण्डः प्रतिषेधो वा।।

CC-0. In Public Domain. Cuddalore Collection. TN.

Digitization by eGangotri-South Center

जाग्रता राज्ञा परराष्ट्रवृत्तान्तावेदनविधिः -

कण्टकशोधनोक्तश्चापसर्पाः परेषु कृतवेतनाः वसेयुः, सम्पातश्चोरार्थम्। त उभयवेतनाः।

गृहीतपुत्रदाराश्च कुर्यादुभयवेतनान्।
तांश्चारिप्रहितान् विद्यात्तेषां शौचं च तद्विधैः ।।१९।।
एवं शत्रौ च मित्रे च मध्यमे चावपेच्चरान्।
उदासीने च तेषां च तीर्थेष्वष्टादशस्वपि।।२०।।

गूढचाराणां वासाद्यानुकूल्यकल्पनविधिः -

अन्तर्गृहचरास्तेषां कुब्जवामनषण्डकाः।
शिल्पवत्यः स्त्रियो मूकाश्चित्राश्च म्लेच्छजातयः।।२१।।

दुर्गेषु वणिजस्संस्था दुर्गान्ते सिद्धतापसाः।
कर्षकोदास्थिता राष्ट्रे राष्ट्रान्ते व्रजवासिनः।।२२।।

वने वनचरैः कार्याश्श्रमणाटविकादयः।
परप्रवृत्तिज्ञानार्थाः शीघ्राश्चारपरम्पराः।।२३।।

परस्य चैके बोद्धव्याः तादृशैरेव तादृशाः।
चारसञ्चारिणस्संस्था गूढाश्चागूढसंज्ञिताः।।२४।।

अकृत्यान् कृत्यपक्षीयैः दर्शितान् कार्यहेतुभिः।
परापसर्पज्ञानार्थं मुख्यानन्तेषु वासयेत्।।२५।।

इति विनयाधिकारिके गूढपुरुषोत्पत्तौ सञ्चारोत्पत्तिः गूढपुरुषप्रणिधिश्च द्वादशोऽध्यायः (१२)

CC-0. In Public Domain. Cuddalore Collection. TN.

Digitization by eGangotri-South Center

1.2.1 ಕನ್ನಡಾನುವಾದ

ಪ್ರಕರಣ - 8 ಗೂಢಪುರುಷ ಪ್ರಣಿಧಿ

ಅಧ್ಯಾಯ - 12

ಸಂಚಾರರು

ಸಂಬಂಧಿಗಳಲ್ಲದ ಆದರೆ ಪೋಷಿಸಲೇ ಬೇಕಾದವರಾಗಿದ್ದು ಸಾಮುದ್ರಿಕ ಶಾಸ್ತ್ರ, ಅಂಗವಿದ್ಯೆ, ವಶೀಕರಣ, ಇಂದ್ರಜಾಲ, ಆಶ್ರಮಧರ್ಮ, ಶಕುನ, ಪಕ್ಷಿಶಕುನ - ಇವುಗಳನ್ನು ಅಭ್ಯಸಿಸುತ್ತಿರುವವರು ಅಥವಾ ಸಂಸರ್ಗದಿಂದ ವಿದ್ಯೆಯನ್ನು ಕಲಿಯುತ್ತಿರುವವರು ಸತ್ರಿಗಳು.

ಹಳ್ಳಿಗಾಡಿನಲ್ಲಿ ಶೂರರಾದವರು, ತಮ್ಮ ಜೀವಿತ ನಿರಪೇಕ್ಷರು, ಹಣಕ್ಕಾಗಿ ಆನೆ ಅಥವಾ ಹುಲಿಯೊಡನೆ ಸೆಣಸುವವರು ತೀಕ್ಷ್ಣರು.

ಬಾಂಧವರಲ್ಲಿಯೂ ಸ್ನೇಹವಿಲ್ಲದ ಕ್ರೂರಿಗಳು, ಚಟುವಟಿಕೆಯಿಲ್ಲದವರು ರಸದರು.

ವೃತ್ತಿಯನ್ನು ಅಪೇಕ್ಷಿಸುವವಳು, ದರಿದ್ರಳು, ವಿಧವೆ, ಚತುರೆ, ಬ್ರಾಹ್ಮಣಿ, ಅಂತಃಪುರದಲ್ಲಿ ಗೌರವಕ್ಕೆ ಪಾತ್ರಳಾದವಳು, ಮಹಾಮಾತ್ಯರ ಮನೆಗೆ ಹೋಗಿಬರುವಂಥವಳು ಪರಿವ್ರಾಜಿಕೆ (ಭಿಕ್ಷುಕಿ). ಇವಳ ಹಾಗೇ 'ಮುಂಡಾ' ಮತ್ತು 'ವೃಷಲೀ'ಗಳನ್ನೂ ತಿಳಿಯುವುದು. ಇವರುಗಳು (ಸತ್ರಿ, ತೀಕ್ಷ್ಣ, ರಸದ ಮತ್ತು ಪರಿವ್ರಾಜಿಕೆ) ಸಂಚಾರಕರು.

ಸಂಚಾರರ ಗೂಢಚರ್ಯೆಯ ರೀತಿ :

ದೇಶ, ವೇಷ, ಶಿಲ್ಪಕಲೆ, ಭಾಷೆ, ಜಾತಿ ಅಥವಾ ವಂಶ - ಇವುಗಳ ದೃಷ್ಟಿಯಿಂದ ನಂಬಲರ್ಹವಾದ ಸೋಗು ಹಾಕಿಕೊಳ್ಳಬಲ್ಲ ಅವರನ್ನು, ಭಕ್ತಿ ಹಾಗೂ ಸಾಮರ್ಥ್ಯವನ್ನು ಅನುಸರಿಸಿ ರಾಜನು ತನ್ನ ರಾಜ್ಯದಲ್ಲಿ ಮಂತ್ರಿ, ಪುರೋಹಿತ, ಸೇನಾಪತಿ, ಯುವರಾಜ, ದೌವಾರಿಕ, ಅಂತರ್ವಂಶಿಕ, ಪ್ರಶಾಸ್ತ್ರ, ಸಮೂಹರ್ತೃ, ಸನ್ನಿಧಾತೃ, ಪ್ರದೇಷ್ಟೃ, ನಾಯಕ, ಪೌರವ್ಯವಹಾರಿಕ, ಕಾರ್ಮಾಂತಿಕ, ಮಂತ್ರಿ ಪರಿಷದ್-ಅಧ್ಯಕ್ಷ, ದಂಡಪಾಲ, ದುರ್ಗಪಾಲ, ಅಂತಪಾಲ, ಆಟವಿಕ - ಈ ಹದಿನೆಂಟು ಅಧಿಕಾರಿಗಳ ಬಳಿ ಕಳುಹಿಸುವುದು.

CC-0. In Public Domain. Cuddalore Collection. TN.

Digitization by eGangotri-South Center

ಅವರುಗಳ (ಮೇಲ್ಕಂಡ 18 ಅಧಿಕಾರಿಗಳ) ಹೊರ ಸಮಾಚಾರವನ್ನು ಛತ್ರ, ಭೃಂಗಾರ (ಕಲಶ), ವ್ಯಜನ (ಬೀಸಣಿಗೆ), ಪಾದುಕಾಗಳನ್ನು ಹಿಡಿಯುವ, ಸಿಂಹಾಸನ, ರಥ ಅಥವಾ ವಾಹನಗಳಲ್ಲಿದ್ದಾಗ ಸೇವೆ ಮಾಡುವ ತೀಕ್ಷ್ಣರು ತಿಳಿಯುತ್ತಾರೆ. (ಅವರಿಂದ ಆ ಸಮಾಚಾರವನ್ನು) ಸತ್ರಿಗಳು ಸಂಸ್ಥೆಗಳಿಗೆ ತಲುಪಿಸುವರು.

(ಅವರುಗಳ) ಒಳ ಸಮಾಚಾರವನ್ನು ಅಡುಗೆಮಾಡುವ, ತಿಂಡಿಮಾಡುವ, ಸ್ನಾನಮಾಡಿಸುವ, ಮೈ ತೀಡುವ, ಹಾಸಿಗೆ ಹಾಸುವ, ಕ್ಷೌರಮಾಡುವ, ಅಲಂಕರಿಸುವ, ನೀರೊದಗಿಸುವ ಕೆಲಸಗಳನ್ನು ಮಾಡುವ ರಸದರೂ, ಕುಬ್ಜ, ವಾಮನ, ಕಿರಾತ, ಮೂಕ, ಬಧಿರ, ಜಡ, ಅಂಧರಂತೆ ವೇಷಹಾಕಿ ಕೊಳ್ಳುವವರೂ, ನಟ, ನರ್ತಕ, ಗಾಯಕ, ವಾದಕ, ಕಥೆ ಹೇಳುವವರು, ಕುಶೀಲವ - ಇವರೂ, ಸ್ತ್ರೀಯರೂ ತಿಳಿಯುತ್ತಾರೆ. ಅದನ್ನು ಭಿಕ್ಷುಕಿಯರು ಸಂಸ್ಥಾನಗಳಿಗೆ ತಲುಪಿಸುವರು.

(ಸತ್ರಿಗಳೂ ಭಿಕ್ಷುಕಿಯರೂ ಸಮಾಚಾರಗಳನ್ನು ತಲುಪಿಸಿದ ಮೇಲೆ) ಸಂಸ್ಥೆಗಳಲ್ಲಿರುವ ಮುಖ್ಯ ಪುರುಷರು ಸಂಜ್ಞೆ ಲಿಪಿಗಳ ಮೂಲಕ ತಮ್ಮ ಚಾರರ ಏರ್ಪಾಟನ್ನು ಮಾಡುತ್ತಾರೆ. ಆದರೆ ಹಾಗೆ ನಿಯೋಜಿತರಾದ ಸಂಸ್ಥಾ(ಚಾರರು)ಗಳಾಗಲೀ, ಸತ್ರಿ-ಭಿಕ್ಷುಕಿಯರಾಗಲೀ ಪರಸ್ಪರ (ಅಂತೇವಾಸಿಗಳ) ಈ ಏರ್ಪಾಟನ್ನು ತಿಳಿಯಬಾರದು.

(ಭಿಕ್ಷುಕಿಯು ಸುದ್ದಿಸಂಗ್ರಹಕ್ಕೆ ಹೋದಾಗ) ಭಿಕ್ಷುಕಿಯನ್ನು (ಅಧಿಕಾರಿಗಳ) ಮನೆಯೊಳಕ್ಕೆ ಬಿಡದೇ ತಡೆದರೆ, ಪ್ರತಿಬಾಗಿಲಿನಲ್ಲಿದ್ದು ಒಬ್ಬರಿಂದೊಬ್ಬರಿಗೆ ತಾಯಿ-ತಂದೆ ಎಂಬ ಸೋಗಿನಲ್ಲಿರುವವರು, ಶಿಲ್ಪಕೆಲಸದವರು, ಕುಶೀಲವರು, ಅಥವಾ ದಾದಿಯರು, ಹಾಡಿನ ಮೂಲಕ, ಗೂಢಲೇಖದ ಮೂಲಕ, ಅಥವಾ ಸಂಜ್ಞೆಗಳ ಮೂಲಕ ಸುದ್ದಿಯನ್ನು ಮುಟ್ಟಿಸುವರು. ದೀರ್ಘರೋಗದ ನೆಪದಿಂದ, ಹುಚ್ಚು, ಬೆಂಕಿ, ವಿಷ - ಈ ಕಾರಣಗಳಿಂದ ಅಥವಾ ಕೆಲಸದಿಂದ ಬಿಡಿಸಿದ ಕಾರಣದಿಂದಲೇ ಗುಟ್ಟಾಗಿ ಹೊರಹೋಗುವುದು.

ಮೂವರು ಚಾರರ ಮಾತು ಒಂದೇ ಆದರೆ, ಆ ಸುದ್ದಿ ನಂಬಲರ್ಹವಾದುದು. ಯಾರ ಸುದ್ದಿ ಮೇಲಿಂದ ಮೇಲೆ ವ್ಯತ್ಯಾಸವಾಗುತ್ತದೆಯೋ ಅಂಥವರಿಗೆ ಗುಟ್ಟಾಗಿ ಶಿಕ್ಷೆ ವಿಧಿಸುವುದು ಇಲ್ಲವೆ (ಗೂಢಚರ್ಯೆ ಕೆಲಸ ಮಾಡದಂತೆ) ತಡೆಯುವುದು.

ಕಂಟಕ ಶೋಧನೆಯ ಸಂದರ್ಭದಲ್ಲಿ ಹೇಳಲಾಗುವ ಗೂಢ ಪುರುಷರೂ ಸಹ ವೇತನ ಸ್ವೀಕರಿಸುವವರಾಗಿ ಇತರ ರಾಷ್ಟ್ರಗಳಲ್ಲಿ ವಾಸಿಸತಕ್ಕದ್ದು. ಸಂಪಾತಶ್ಚೋರಾರ್ಥಕ್ಕಾಗಿರುವವರು ಉಭಯವೇತನರಾಗಿರುತ್ತಾರೆ.

CC-0. In Public Domain. Cuddalore Collection. TN.

Digitization by eGangotri-South Center

ಉಭಯವೇತನರ ಹೆಂಡತಿ ಮಕ್ಕಳನ್ನು ಹಿಡಿದಿಟ್ಟುಕೊಂಡಿರಬೇಕು; ಅವರನ್ನು ಶತ್ರುಗಳಿಂದ ಕಳುಹಿಸಲ್ಪಟ್ಟವರೆಂದೂ, ಅವರ ಶೌಚವನ್ನು ಅಂಥವರೇ ಆದ ತನ್ನ ಸೇವಕರಿಂದಲೂ ತಿಳಿಯಬೇಕು.

ಈ ರೀತಿಯಾಗಿ ಶತ್ರುಗಳಲ್ಲಿ, ಮಿತ್ರರಲ್ಲಿ, ಮಧ್ಯಮರಲ್ಲಿ ಹಾಗೂ ಉದಾಸೀನರಲ್ಲಿ ಅಲ್ಲದೆ ಅವರ ಹದಿನೆಂಟು ಅಧಿಕಾರಿಗಳಲ್ಲಿ ಚಾರರನ್ನು ಕಳುಹಿಸುವುದು.

ಇವರುಗಳ ಅಂತಃಪುರಗಳಲ್ಲಿ ಸಂಚರಿಸುವಂಥವರು - ಕುಬ್ಜರು, ವಾಮನರು, ಷಂಡರು, ಶಿಲ್ಪಗಳನ್ನು ಅರಿತ ಸ್ತ್ರೀಯರು, ಮೂಕರು, ನಾನಾ ವರ್ಗದ ಮ್ಲೇಚ್ಛಜಾತಿಯವರು; ದುರ್ಗಗಳೊಳಗೆ ವರ್ತಕರು, ಸಂಸ್ಥಾನಗಳು (ಚಾರರು); ದುರ್ಗದ ಹೊರಗೆ ಸಿದ್ಧತಾಪಸರು; ಹಳ್ಳಿಗಳಲ್ಲಿ ಕರ್ಷಕರು ಹಾಗೂ ಉದಾಸ್ಥಿತರು; ರಾಜ್ಯದ ಎಲ್ಲೆಯಲ್ಲಿ ಗೋಪಾಲಕರು; ಕಾಡಿನಲ್ಲಿ ವನಚರರು, ಶ್ರಮಣರು, ಅಟವಿಕರು ಮೊದಲಾದವರನ್ನು ಇರಿಸುವುದು; ನೆರರಾಜ್ಯಗಳಿಂದ ಸುದ್ದಿಯು ಶೀಘ್ರವಾಗಿ ಮುಟ್ಟುವುದಕ್ಕಾಗಿ ಚಾರಪರಂಪರೆಯನ್ನು ಏರ್ಪಡಿಸುವುದು, ಚಾರ ಸಂಚಾರವನ್ನು ಏರ್ಪಾಡು ಮಾಡುವ ಶತ್ರುಗಳ (ಆ ಕಾರಣದಿಂದ) ಗೂಢವೆನಿಸಿದ - ಈ ಸಂಸ್ಥೆಗಳನ್ನು ಅದೇ ಬಗೆಯ (ತನ್ನ, ಆಕಾರಣದಿಂದ) ಅಗೂಢವೆನಿಸಿದ (ಸಂಸ್ಥೆಗಳಿಂದ) ಪತ್ತೆ ಹಚ್ಚುವುದು, ರಾಜನಿಗೆ ಅನುಕೂಲಕ್ಕೆ ಕೈಕೊಂಡದಾದರೂ (ವಿರೋಧವಾಗಿ ಕಾಣುವ) ಕಾರ್ಯಹೇತುಗಳಿಂದ ರಾಜದ್ರೋಹಿಯಂತೆ ತೋರಿಸಲ್ಪಟ್ಟ ಮುಖ್ಯರನ್ನು ವಿದೇಶೀ ಗೂಢಚಾರರನ್ನು ಪತ್ತೆ ಹಚ್ಚಲು ರಾಜ್ಯದ ಎಲ್ಲೆಯ ಪ್ರದೇಶದಲ್ಲಿ ವಾಸಮಾಡುವಂತೆ ಮಾಡಬೇಕು.

1.2.2 ಟಿಪ್ಪಣಿ :

1 सञ्चाराः :

ಈ ಅಧ್ಯಾಯದಲ್ಲಿ ಒಂಟಿಯಾಗಿರುವ ಹಾಗೂ ಹಲವು ವೃತ್ತಿಗಳಲ್ಲಿ ತೊಡಗಿರುವ ಗೂಢಚಾರರ ಬಗೆಗೆ ಹೇಳಲಾಗಿದೆ. ಇಂಥ ಚಾರರನ್ನು ಸಂಚಾರರೆಂದು ಕರೆಯಲಾಗಿದೆ. ಇವರು ಸುದ್ದಿಗಳನ್ನು ಸಂಗ್ರಹಿಸಿ ಸಂಸ್ಥೆಗಳಿಗೆ ಒದಗಿಸುವರು. ಸಂಚಾರರು ನಾಲ್ಕು ವಿಧ : ಸತ್ರಿ, ತೀಕ್ಷ್ಣ, ರಸದ ಮತ್ತು ಭಿಕ್ಷುಕೀ.

ಇನ್ನೊಬ್ಬರು ಪೋಷಿಸಲೇ ಬೇಕಾದವರು ಎಂದರೆ, ಬಾಲ, ವೃದ್ಧ, ವ್ಯಸನಿ (ದುಃಖಕ್ಕೆ ಒಳಗಾದ) ಮತ್ತು ಅನಾಥರು. ಇಂಥವರು ಶುಕುನ ಶಾಸ್ತ್ರಗಳು,

CC-0. In Public Domain. Cuddalore Collection. TN.

Digitization by eGangotri-South Center

ಸಾಮುದ್ರಿಕಶಾಸ್ತ್ರ, ವಶೀಕರಣ ವಿದ್ಯೆ, ಮೊದಲಾದುವನ್ನು ಅರಿತಿದ್ದರೆ ಅಂಥವರನ್ನು ಗೂಢಚರರನ್ನಾಗಿ ತೆಗೆದುಕೊಳ್ಳುವುದು. ಇವರನ್ನು ಸತ್ರಿಗಳೆಂದು ಕರೆಯುತ್ತಾರೆ.

ಹಣಕ್ಕಾಗಿ ಏನು ಬೇಕಾದರೂ ಮಾಡುವುದಕ್ಕೆ, ಹುಲಿಯೊಡನೆ ಕಾದಾಡುವುದಕ್ಕೂ ಸಿದ್ಧರಾಗಿರುವವರು ಮತ್ತು ಬೇರೆ ಬೇರೆ ವೃತ್ತಿಗಳಲ್ಲಿರುವವರು ಗೂಢಚಾರರಾರಗಬಲ್ಲರು. ಇವರು ತೀಕ್ಷ್ಣರು.

ಕ್ರೂರಿಗಳೂ, ಒರಟು ಸ್ವಭಾವದವರೂ ರಸದರು ಸ್ವತಂತ್ರಗಳಾಗಿರುವ ಹೆಂಗಸು ವೃತ್ತಿಕಾಮಳಾಗಿದ್ದರೆ ಅವಳನ್ನು ಗೂಢಚಾರಳನ್ನಾಗಿ ತೆಗೆದುಕೊಳ್ಳುವುದು. ಇವಳನ್ನು ಪರಿವ್ರಾಜಿಕೆ (ಅಥವಾ ಭಿಕ್ಷುಕೀ) ಎನ್ನುವರು. 'ಮುಂಡಾ' ಅಥವಾ 'ವೃಷಲೀ'ಗಳನ್ನೂ ಇವಳಂತೆಯೇ ತಿಳಿಯುವುದು ಇವರುಗಳು ಸಂಚಾರರು.

ಇವರುಗಳಲ್ಲಿ ಸತ್ರಿ-ಭಿಕ್ಷುಕಿಯರು ಯಾರಲ್ಲಿಯೂ ಪರಿಚಾರಿಕೆಯಲ್ಲಿ ಇರುವುದಿಲ್ಲ. ಸೇವಾವೃತ್ತಿಗಳಲ್ಲಿರುವ ತೀಕ್ಷ್ಣ, ರಸದ ಮೊದಲಾದವರಿಂದ ಸುದ್ದಿಗಳನ್ನು ಸಂಸ್ಥೆಗಳಿಗೆ ಮುಟ್ಟಿಸುವವರು.

ಇವರುಗಳು ಪ್ರಧಾನವಾಗಿ ಹದಿನೆಂಟು ತೀರ್ಥಗಳೆನಿಸಿದ ಮಂತ್ರಿ-ಪುರೋಹಿತಾದಿ ಅಧಿಕಾರಿಗಳ, ಅವರ ಕೆಲಸಕಾರ್ಯಗಳ ಬಗೆಗೆ ಮಾಹಿತಿಗಳನ್ನು ಸಂಗ್ರಹಿಸುವರು.

2 अङ्गविद्या :

ಅಂಗವಿದ್ಯೆಯೆಂದರೆ ದೇಹದ ಅಂಗಗಳ ಚಲನೆಗೆ ಅರ್ಥ ಹೇಳುವ ವಿದ್ಯೆ. अङ्गलक्षणशास्त्रं अङ्गविद्या ಎಂದು ಚಂದ್ರಿಕಾ ಟಿಪ್ಪಣಿ ಹೇಳಿದೆ. ಡಾ.ಶಾಮಶಾಸ್ತ್ರಿಗಳ ಅನುವಾದದಲ್ಲಿ ಹಸ್ತಸಾಮುದ್ರಿಕ ಶಾಸ್ತ್ರ ಎಂದಿದೆ.

3 संसर्गविद्याः :

ನೃತ್ತಗೀತ ವಾದ್ಯ ಇತ್ಯಾದಿಗಳನ್ನು ಸಂಸರ್ಗವಿದ್ಯೆಗಳು ಎನ್ನುತ್ತಾರೆ. ಚಂದ್ರಿಕಾ ಟಿಪ್ಪಣಿಯು संसर्गविद्याः गीतनृत्यादिविद्याः ಎಂದಿದೆ.

4 तीर्थ :

ಮಂತ್ರಿ, ಪುರೋಹಿತ ಮೊದಲಾದ ಹದಿನೆಂಟು ಅಧಿಕಾರಿಗಳನ್ನು ತೀರ್ಥಗಳೆಂದು

CC-0. In Public Domain. Cuddalore Collection. TN.

Digitization by eGangotri-South Center

ಕರೆಯಲಾಗಿದೆ. ಅವರುಗಳನ್ನು मन्त्रिप्रभृति अष्टादशराष्ट्रसम्पत् ಎಂದು ಕರೆದಿದ್ದಾರೆ. ರಾಜ್ಯದ ಸಮೃದ್ಧಿಯೇ ಇವುಗಳನ್ನು ಆಧರಿಸಿದೆ. ರಾಜನ ಆಧ್ಯಾತ್ಮಿಕ ಮತ್ತು ರಾಜಕೀಯ ವ್ಯವಹಾರಗಳಲ್ಲಿ ಸಹಾಯ ಮಾಡುವವರು ತೀರ್ಥರೆಂದು ನೀತಿ ವಾಕ್ಯಾಮೃತ ತಿಳಿಸುತ್ತದೆ. ("धर्मसमवायिनः कार्यसमवायिनश्च पुरुषास्तीर्थः").

5. संज्ञालिपिः :

ಮೊದಲೇ ಒಪ್ಪಿಕೊಂಡಿರುವ ಗುಟ್ಟಾದ ಶಬ್ದಗಳು; ಗೂಢವಾದ ಆ ಭಾಷೆಯನ್ನು ಸಂಜ್ಞೆಗಳ ಮೂಲಕ ತಿಳಿಸಲಾಗುತ್ತದೆ. ಅದು ಬೇರಾರಿಗೂ ತಿಳಿಯ ಬಾರದೆನ್ನುವುದೇ ಉದ್ದೇಶ.

6. उभयवेतनाः :

ತಮ್ಮ ರಾಜ್ಯ ಹಾಗೂ ಹಾಲಿ ತಾವಿರುವ ರಾಜ್ಯದ ವೇತನಗಳನ್ನು ಪಡೆಯುವವರು ಉಭಯವೇತನರು. ಇಂಥ ಉಭಯ ವೇತನದವರ ಹೆಂಡತಿ ಮಕ್ಕಳನ್ನು ಗುಪ್ತವಾಗಿಟ್ಟಿರಬೇಕು. ಇದಕ್ಕೆ ಕಾರಣ ಆ ಅಧಿಕಾರಿ ಓಡಿ ಹೋಗದಿರುವುದು. ಜಯಮಂಗಲಾ

7. 'प्रच्छन्नगुप्तदारान् दानमानाभ्यां वा गृहीत पुत्रदारान् कुर्यात् अव्यभिचारार्थम्' ಎಂದಿದೆ.

8. गूढाश्चागूढसंज्ञि :

ರಾಜನಿಗೆ ತಿಳಿದಿರುವ ಚಾರರು ಅಗೂಢ ಚಾರರು. ರಾಜನಿಗೆ ಪರಿಚಿತರಲ್ಲದ ಚಾರರು ಗೂಢ ಚಾರರು. ಏಕೆಂದರೆ ಚಾರರು ಸ್ವದೇಶದವರೂ ವಿದೇಶದವರೂ ಇರುತ್ತಾರೆ. ಸ್ವದೇಶದವರು ಪರಿಚಿತರು; ವಿದೇಶದವರು ಅಪರಿಚಿತರಾದ್ದರಿಂದ ಗೂಢರು. ಹಾಗಾಗಿ ರಾಜನು ಅಗೂಢರಿಂದ ಗೂಢರನ್ನು ಪತ್ತೆ ಹಚ್ಚಬೇಕು.

CC-0. In Public Domain. Cuddalore Collection. TN.

Digitization by eGangotri-South Center

1.3 पाठ्यभागः

९. प्रकरणम् - स्वविषये कृत्याकृत्यपक्षरक्षणम् १३-अध्यायः

स्वराष्ट्रीयाणां राज्ञि अनुरागापरागादिपरिज्ञानविधिः -

गूढपुरुषप्रणिधिः कृतमहामात्यापसर्पः पौरजानपदानपसर्पयेत्। सत्रिणो द्वन्द्विनस्तीर्थसभाशालापूगजनसमवायेषु विवादं कुर्युः। - 'सर्वगुणसम्पन्नश्चायं राजा श्रूयते। न चास्य कश्चित् गुणो दृश्यते यः पौरजानपदान् दण्डकराभ्यां पीडयति' इति।।

अपरागिणां बुद्धिवादेन समीकरणम् -

तत्र येऽनुप्रशंसेयुः तानितरस्तं च प्रतिषेधयेत् - 'मात्स्यन्यायाभिभूताः प्रजाः मनुं वैवस्वतं राजानं चक्रिरे। धान्यषड्भागं पण्यदशभागं हिरण्यं चास्य भागधेयं प्रकल्पयामासुः तेन भृताः राजानः प्रजानां योगक्षेमवहाः। तेषां किल्बिषमदण्डकराः हरन्त्ययोगक्षेमवहाश्च प्रजानाम्। तस्मादुञ्छषड्भागमारण्यका अपि निवपन्ति। तस्यैतद्भागधेयं योऽस्मान् गोपायतीति। इन्द्रयमस्थानमेतत् राजानः प्रत्यक्षहेडप्रसादाः। तानवमन्यमानान् दैवोऽपि दण्डः स्पृशति। तस्माद्राजानो नावमन्तव्याः' इति क्षुद्रकान् प्रतिषेधयेत्।।

अत्र जनप्रवादपरिज्ञानस्याप्यावश्यकता -

किंवदन्तीं च विद्युः। ये चास्य धान्यपशुहिरण्यान्याजीवन्ति तैरुपकुर्वन्ति, व्यसने अभ्युदये वा, कुपितं बन्धुं राष्ट्रं वा व्यावर्तयन्त्यमित्रमाटविकं वा प्रतिषेधयन्ति, तेषां मुण्डजटिलव्यञ्जनास्तुष्टातुष्टत्वं विद्युः।।

प्रजासु तुष्टातुष्टविषये वर्तनक्रमाः -

तुष्टान् भूयः पूजयेत्। अतुष्टात् तुष्टिहेतोस्त्यागेन साम्ना च प्रसादयेत्। परस्पराद्वा भेदयेदेनान् सामन्ताटविकतत्कुलीनावरुद्धेभ्यश्च। तथाऽप्यतुष्यतो

CC-0. In Public Domain. Cuddalore Collection. TN.

Digitization by eGangotri-South Center

दण्डकरसाधनाधिकारेण वा जनपदविद्वेषं ग्राहयेत्। विद्विष्टानुपांशुदण्डेन जनपदकोपेन वा साधयेत्। गुप्तपुत्रदारानाकरकर्मान्तेषु वा वासयेत् परेषामास्पदभयात्॥

स्वराष्ट्रे क्रुद्धादिकृत्याकृत्यरक्षणविधिः -

क्रुद्धलुब्धभीतावमानिनस्तु परेषां कृत्याः। तेषां कार्तान्तिकनैमित्तिकमौहूर्तिकव्यञ्जनाः परस्पराभिसम्बन्धं अमित्रप्रतिसम्बन्धं वा विद्युः। तुष्टानर्थमानाभ्यां पूजयेत्। अतुष्टान् सामदानभेददण्डैस्साधयेत्॥

एवं स्वविषये कृत्यानकृत्यांश्च विचक्षणः।

परोपजापात् संरक्षेत् प्रधानान् क्षुद्रकानपि॥२६॥

इति विनयाधिकारिके स्वविषये कृत्याकृत्यपक्षरक्षणं त्रयोदशोऽध्यायः (१३)

1.3.1 ಕನ್ನಡಾನುವಾದ

ಪ್ರಕರಣ - 9

ಅಧ್ಯಾಯ - 13

ತನ್ನ ರಾಜ್ಯದಲ್ಲಿ ಕೃತ್ಯ - ಅಕೃತ್ಯಗಳ ರಕ್ಷಣೆ

ಮಹಾಮಾತ್ರರಲ್ಲಿ ಗೂಢಚಾರರನ್ನು ಸ್ಥಾಪಿಸಿದ ರಾಜನು ಪೌರರನ್ನು ಮತ್ತು ಜಾನಪದರನ್ನು ಚಾರರ ಮೂಲಕ ಪರೀಕ್ಷಿಸತಕ್ಕದ್ದು.

ಸತ್ರಿಗಳು ಪ್ರಸಿದ್ಧವುಳ್ಳ ಎರಡು ಗುಂಪುಗಳಾಗಿ ತೀರ್ಥ, ಸಭೆ, ಶಾಲೆ, ಪೂಗ ಹಾಗೂ ಜನ ಸೇರುವೆಡೆಯಲ್ಲಿ ವಿವಾದ ಮಾಡುವರು. (ಒಂದು ಗುಂಪಿನ ಒಬ್ಬ ನುಡಿಯುತ್ತಾನೆ:) "ಸರ್ವಗುಣಸಂಪನ್ನನೆಂದು ಈ ರಾಜನನ್ನು ಕೆಲವರು ಹೇಳುತ್ತಾರೆ; ಆದರೆ ದಂಡ ಹಾಗೂ ಕರಗಳಿಂದ ಪೌರರನ್ನೂ ಜಾನಪದರನ್ನೂ ಪೀಡಿಸುವ ಇವನಲ್ಲಿ ಯಾವ ಗುಣವೂ ಇಲ್ಲ."

ಆ ಗುಂಪಿನವರು ಅವನನ್ನು ಅನುಮೋದಿಸುವರು. ಅವರನ್ನು (ಇನ್ನೊಂದು

CC-0. In Public Domain. Cuddalore Collection. TN.

Digitization by eGangotri-South Center

ಗುಂಪಿನ) ಇನ್ನೊಬ್ಬನು ಹೀಗೆ ತಡೆಯಬೇಕು : (ಹಿಂದೆ) ಮಾತ್ಸ್ಯನ್ಯಾಯದಿಂದ ತೊಳಲಿದ ಪ್ರಜೆಗಳು ವೈವಸ್ವತ ಮನುವನ್ನು ರಾಜನನ್ನಾಗಿ ಮಾಡಿದರು. (ಬೆಳೆದ) ಧಾನ್ಯದಲ್ಲಿ ಆರನೇ ಒಂದು ಭಾಗ, ಮಾರುವುದರ ಹತ್ತನೇ ಒಂದು ಭಾಗ ಮತ್ತು ಚಿನ್ನ - ಇವುಗಳನ್ನು ಅವನಿಗೆ ಕೊಡಬೇಕಾದುದೆಂದು ಆದೇಶ ಮಾಡಿದರು. ಅದರಿಂದ ಪೋಷಿತರಾದ ರಾಜರು ಪ್ರಜೆಗಳ ಯೋಗಕ್ಷೇಮವನ್ನು ಪಾಲಿಸುವವರು ಆಗುತ್ತಾರೆ. ಅವರ (ರಾಜರ) ಪಾಪವನ್ನು ದಂಡಕರಗಳನ್ನು ಕೊಡದ (ಪ್ರಜೆಗಳು) ಮತ್ತು ಯೋಗಕ್ಷೇಮ ನೋಡಿಕೊಳ್ಳುವ (ರಾಜರು) ಪ್ರಜೆಗಳ (ಪಾಪವನ್ನು) ತೆಗೆದುಕೊಳ್ಳುತ್ತಾರೆ. ಈ ಕಾರಣದಿಂದಲೇ ಅರಣ್ಯದಲ್ಲಿ ವಾಸಮಾಡುವವರೂ (ವಾನಪ್ರಸ್ಥ-ತಾಪಸಾದಿಗಳು) ಸಹ ಸಂಗ್ರಹಿಸಿದ ಕಾಳುಗಳಲ್ಲಿ (ಆಹಾರವಸ್ತು) ಆರನೇ ಒಂದು ಭಾಗವನ್ನು "ಯಾವನು ನಮ್ಮನ್ನು ಕಾಪಾಡುತ್ತಾನೆಯೋ, ಅವನಿಗೆ ಕೊಡಬೇಕಾದ ಭಾಗವಿದು" ಎಂದು ಅರ್ಪಿಸುತ್ತಾರೆ. ಕಣ್ಣೆದುರಿಗೆ ನಿಗ್ರಹ-ಅನುಗ್ರಹ ಶಕ್ತಿಯುಳ್ಳ ರಾಜರ ಸ್ಥಾನವು ಇಂದ್ರ-ಯಮರ ಸ್ಥಾನ. ಅವರನ್ನು ಕಡೆಗಣಿಸುವವನಿಗೆ ದೈವವೂ ಶಿಕ್ಷೆಯನ್ನು ವಿಧಿಸುತ್ತದೆ. ಆದ್ದರಿಂದ ರಾಜರ ಅವಮಾನವನ್ನು ಮಾಡಬಾರದು. ಈ ರೀತಿ ಸಾಮಾನ್ಯರನ್ನು, ಕೆಳಮಟ್ಟದ ಅಧಿಕಾರಿಗಳನ್ನು ಪ್ರತಿಭಟಿಸಬೇಕು. (ರಾಜದ್ರೋಹಿಗಳ ಬಾಯಿ ಮುಚ್ಚಿಸಬೇಕು.)

(ಈ ಸತ್ರಿಗಳು) ಜನಜನಿತ ಸುದ್ದಿಗಳನ್ನು ತಿಳಿಯುತ್ತಾರೆ. ಯಾರು ಅವನ (ರಾಜನ) ಧಾನ್ಯ-ಪಶು-ಹಿರಣ್ಯಗಳಿಂದ ಬದುಕುತ್ತಾರೆಯೋ, ಅಥವಾ ದುಃಖದ ಸ್ಥಿತಿಯಲ್ಲಿ ಆಗಲೀ ಅಭ್ಯುದಯದ ಸ್ಥಿತಿಯಲ್ಲಿ ಆಗಲೀ ಯಾರು ಅವುಗಳಿಂದ (ಧಾನ್ಯಾದಿಗಳ ಸಂಗ್ರಹದಿಂದ) (ರಾಜನನ್ನು) ಉಪಕರಿಸುತ್ತಾರೆಯೋ, (ಯಾರು) ಕೋಪಗೊಂಡ ಬಂಧುವನ್ನು (ರಾಜನ ಬಂಧು, ಕುಲೀನ) ಅಥವಾ ರಾಷ್ಟ್ರ (ಜನಸಮೂಹ)ವನ್ನು ಸಮಾಧಾನಗೊಳಿಸುತ್ತಾರೆಯೋ, (ಯಾರು) ಶತ್ರುವನ್ನು ಅಥವಾ ಕಾಡಿನ ಮುಖ್ಯನನ್ನು ಪ್ರತಿಷೇಧಿಸುತ್ತಾರೆಯೋ, ಅಂಥವರು (ರಾಜನ ವಿಷಯದಲ್ಲಿ) ತುಷ್ಟರಾಗಿ ಅಥವಾ ಅತುಷ್ಟರಾಗಿರುವುದನ್ನು ಮುಂಡ-ಜಟಿಲರ ಸೋಗಿನವರು ತಿಳಿಯುತ್ತಾರೆ.

ಸಂತುಷ್ಟವಾಗಿರುವವರನ್ನು ಇನ್ನಷ್ಟು ಅರ್ಥಮಾನಗಳಿಂದ ಪೂಜಿಸಬೇಕು. (ಗೌರವಿಸಬೇಕು). ತುಷ್ಟರಾಗಿಲ್ಲದವರು (ಕೋಪಗೊಂಡವರು) ತುಷ್ಟರಾಗುವ ಸಲುವಾಗಿ ತ್ಯಾಗದಿಂದಲೂ, ಸಾಮದಿಂದಲೋ ಸಮಾಧಾನಪಡಿಸಬೇಕು ಅಥವಾ ಸಾಮಂತ, ಆಟವಿಕ, ತತ್‌ಕುಲೀನ, ಅವರುದ್ಧ - ಇವರುಗಳಲ್ಲಿ ಪರಸ್ಪರ ಭೇದವುಂಟು ಮಾಡುವುದು. ಹಾಗ ತುಷ್ಟಹೊಂದದವರನ್ನು ದಂಡ ಮತ್ತು ಕರಗಳನ್ನು ವಸೂಲು

CC-0. In Public Domain. Cuddalore Collection. TN.

Digitization by eGangotri-South Center

ಮಾಡುವುದರಲ್ಲಿ ನಿಯೋಜಿಸಿ ಪ್ರಜೆಗಳು ದ್ವೇಷಿಸುವಂತೆ ಮಾಡಬೇಕು. ಹಾಗೆ ದ್ವೇಷಿಸಲ್ಪಟ್ಟವರನ್ನು ಗುಟ್ಟಾದ ದಂಡ ಮತ್ತು ಜನರ ಕೋಪದ ಮೂಲಕ ನಿಗ್ರಹಿಸಬೇಕು. (ಅಂಥವರು) ಶತ್ರುಗಳಿಗೆ ಆಸ್ಪದ ಕೊಡಬಹುದೆಂಬ ಭಯದ ಕಾರಣ (ಅಂಥವರ) ಹೆಂಡತಿ ಮಕ್ಕಳನ್ನು ಬಂಧಿಸಿ (ರಹಸ್ಯ ಸ್ಥಳದಲ್ಲಿಟ್ಟು) (ಅವರನ್ನು) ಗಣಿ ಮುಂತಾದ ಕೆಲಸಗಳಲ್ಲಿ ತೊಡಗಿಸಬೇಕು.

ಕೋಪಗೊಂಡವರು, ಅತ್ಯಾಸೆಯುಳ್ಳವರು, ಹೆದರಿದವರು, ಮಾನಿಗಳು ಶತ್ರುಗಳಿಗೆ ಅನುಕೂಲರಾಗಿರುತ್ತಾರೆ. ಜ್ಯೌತಿಷಿಕ, ಶಕುನ ಹಾಗೂ ಪ್ರಶ್ನೆ ಹೇಳುವವರ ಸೋಗಿನ ಚಾರರು ಅವರುಗಳ ಪರಸ್ಪರ ಸಂಬಂಧ ಮತ್ತು ಶತ್ರುಗಳೊಡನೆ ಅವರ ಸಂಬಂಧವನ್ನು ತಿಳಿಯುವರು.

ತುಷ್ಟರಾಗಿರುವವರನ್ನು ಧನ ಗೌರವಗಳಿಂದ ಪೂಜಿಸಬೇಕು. ಅತುಷ್ಟರನ್ನು ಸಾಮ ದಾನ ಭೇದ ದಂಡಗಳಿಂದ ದಾರಿಗೆ ತರಬೇಕು.

ಈ ರೀತಿ ವಿಚಕ್ಷಣನಾದವನು ತನ್ನ ರಾಜ್ಯದಲ್ಲಿ ತನ್ನ ಪರವಾಗಿರುವ ಅಥವಾ ವಿರುದ್ಧವಾಗಿರುವ ಮುಖ್ಯ ಹಾಗೂ ಸಣ್ಣಪುಟ್ಟ ಅಧಿಕಾರಿಗಳನ್ನು ಶತ್ರುಗಳ ಕಿವಿಮಾತುಗಳಿಂದ ಕಾಪಾಡತಕ್ಕದ್ದು.

13.2 ಟಿಪ್ಪಣಿ :

ಈ ಅಧ್ಯಾಯವು ತನ್ನ ರಾಜ್ಯದಲ್ಲಿ ಕೃತ್ಯ ಮತ್ತು ಅಕೃತ್ಯದಿಂದ ರಾಜನ ರಕ್ಷಣೆಯನ್ನು ತಿಳಿಸುತ್ತದೆ. ಪುರಜನಪದಗಳಲ್ಲಿರುವ ರಾಜ್ಯಸೇವಕ ವರ್ಗದ ನಡವಳಿಕೆಯನ್ನು ರಾಜನು ಚಾರರ ಮೂಲಕ ತಿಳಿದುಕೊಳ್ಳಬೇಕು. ಅನುಕೂಲರಾಗಿರುವವರಿಗೆ ಪುರಸ್ಕಾರಗಳನ್ನಿತ್ತು ಅವರು ಪ್ರತಿಕೂಲರಾಗದಂತೆ ನೋಡಿಕೊಳ್ಳಬೇಕು. ಪ್ರತಿಕೂಲವಾಗಿರುವವರನ್ನು ಸಮಾಧಾನಪಡಿಸಲು ಸಾಮ ದಾನ ಭೇದ. ದಂಡಗಳ ಮೂಲಕ ಯತ್ನಿಸಬೇಕು.

1 कृत्याः :

ಕೌಟಿಲ್ಯನು ಇದೇ ಅಧ್ಯಾಯದಲ್ಲಿ क्रुद्धलुब्धभीतावमानिनः कृत्याः ಎಂದು ಹೇಳಿ ರಾಜನ ಮೇಲೆ ಕ್ರೋಧಿತರಾಗಿರುವವರು, ಅಧಿಕಾರ ಅಥವಾ ಸಂಪತ್ತಿಗಾಗಿ ಅತ್ಯಾಸೆಯುಳ್ಳವರ, ರಾಜನಿಂದ ಒದಗಬಹುದಾದ ಘೋರ ಶಿಕ್ಷೆಯ ಕಾರಣ

CC-0. In Public Domain. Cuddalore Collection. TN.

Digitization by eGangotri-South Center

ಹೆದರಿದವರು, ಮತ್ತು ತಮ್ಮ ಅಹಂಕಾರದ ಕಾರಣ ರಾಜನಿಂದ ಅವಮಾನಿತರಾದವರು ಕೃತ್ಯರೆಂದು ಹೇಳಿದ್ದಾನೆ. चन्द्रिका टिप्पणी ಕೃತ್ಯವನ್ನು क्रुद्धलुब्धभीतावमानिनाः शत्रुभेद्याः। ಎಂದಿದೆ. ಈ ಕೃತ್ಯರು ಶತ್ರುಗಳಿಗೆ ಸುಲಭವಾಗಿ ವಶಾರಾಗುತ್ತಾರೆ.

2 रक्षणम् :

ಚಂದ್ರಿಕಾವು परोपजापात् पालनम् रक्षणम् ಎಂದರೆ ಶತ್ರುಗಳ ಪ್ರಚೋದನಾತ್ಮಕ ತಂತ್ರಗಳಿಂದ ತನ್ನನ್ನು ರಕ್ಷಿಸಿಕೊಳ್ಳುವುದು. ಅಂದರೆ ರಾಜನಾದವನು ತನ್ನ ಚಾರರ ಮೂಲಕ ತನ್ನ ಶತ್ರುಗಳಿಂದ ತನಗೊದಗಬಹುದಾದ ವಿಷಯಗಳನ್ನು ಗಮನಿಸುವುದಲ್ಲದೆ ಅದರಿಂದ ತನ್ನನ್ನು ರಕ್ಷಿಸಿಕೊಳ್ಳಬೇಕು. ಮಾತ್ರವಲ್ಲ ತನ್ನ ಚಾರರು ಶತ್ರುರಾಜರ ಚಾರರಾಗದಂತೆಯೂ ಕ್ರಮ ಕೈಗೊಳ್ಳಬೇಕು.

1.4 पाठ्यभागः

---

१०. प्रकरणम् - परविषये कृत्याकृत्यपक्षोपग्रहः

१४-अध्यायः

परराष्ट्रे क्रुद्धादिकृत्याकृत्यस्वरूपाणि -

कृत्याकृत्यपक्षोपग्रहः स्वविषये व्याख्यातः। परविषये वाच्यः। संश्रुत्यार्थान् विप्रलब्धः, तुल्यकारिणोऽशिल्पे वोपकारे वा विमानितः, वल्लभावरुद्धः, समाहूय पराजितः, प्रवासोपतप्तः, कृत्वा व्ययमलब्धकार्यः, स्वधर्माद्दायाद्याद्वोपरुद्धः, मानाधिकाराभ्यां भ्रष्टः, तुल्यैरन्तर्हितः, प्रसभाभिमृष्टस्त्रीकः, काराभिन्यस्तः, परोक्षदण्डितः, मिथ्याचारवारितः, सर्वसमाहारितः, बन्धनपरिक्लिष्टः, प्रवासितबन्धुरिति क्रुद्धवर्गः।

स्वयमुपहतः, विप्रकृतः, पापकर्माभिख्यातः, तुल्यदोषदण्डेनोद्विग्नः, पर्यात्तभूमिः, दण्डेनोपनतः, सर्वाधिकरणस्थः, सहसोपचितार्थः, तत्कुलीनो वाऽऽशंसुः, प्रद्विष्टो राज्ञा, राजद्वेषी चेति भीतवर्गः।

परिक्षीणोऽत्यात्तस्वः कदर्यो व्यसन्यत्याहितव्यवहारश्चेति लुब्धवर्गः।

CC-0. In Public Domain. Cuddalore Collection. TN.

Digitization by eGangotri-South Center

आत्मसम्भावितो मानकामः शत्रुपूजामर्षितो नीचैरुपहितस्तीक्ष्णस्साहसिको भोगेनासन्तुष्ट इति मानिवर्गः।।

तेषु क्रुद्धे उपजापविधिः -

तेषां मुण्डजटिलव्यञ्जनैर्यो यद्भक्तिः कृत्यपक्षीयस्तं तेनोपजापयेत् - "यथा मदान्धो हस्ती मत्तेनाधिष्ठितो यद्यदासादयति तत्सर्वं प्रमृद्नात्येवमयमशास्त्रचक्षुरन्धो राजा पौरजानपदवधायाभ्युत्थितः; शक्यमस्य प्रतिहस्तिप्रोत्साहनेनापकर्तुममर्षः क्रियताम्" इति क्रुद्धवर्गमुपजापयेत्।।

भीते उपजापविधिः -

"यथा लीनस्सर्पो यस्माद्भयं पश्यति तत्र विषमुत्सृजत्येवमयं राजा जातदोषशङ्कस्त्वयि पुरा क्रोधविषमुत्सृजत्यन्यत्र गम्यताम्" इति भीतवर्गमुपजापयेत्।।

लुब्धे उपजापविधिः -

"यथा श्वगणिनां धेनुश्श्वभ्यो दुग्धे न ब्राह्मणेभ्यः, एवमयं राजा सत्त्वप्रज्ञावाक्यशक्तिहीनेभ्यो दुग्धे, नात्मगुणसम्पन्नेभ्यः। असौ राजा पुरुषविशेषज्ञस्सेव्यतामिति" लुब्धवर्गमुपजापयेत्।।

मानिनि उपजापविधिः -

"यथा चण्डालोदपानश्चण्डालानामेवोपभोग्यो नान्येषामेवमयं राजा नीचो नीचानामेवोपभोग्यो न त्वद्विधानामार्याणाम्। असौ राजा पुरुषविशेषज्ञः, तत्र गम्यतामिति" मानिवर्गमुपजापयेत्।।

CC-0. In Public Domain. Cuddalore Collection. TN.

Digitization by eGangotri-South Center

तेषां स्वराष्ट्रसंयोजनविधिः -

तथेति प्रतिपन्नांस्तान् संहितान् पणकर्मणा।
योजयेत यथाशक्ति सापसर्पान् स्वकर्मसु।।२७।।

लभेत सामदानाभ्यां कृत्यांश्च परभूमिषु।
अकृत्यान् भेददण्डाभ्यां परदोषाश्च दर्शयेत्।।२८।।

इति विनयाधिकारिके परविषये कृत्याकृत्यपक्षोपग्रहः
चतुर्दशोऽध्यायः (१४)

1.4.1 ಕನ್ನಡಾನುವಾದ

ಪ್ರಕರಣ - 10

ಅಧ್ಯಾಯ - 14

ಪರರಾಜ್ಯದಲ್ಲಿರುವ ಕೃತ್ಯ-ಅಕೃತ್ಯ ಪಕ್ಷಗಳ ವಶೀಕರಣ

ತನ್ನ ರಾಜ್ಯದಲ್ಲಿರುವ ಕೃತ್ಯಾಕೃತ್ಯ ಪಕ್ಷಗಳ ವಶೀಕರಣದ ಬಗೆಗೆ ವಿವರಿಸಿ ಆಯಿತು. ಇದೀಗ ಶತ್ರು ರಾಜ್ಯದಲ್ಲಿರುವವರ ವಶೀಕರಣವನ್ನು ಹೇಳಬೇಕು.

ಕ್ರುದ್ಧ ವರ್ಗ :

ವಿಶೇಷ ಲಾಭದ ಆಸೆ ತೋರಿಸಲ್ಪಟ್ಟು ವಂಚಿತನಾದವನು; ಶಿಲ್ಪ ವಿಷಯದಲ್ಲಿ ಅಥವಾ ಉಪಕಾರದಲ್ಲಿ ಸಮನಾಗಿ ಕೆಲಸ ಮಾಡಿದವರ ಪೈಕಿ ಅವಮಾನಿತನಾದವನು; ರಾಜನಿಗೆ ತೀರಾ ಬೇಕಾದವರಿಂದ ನಿರ್ಬಂಧಕ್ಕೆ ಒಳಗಾದವನು; ಕರೆಯಲ್ಪಟ್ಟು ಪರಾಜಿತನಾದವನು; ಪ್ರವಾಸದಿಂದ ದುಃಖಿತನಾದವನು; ಹಣ ಖರ್ಚು ಮಾಡಿಯೂ ತನ್ನ ಕೆಲಸ ಈಡೇರದೆ ಇರುವವನು; ತನ್ನ ಸ್ವಧರ್ಮವನ್ನು ಆಚರಿಸುವುದಕ್ಕೂ, ದಾಯಭಾಗವನ್ನು ಪಡೆಯುವುದಕ್ಕೂ ಅಡ್ಡಿಯುಂಟಾದವನು; ಗೌರವ ಮತ್ತು ಅಧಿಕಾರಗಳಿಂದ ಭ್ರಷ್ಟನಾದವನು; ತನ್ನ ಕುಲೀನರಿಂದ ದೂರಮಾಡಲ್ಪಟ್ಟವನು;

CC-0. In Public Domain. Cuddalore Collection. TN.

Digitization by eGangotri-South Center

ಬಲಾತ್ಕಾರವಾಗಿ ಅತ್ಯಾಚಾರಕ್ಕೆ ಒಳಗಾದ ಹೆಂಡತಿಯುಳ್ಳವನು; ಜೈಲಿಗೆ ಹಾಕಲ್ಪಟ್ಟವನು; ಇನ್ನೊಬ್ಬರ ಹೇಳಿಕೆಯ ಮೇಲೆ ಶಿಕ್ಷೆಗೆ ಒಳಗಾದವನು; ತನ್ನದೇ ಆದ ತಪ್ಪು ಕೆಲಸಗಳಿಗಾಗಿ ಎಚ್ಚರಿಕೆ ಪಡೆದವನು; ಸಂಪೂರ್ಣವಾಗಿ ಮುಟ್ಟುಗೋಲಾದ ಆಸ್ತಿಪಾಸ್ತಿಯುಳ್ಳವನು; ನಿರ್ಬಂಧದಿಂದ ಕ್ಲೇಶಹೊಂದಿದವನು, ಗಡೀಪಾರು ಆದ ಬಂಧುಗಳುಳ್ಳವನು - ಇವರುಗಳು ಕ್ರುದ್ಧವರ್ಗದವರು. (ಕೋಪಗೊಂಡವರು, ಅಸಮಾಧಾನಗೊಂಡವರು)

ಭೀತವರ್ಗ :

ತನ್ನದೇ ಆದ ತಪ್ಪಿನಿಂದ ದೋಷಯುಕ್ತನಾದವನು, ನಿಂದಿತನಾದವನು; ತನ್ನ ಪಾಪಕರ್ಮಗಳಿಂದಲೇ ಪ್ರಸಿದ್ಧನಾಗಿರುವವನು; ತನ್ನಂತೆಯೇ ತಪ್ಪು ಮಾಡಿದವರಿಗೆ ದೊರೆತ ಶಿಕ್ಷೆಯಿಂದ ಗಾಬರಿಗೊಂಡವನು; ಭೂಮಿಯನ್ನು (ಅಕ್ರಮವಾಗಿ) ಆಕ್ರಮಿಸಿರುವವನು; ಶಿಕ್ಷೆಯಿಂದ ಬಗ್ಗಿಸಲ್ಪಟ್ಟವನು; ಎಲ್ಲ ಅಧಿಕರಣದಲ್ಲಿ ಕೆಲಸ ಮಾಡುತ್ತಿರುವವನಾಗಿ ಇದ್ದಕಿದ್ದಂತೆಯೇ ಹೇರಳ ಹಣ ಗಳಿಸಿದವನು; ರಾಜನ ಕುಲದವನಾಗಿ ರಾಜನಾಗುವ ಆಸೆಯುಳ್ಳವನು; ರಾಜನ ದ್ವೇಷಕ್ಕೆ ಪಾತ್ರನಾದವನು; ರಾಜನನ್ನು ದ್ವೇಷಿಸುವವನು - ಇವರುಗಳು ಭೀತವರ್ಗದವರು. (ಹೆದರಿದವರು)

ಲುಬ್ಧವರ್ಗ :

ದಿವಾಳಿಯಾದವನು; ಬಹುಪಾಲು ಸಂಪತ್ತನ್ನು ಕಳೆದುಕೊಂಡವನು; ಜಿಪುಣ; ದುಃ ದುಶ್ಚಟಗಳುಳ್ಳವನು, ಅಪಾಯಗಳುಳ್ಳ ವ್ಯವಹಾರಕ್ಕೂ ಕೈಹಾಕುವವನು - ಇವರು ಲುಬ್ಧವರ್ಗದವರು (ಅತ್ಯಾಸೆಯುಳ್ಳವರು)

ಮಾನಿವರ್ಗ :

ತಾನೇ ಹೆಚ್ಚೆಂದು ತಿಳಿದಿರುವವನು, ಮರ್ಯಾದೆಯನ್ನು ಅಪೇಕ್ಷಿಸುವವನು; ಪ್ರತಿಕಕ್ಷಿಗೆ ಸಂದ ಗೌರವದಿಂದ ರೊಚ್ಚೆದ್ದವನು; ಹೀನರೊಡನೆ ಸೇರಿಸಲ್ಪಟ್ಟವನು; ಪರಾಕ್ರಮವುಳ್ಳವನು; ಹಿಂದು ಮುಂದು ನೋಡದೆ ನುಗ್ಗುವವನು; ಭೋಗಗಳನ್ನು ಅನುಭವಿಸುತ್ತಿದ್ದರೂ ತೃಪ್ತಿಯಿಲ್ಲದವನು - ಇವರು ಮಾನಿವರ್ಗದವರು.

CC-0. In Public Domain. Cuddalore Collection. TN.

Digitization by eGangotri-South Center

ವಶೀಕರಣ ವಿಧಾನ :

ಅವರುಗಳಿಗೆ (ಕ್ರುದ್ಧಾದಿಗಳಿಗೆ ಯಾವ ಕೃತ್ಯ ಪಕ್ಷದ ಮುಂಡ ಜಟಿಲ ವೇಷಧಾರಿ ಚಾರರಲ್ಲಿ ಭಕ್ತಿಯಿದೆಯೋ ಅಂಥವರ ಮೂಲಕ ಆಯಾ ವ್ಯಕ್ತಿಗಳಿಗೆ ಹೇಳಿಸಬೇಕು. (ಉಹಾದರಣೆಗೆ) "ಮದಾಂಧವಾದ ಆನೆಯು ಮತ್ತನಾದ ಮಾವುತನಿಂದ ನಡೆಸಲ್ಪಟ್ಟರೆ ಹೇಗೆ ಸಿಕ್ಕಿದುದನೆಲ್ಲ ನಾಶಪಡಿಸುತ್ತದೆಯೋ, ಹಾಗೆ ಶಾಸ್ತ್ರ ಕಣ್ಣಿಲ್ಲದೆ ಕುರುಡನಾದ ಈ ರಾಜನು ಪೌರಜಾನಪದರ ವಧೆಗಾಗಿ ನಿಂತಿದ್ದಾನೆ; ಶತ್ರುವನ್ನು ಪ್ರೋತ್ಸಾಹಿಸಿ ಅವನಿಗೆ ಅಪಕಾರಮಾಡಲು ಸಾಧ್ಯ; ಮನಸ್ಸು ಗಟ್ಟಿಮಾಡಿಕೊಂಡು ವಿರೋಧಿಸು" - ಎಂದು ಹೇಳಿ ಕ್ರುದ್ಧರಾದವರನ್ನು ವಶಮಾಡಿಸಿಕೊಳ್ಳಬಹುದು.

"ಬಿಲದೊಳಗಿನ ಹಾವು ಯಾವ ಕಡೆಯಿಂದ ಭಯವನ್ನು ಕಾಣುತ್ತದೆಯೋ ಆ ಕಡೆ ವಿಷವನ್ನು ಕಾರುವಂತೆ ಈ ರಾಜನು ನಿನ್ನಲ್ಲಿ ದೋಷವನ್ನು ಊಹಿಸುವವನಾಗಿ ಮೊದಲು ವಿಷವನ್ನು ಕಾರುತ್ತಾನೆ; ಬೇರೆಡೆಗೆ ಹೋಗು" - ಎಂಬುದಾಗಿ ಹೇಳಿ ಭೀತವರ್ಗದವರಿಗೆ ಕಿವಿಮಾತು ಹೇಳಬೇಕು.

"ಬೇಡರ ಹಸು ನಾಯಿಗಳಿಗೆ ಹಾಲು ಕೊಡುತ್ತದೆ, ಬ್ರಾಹ್ಮಣರಿಗಲ್ಲ. ಹಾಗೆಯೇ ಈ ರಾಜನೂ ಸತ್ಯಪ್ರಜ್ಞಾವಾಕ್ ಶಕ್ತಿಗಳಿಲ್ಲದವರಿಗೆ ಹಣ ಖಿಲ್ಲತ್ತುಗಳನ್ನು ತುಂಬುವನು. ಆತ್ಮಗುಣ ಸಂಪನ್ನರಿಗೆ ಕೊಡುವುದಿಲ್ಲ. ಪುರುಷರ ಯೋಗ್ಯತೆಯನ್ನು ಅರಿತಿರುವ ಈ ರಾಜನನ್ನು ಸೇವಿಸಿರಿ" - ಹೀಗೆಂದು ಲುಬ್ಧವರ್ಗದವರ ಕಿವಿಯಲ್ಲಿ ಹೇಳಬೇಕು.

"ಹೇಗೆ ಚಂಡಾಲರ ಬಾವಿಯು ಚಂಡಾಲರಿಗೆ ಮಾತ್ರ ಉಪಯೋಗವಿದ್ದು ಇತರರಿಗೆ ಇರುವುದಿಲ್ಲವೋ, ಹಾಗೆ ಈ ರಾಜನು ನೀಚ; ಆದ್ದರಿಂದ ನೀಚರು ಮಾತ್ರ ಆಶ್ರಯಿಸಬಹುದಾದವನು; ನಿನ್ನಂಥ ಆರ್ಯರಿಗಲ್ಲ. ಈ ರಾಜನು ಪುರುಷರ ಯೋಗ್ಯತೆಯನ್ನು ಅರಿತಿದ್ದಾನೆ; ಅವನಲ್ಲಿಗೆ ಹೋಗಿರಿ" ಎಂದು ಮಾನಿವರ್ಗದವರಿಗೆ ಹೇಳಬೇಕು.

ಹಾಗೆಯೇ ಆಗಲೆಂದು ಒಪ್ಪಿದ ಅವರನ್ನು ಶಪಥಪೂರ್ವಕ ಸಂಧಿ ಮಾಡಿಸಿ, ಅವರ ಯೋಗ್ಯತೆಗೆ ಅನುಗುಣವಾದ ಕರ್ಮಗಳಲ್ಲಿ ನೇಮಕ ಮಾಡಬೇಕು; ಗೂಢಚಾರರನ್ನು ಅವರ ಒಟ್ಟಿಗೆ ಇರಿಸತಕ್ಕದ್ದು.

ಶತ್ರು ದೇಶದಲ್ಲಿರುವ ಕೃತ್ಯರನ್ನು ಸಾಮದಾನಗಳಿಂದಲೂ ಅಕೃತ್ಯರನ್ನು ಭೇದ ದಂಡಗಳಿಂದಲೂ ತನ್ನೆಡೆ ಮಾಡಿಕೊಳ್ಳಬೇಕು. ಶತ್ರುವಿನ ದೋಷವನ್ನು ಅವರಿಗೆ ಪ್ರಕಟಿಸಬೇಕು.

CC-0. In Public Domain. Cuddalore Collection. TN.

Digitization by eGangotri-South Center

1.4.2 ಟಿಪ್ಪಣಿ :

ಈ ಅಧ್ಯಾಯದಲ್ಲಿ ಕ್ರುದ್ಧ, ಲುಬ್ಧ, ಭೀತ, ಮಾನಿಗಳ ಸ್ವರೂಪವನ್ನು ತಿಳಿಸಿ, ಇವರನ್ನು ಯಾವ ರೀತಿಯ ಮಾತುಗಳನ್ನು ಹೇಳಿ ಒಲಿಸಿಕೊಳ್ಳಬೇಕೆಂಬುದನ್ನು ಪ್ರಸ್ತಾಪಿಸಿಲಾಗಿದೆ. ರಾಜನಾದವನು ಪರದೇಶದಲ್ಲಿರುವ ಕೃತ್ಯರನ್ನು ಸಾಮದಾನಗಳಿಂದ ಒಲಿಸಿಕೊಳ್ಳಬೇಕು; ಅಕೃತ್ಯರನ್ನು ಭೇದ ದಂಡವನ್ನು ಪ್ರಯೋಗಿಸಿ ಒಲಿಸಿಕೊಳ್ಳಬೇಕು.

1 आर्य :

ಆರ್ಯ ಎನ್ನುವ ಪದಕ್ಕೆ ಸಂಸ್ಕೃತದಲ್ಲಿ ವಿಶೇಷ ಅರ್ಥವಿದೆ. ಆರ್ಯನೆಂದರೆ ಸತ್ಪುರುಷನೆಂದರ್ಥ. ಭರತನು कुलं शीलं दया दानं धर्मः सत्यं कृतज्ञता। अद्रोहो इति येष्वेतत्तानार्यान् संप्रचक्षते। ಎಂದು ಹೇಳಿದರೆ ವಸಿಷ್ಠನು कर्तव्यमाचरन्कार्यमकर्तव्यमनाचरन्। तिष्ठति प्रकृताचारे स तु आर्य इति स्मृतः।। ಎಂದಿರುವನು.

2 उपायाः :

ಈ ಅಧ್ಯಾಯದ ಕೊನೆಯಲ್ಲಿ ಕೌಟಿಲ್ಯನು ವೈರಿಗಳನ್ನು ಗೆಲ್ಲಲು ಮತ್ತು ತನ್ನ ಪ್ರಜೆಗಳನ್ನು ಹತೋಟಿಯಲ್ಲಿಡಲು ಉಪಯೋಗಿಸಬೇಕಾದ ಸಾಮ, ದಾನ, ಭೇದ ಮತ್ತು ದಂಡಗಳೆಂಬ ನಾಲ್ಕು ಉಪಾಯಗಳನ್ನು ತಿಳಿಸಿದ್ದಾನೆ. ಅಮರಕೋಶವು भेदो दण्डः सामदानमित्युपायचतुष्टयम् ಎಂದರೆ ವಿಷ್ಣುಧರ್ಮ ಸೂತ್ರ ಅವುಗಳ ಸಮಂಜಸ ಉಪಯೋಗವನ್ನು ಹೇಳುತ್ತಾ शत्रुमित्रोदासीनमध्यमेषु सामभेददानदण्डान् यथार्हं यथाकालं प्रयुञ्जीत। ಎಂದಿದೆ ನೀತಿವಾಕ್ಯಾಮೃತಾನುಸಾರ, ರಾಜನ ರಾಜ್ಯದ ವಿಸ್ತಾರ ವೆಷ್ಟೇ ಸಣ್ಣದಾದರೂ ಈ ಉಪಾಯಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಿದಲ್ಲಿ ಅತ್ಯಂತ ಎತ್ತರಕ್ಕೆ ಏರಬಹುದು. उपयोपपन्नविक्रमोनुरक्तप्रकृतिरल्पदेशोऽपि सार्वभौमः। न हि कुलागता कस्यापि भूमिः किन्तु वीरभोग्या वसुन्धरा सामोपप्रदानभेददण्डा उपायाः।

CC-0. In Public Domain. Cuddalore Collection. TN.

Digitization by eGangotri-South Center

ಕೆಳಗಿನ ಶ್ಲೋಕಗಳನ್ನು ಗಮನಿಸಿ.

1. एवं विजयमानस्य येऽस्य स्युः परिपन्थिनः।
तानानयेद्वशं सर्वान्सामादिभिरुपक्रमैः॥
यदि ते नु न तिष्ठेयुरुपायैः प्रथमैस्त्रिभिः।
दण्डेनैव प्रसह्येताच्छनकैर्वशमानयेत्॥
सामादीनामुपायानां चतुर्णामपि पण्डिताः।
सामदण्डौ प्रशसन्ति नित्यं राष्ट्राभिवृद्धये॥
साम्ना दानेन भेदेन समस्तैरथवा पृथक्।
विजेतुं प्रयतेतारीन्न युद्धेन कदाचन॥
अनित्यो विजयो यस्मादृश्यते युध्यमानायाः।
पराजयश्च संग्रामे तस्माद्युद्धं विवर्जयेत्॥
त्रयाणामप्युपायानां पूर्वोक्तानामसम्भवे।
तथा युध्येत संपन्नो विजयेन रिपून्यथा॥

(मनुस्मृति)

2. न युद्धमाश्रयेत्पाशे न कुर्यात्सबलक्षयम्।
वदन्ति सर्वे नीतिज्ञा दण्डस्त्वगतिका गतिः॥

(बृहत्पराशरस्मृति)

3. सामादिदण्डपर्यन्तो नयः प्रोक्तः स्वयंभुवा।
तेषां दण्डस्तु पापीयांस्तं पश्चाद्विनियोजयेत्॥
सामैव यत्र सिद्धिर्न तत्र दण्डो बुधेन विनियोज्यः।
पित्तं यदि शर्करया शाम्यति कोऽर्थः पटोलेन॥

(पञ्चतन्त्र)

CC-0. In Public Domain. Cuddalore Collection. TN.

Digitization by eGangotri-South Center

4. एते सामादयो न केवलं राजव्यवहारविषयाः, अपि तु सकललोकव्यवहारविषयाः ।
यथा अदीष्व पुत्रकाधीष्व दास्यामि तव मोदकान् ।
यद्वान्यस्मै प्रदास्यामि कर्णमुत्पाटयामि ते ।।
(ಯಾಜ್ಞವಲ್ಕ್ಯ ಸ್ಮೃತಿಯ ಮೇಲಿನ ವಿಜ್ಞಾನೇಶ್ವರನ ಮಿತಾಕ್ಷರಾ ವ್ಯಾಖ್ಯಾನ)

CC-0. In Public Domain. Cuddalore Collection. TN.

Digitization by eGangotri-South Center

UNIT-2
मन्त्राधिकारः

2.1 पाठ्यभागः

2.2 पाठ्यभागः

CC-0. In Public Domain. Cuddalore Collection. TN.

Digitization by eGangotri-South Center

UNIT-2
मन्त्राधिकारः

2.1 पाठ्यभागः

११. प्रकरणम् - मन्त्राधिकारः १५ - अध्यायः

कर्तव्यार्धमन्त्रणतद्गोपनयोर्विधिः -

कृतस्वपक्षपरपक्षोपग्रहः कार्यारम्भान् चिन्तयेत्। मन्त्रपूर्वास्सर्वारम्भाः। तदुद्देशः संवृतः कथानामनिस्रावी पक्षिभिरप्यनालोक्यस्स्यात्। श्रूयते हि शुकशारिकाभिः मन्त्रो भिन्नश्श्वभिरन्यैश्च तिर्यग्योनिभिः। तस्मान्मन्त्रोद्देशमनायुक्तो नोपगच्छेत्। उच्छिद्येत मन्त्रभेदी।।

सम्भाविताः मन्त्रभेदहेतवः -

मन्त्रभेदो हि दूतामात्यस्वामिनामिङ्गिताकाराभ्याम्। इङ्गितमन्यथावृत्तिः। आकृतिग्रहणमाकारः। तस्य संवरणं आयुक्तपुरुषरक्षणमा कार्यकालादिति। तेषां हि प्रमादमदसुप्तप्रलापकामादिरुत्सेकः। प्रच्छन्नोऽवमतो वा मन्त्रं भिनत्ति। तस्माद्रक्षेन्मन्त्रम्। मन्त्रभेदोऽन्ययोगक्षेमकरो न राज्ञस्तदायुक्तपुरुषाणां च।।

तत्र मन्त्रणकर्तुरेकत्वमतम् -

तस्मात् - 'गुह्यमेको मन्त्रयेतेति' भारद्वाजः। मन्त्रिणामपि हि मन्त्रिणो भवन्ति। तेषामप्यन्ये। सैषा मन्त्रिपरम्परा मन्त्रं भिनत्ति।

तस्मान्नास्य परे विद्युः कर्म किञ्चिच्चिकीर्षितम्।
आरब्धारस्तु जानीयुरारब्धं कृतमेव वा।।२९।।

CC-0. In Public Domain. Cuddalore Collection. TN.

Digitization by eGangotri-South Center

बहुत्वमतम् -

'नैकस्य मन्त्रसिद्धिरस्तीति' विशालाक्षः। प्रत्यक्षपरोक्षानुमेया हि राजवृत्तिः। अनुपलब्धस्य ज्ञानमुपलब्धस्य निश्चयबलाधानमर्थद्वैधस्य संशयच्छेदनमेकदेशदृष्टस्य शेषोपलब्धिरिति मन्त्रिसाध्यमेतत्। तस्माद्बुद्धिवृद्धैः सार्धमासीत मन्त्रम्।।

न किञ्चिदवमन्येत सर्वस्य शृणुयान्मतम्।
बालस्याप्यर्थवद्वाक्यमुपयुञ्जीत पण्डितः।।३०।।

पराशराभिमतः मन्त्रणक्रमः -

'एतन्मन्त्रज्ञानं नैतन्मन्त्ररक्षणमिति' पाराशराः। यदस्य कार्यमभिप्रेतं तत्प्रतिरूपकं मन्त्रिणः पृच्छेत्। कार्यमिदमेवमासीदेवं वा यदि भवेत्तत्कथं कर्तव्यमिति। ते यथा ब्रूयुः तत्कुर्यात् एवं मन्त्रोपलब्धिः संवृतिश्च भवतीति।।

तत्र नारदमतम् -

'नेति' पिशुनः। मन्त्रिणो हि व्यवहितमर्थं वृत्तमवृत्तं वा पृष्टमनादरेण ब्रुवन्ति प्रकाशयन्ति वा, स दोषः। तस्मात्कर्मसु ये येष्वभिप्रेतास्तैस्सह मन्त्रयेत्। तैर्मन्त्रयमाणो हि मन्त्रबुद्धिं गुप्तिं च लभत इति।।

स्वमतम् -

'न' इति कौटिल्यः। अनवस्था ह्येषा। मन्त्रिभिस्त्रिभिश्चतुर्भिर्वा सह मन्त्रयेत। मन्त्रयमाणो ह्येकेनार्थकृच्छ्रेषु निश्चयं नाधिगच्छेत्। एकश्च मन्त्री यथेष्टमनवग्रहश्चरति। द्वाभ्यां मन्त्रयमाणो द्वाभ्यां संहताभ्यामवगृह्यते। विगृहीताभ्यां विनाश्यते। त्रिषु चतुर्षु वा नैकान्तं कृच्छ्रेणोपपद्यते महादोषम्। उपपन्नं तु भवति। ततः परेषु कृच्छ्रेणार्थनिश्चयो गम्यते। मन्त्रो वा रक्ष्यते। देशकालकार्यवशेन त्वेकेन सह द्वाभ्यामेको वा यथासामर्थ्यं मन्त्रयेत।।

CC-0. In Public Domain. Cuddalore Collection. TN.

Digitization by eGangotri-South Center

मन्त्रस्य अङ्गपञ्चकम्, मन्त्रणक्रमश्च –

कर्मणामारम्भोपायः, पुरुषद्रव्यसम्पत्, देशकालविभागः, विनिपातप्रतीकारः, कार्यसिद्धिरिति पञ्चाङ्गो मन्त्रः। तानेकैकशः पृच्छेत् समस्तांश्च। हेतुभिश्चैषां मतिप्रविवेकान् विद्यात्। अवाप्तार्थः कालं नातिक्रामयेत्। न दीर्घकालं मन्त्रयेत च तेषां पक्षैर्येषां अपकुर्यात्॥

मन्त्रिपरिषदि मन्त्रिसंख्याविषये मतभेदाः –

'मन्त्रिपरिषदं द्वादशामात्यान् कुर्वीतेति' मानवाः। 'षोडशेति' बार्हस्पत्याः। 'विंशतिम्' इत्यौशनसाः। 'यथासामर्थ्यम्' इति कौटिल्यः॥

तेषां पारिषदानां व्यापारः, मन्त्रितव्यार्थरक्षणविधिश्च –

ते ह्यस्य स्वपक्षं परपक्षं च चिन्तयेयुः। अकृतारम्भमारब्धानुष्ठानमनुष्ठितविशेषं नियोगसम्पदं च कर्मणां कुर्युः। आसन्नैस्सह कार्याणि पश्येत्। अनासन्नैस्सह पत्रसम्प्रेषणेन मन्त्रयेत। इन्द्रस्य हि मन्त्रिपरिषदृषीणां सहस्रम्। तच्चक्षुः। तस्मादिमं द्व्यक्षं सहस्राक्षमाहुः। आत्ययिके कार्ये मन्त्रिणो मन्त्रिपरिषदं चाहूय ब्रूयात्। तत्र यद्भूयिष्ठाः कार्यसिद्धिकरं वा ब्रूयुस्तत्कुर्यात्। कुर्वन्तश्च –

नास्य गुह्यं परे विद्युः छिद्रं विद्यात्परस्य च।
गूहेत्कूर्म इवाङ्गानि यत्स्याद्विवृतमात्मनः॥३१॥

यथा ह्यश्रोत्रियः श्राद्धं न सतां भोक्तुमर्हति।
एवमश्रुतशास्त्रार्थो न मन्त्रं श्रोतुमर्हति॥३२॥

इति विनयाधिकारिके मन्त्राधिकारः पञ्चदशोऽध्यायः (२५)

CC-0. In Public Domain. Cuddalore Collection. TN.

Digitization by eGangotri-South Center

2.1.1 ಕನ್ನಡಾನುವಾದ

ಪ್ರಕರಣ - 11

ಅಧ್ಯಾಯ - 15

ಮಂತ್ರಾಧಿಕಾರ :

ಸ್ವಪಕ್ಷಪರ ಪಕ್ಷಗಳನ್ನು ವಶಪಡಿಸಿಕೊಂಡ ಮೇಲೆ ಕಾರ್ಯಗಳನ್ನು ಉಪಕ್ರಮಿಸಲು ಚಿಂತಿಸಬೇಕು. ಯಾವುದೇ ಕೆಲಸವನ್ನು ಪ್ರಾರಂಭಿಸುವುದಾದರೂ ಅದು ಮಂತ್ರಾಲೋಚನೆ ಪೂರ್ವಕವೇ ಆಗಿರುತ್ತದೆ.

ಮಂತ್ರಾಲೋಚನೆ ಮಾಡುವ ಸ್ಥಳವು ನಿರ್ಜನವಾಗಿರಬೇಕು; ಒಳಗಿನ ಧ್ವನಿಗಳು ಹೊರಸೂಸದಂತಿರಬೇಕು; ಪಕ್ಷಿಗಳಿಗೂ ಅದು ಕಾಣುವಂತಿರಬಾರದು. ಏಕೆಂದರೆ ಶುಕಶಾರಿಕೆಗಳಿಂದಲೂ, ನಾಯಿ ಹಾಗೂ ಇತರ ಪ್ರಾಣಿಗಳಿಂದಲೂ ಮಂತ್ರಾಲೋಚನೆ ಹೊರಬಂದಿತೆಂದು ಕೇಳಿಬರುತ್ತದೆ. ಆದುದರಿಂದ ಮಂತ್ರಾಲೋಚನೆಯ ಪ್ರದೇಶದಲ್ಲಿ ಅಧಿಕೃತನಲ್ಲದವನು ಸುಳಿಯಬಾರದು. ಮಂತ್ರಭೇದ ಮಾಡಿದವನನ್ನು ನಾಶಮಾಡಬೇಕು.

ಮಂತ್ರಭೇದದ ಸಂದರ್ಭಗಳು :

ಮಂತ್ರ ಹೊರಬೀಳುವುದು ದೂತ-ಅಮಾತ್ಯ-ಸ್ವಾಮಿ-ಇವರ ಇಂಗಿತ-ಆಕಾರಗಳಿಂದ. ಇಂಗಿತವೆಂದರೆ ಮನೋಭಾವದ ಬದಲಾವಣೆ. ಆಕಾರವೆಂದರೆ ಮುಖಭಾವದ ತಿಳುವಳಿಕೆ. ಮಂತ್ರವು ಗುಟ್ಟಾಗಿಡುವುದನ್ನು ಅಧಿಕೃತ ಪುರುಷರು ಬಾಯಿಬಿಡದಂತೆ ರಕ್ಷಿಸುವುದಾಗಿದೆ; ಅದು ಆ ಕೆಲಸ ಪ್ರಾರಂಭಿಸುವವರೆಗೆ. ಅವರುಗಳು ಎಚ್ಚರ ತಪ್ಪುವುದು, ಮತ್ತಿನಿಂದ ಅಥವಾ ನಿದ್ದೆಯಲ್ಲಿ ಮಾತನಾಡುವುದು, ಅತಿಯಾದ ಕಾಮ ಮೊದಲಾದವು, ಮರೆಯಾಗಿ ನಿಂತಿರುವವರು, ಗಮನಕ್ಕೆ ಬಾರದವರು, - ಈ ರೀತಿಯಲ್ಲಿ ಮಂತ್ರಾಲೋಚನೆಯು ಬಹಿರಂಗಗೊಳ್ಳುವುದು. ಆದುದರಿಂದ ಮಂತ್ರಾಲೋಚನೆಯನ್ನು ರಕ್ಷಿಸತಕ್ಕದ್ದು. ರಹಸ್ಯವನ್ನು ಹೊರಗೆಡಹುವುದು ರಾಜನಿಗೂ ಅವನಿಂದ ನಿಯುಕ್ತನಾದ ಅಧಿಕಾರಿಗಳಿಗೂ ಯೋಗಕ್ಷೇಮಕರವಲ್ಲ.

CC-0. In Public Domain. Cuddalore Collection. TN.

Digitization by eGangotri-South Center

ಮಂತ್ರರಕ್ಷಣೆ :

ಆದ್ದರಿಂದ ಭಾರದ್ವಾಜನು 'ಗುಟ್ಟಾಗಿ ಒಬ್ಬನೇ ಆಲೋಚಿಸಬೇಕು' ಎನ್ನುತ್ತಾನೆ. ಏಕೆಂದರೆ ಮಂತ್ರಿಗಳಿಗೆ ಅವರ ಮಂತ್ರಿಗಳು ಅವರಿಗೆ ಬೇರೆಯವರೂ ಇರಬಹುದು. ಈ ಮಂತ್ರಿ ಪರಂಪರೆ ರಹಸ್ಯವನ್ನು ಬಯಲು ಮಾಡುತ್ತದೆ. ಆದುದರಿಂದ ರಾಜನು ಮಾಡಲಿಚ್ಛಿಸುವ ಕೆಲಸವನ್ನು ಇತರರು ಯಾರೂ ಅರಿಯಬಾರದು. ಆ ಕೆಲಸವನ್ನು ನಡೆಸುವವರೂ ಅದು ಆರಂಭವಾದಾಗ ಅಥವಾ ಮುಗಿದಾಗ ಅದನ್ನು ತಿಳಿಯುವರು.

"ಒಬ್ಬನೇ ಚಿಂತಿಸಿ ತೀರ್ಮಾನಿಸುವುದು ಫಲಪ್ರದವಾಗದು" ಎನ್ನುತ್ತಾನೆ ವಿಶಾಲಾಕ್ಷ. ರಾಜನ ವ್ಯವಹಾರವು ಪ್ರತ್ಯಕ್ಷವೂ, ಪರೋಕ್ಷವೂ, ಅನುಮೇಯವೂ ಆಗಿದೆ. ಇಂದ್ರಿಯ ಗೋಚರವಾದುದರ ತಿಳುವಳಿಕೆ, ಗೋಚರವಾದುದಾದರೂ ಅದರ ನಿಶ್ಚಯವನ್ನು ದೃಢಪಡಿಸುವುದು; ಎರಡು ಸಮಾನ ಮತಗಳಲ್ಲಿ ಸಂಶಯವನ್ನು ತೊಡೆದು ಹಾಕುವುದು, ಭಾಗಶಃ ಅರಿತ ವಿಷಯವೊಂದರ ಎಲ್ಲ ಮುಖಗಳನ್ನು ಸಾಕ್ಷಾತ್ಕರಿಸಿಕೊಳ್ಳುವುದು - ಇವೆಲ್ಲ ಮಂತ್ರಿಗಳಿಂದ ಸಾಧ್ಯವಾದುದು. ಆದ್ದರಿಂದ ಜ್ಞಾನವೃದ್ಧರೊಡನೆ ಕೂಡಿ ಮಂತ್ರಾಲೋಚನೆ ಮಾಡಬೇಕು. ಯಾರನ್ನೂ ಕಡೆಗಣಿಸಬಾರದು. ಎಲ್ಲರ ಅಭಿಪ್ರಾಯಗಳನ್ನು ಕೇಳಬೇಕು. ತಿಳುವಳಿಕೆ ಸಾಲದ ಬಾಲನಾದರೂ ಅವನ ಮಾತು ಅರ್ಥ ಯುಕ್ತವಾಗಿದ್ದರೆ, ಪಂಡಿತನಾದವನು ಅದನ್ನು ಉಪಯೋಗಿಸಿಕೊಳ್ಳಬೇಕು.

"ಇದು ಕೇವಲ ಅಭಿಪ್ರಾಯ ಸಂಗ್ರಹವಾಯಿತು; ಆಲೋಚನೆಯನ್ನು ರಕ್ಷಿಸಿದಂತೆ ಆಗಲಿಲ್ಲ" ಎಂದು ಪಾರಾಶರರ ಅಂಬೋಣ. ರಾಜನ ಮನಸ್ಸಿನಲ್ಲಿ ಯಾವ ಕೆಲಸವಿದೆಯೋ ಅದಕ್ಕೆ ಸಮಾನವಾದ ಕೆಲಸದ ಬಗ್ಗೆ ಮಂತ್ರಿಗಳನ್ನು - "ಈ ಕೆಲಸವು ಹೀಗೆ ನಡೆಯಿತು; ಇದು ಈ ರೀತಿಯಾದರೆ, ಆಗೇನು ಮಾಡುವುದು" ಎಂದು ಕೇಳಬೇಕು. ಅವರುಗಳು ಹೇಗೆ ಹೇಳುವರೋ ಹಾಗೆ ಅದನ್ನು ನಡೆಸತಕ್ಕದ್ದು. ಈ ರೀತಿಯಾಗಿ ಸಲಹೆಯನ್ನು ಪಡೆಯುವುದೂ ಆಯಿತು, ಅದರ ರಕ್ಷಣೆಯೂ ನೆರವೇರುತ್ತದೆ" ಎಂದು.

ಇದು ಸರಿಯಲ್ಲ ಎಂದು ಪಿಶುನನ ಮತ. ಎಂದೋ ಕೈಗೊಳ್ಳಬೇಕಾದ, ಮುಗಿದುಹೋದ ಅಥವಾ ನಡೆಯುತ್ತಿರುವ ವಿಷಯಗಳ ಬಗ್ಗೆ ಕೇಳಿದಾಗ ಮಂತ್ರಿಗಳು ಅದರಲ್ಲಿ ಆಸಕ್ತಿ ವಹಿಸುವುದಿಲ್ಲ. ಅಥವಾ ನಿರಾಸಕ್ತಿಯಿಂದ ಸಲಹೆಕೊಡುತ್ತಾರೆ. ಅದು ದೋಷ. ಆದ್ದರಿಂದ ಯಾರು ಯಾರು ಯಾವ ಯಾವ ಕರ್ಮದಲ್ಲಿ ತೀರ್ಮಾನ ಕೊಡಬಲ್ಲರೋ ಅವರೊಡನೆ ಸಮಾಲೋಚಿಸಬೇಕು. ಅವರೊಂದಿಗೆ ವಿಚಾರ ಮಾಡಿದರೆ, ಸಲಹೆ ದೊರೆಯುವುದರೊಡನೆ ಗೋಪ್ಯತೆಯೂ ಲಭಿಸುತ್ತದೆ.

CC-0. In Public Domain. Cuddalore Collection. TN.

Digitization by eGangotri-South Center

ಕೌಟಿಲ್ಯ ಇದನ್ನು ಒಪ್ಪುವುದಿಲ್ಲ. ಇದಕ್ಕೆ (ಈ ವಿಧಾನಕ್ಕೆ) ಕೊನೆಮೊದಲಿಲ್ಲ. ರಾಜನಾದವನು ಮೂವರು ಅಥವಾ ನಾಲ್ವರು ಮಂತ್ರಿಗಳೊಡನೆ ಆಲೋಚಿಸತಕ್ಕದ್ದು. ಒಬ್ಬನೊಡನೆ ಆಲೋಚಿಸುವುದರಿಂದ ಕ್ಲಿಷ್ಟವಾದ ಸಮಸ್ಯೆಗಳಲ್ಲಿ ನಿಶ್ಚಯಕ್ಕೆ ಬರಲಾರದೆ ಹೋಗುತ್ತಾನೆ. ಒಂಟಿಯಾದ ಮಂತ್ರಿಯು ತನಗಿಷ್ಟ ಬಂದಂತೆ ಅಡೆತಡೆಯಿಲ್ಲದೆ ನಡೆದುಕೊಳ್ಳುತ್ತಾನೆ. ಇಬ್ಬರೊಡನೆ ಸಮಾಲೋಚನೆ ಮಾಡುವವನು, ಅವರಿಬ್ಬರು ಒಂದಾದರೆ, ಅವರ ವಶಕ್ಕೆ ಸಿಕ್ಕಿಕೊಳ್ಳುತ್ತಾನೆ, ಅವರಿಬ್ಬರು ವಿರೋಧಿಗಳಾದರೆ, ನಾಶಹೊಂದುತ್ತಾನೆ. ಮೂರು ಅಥವಾ ನಾಲ್ಕು ಜನ ಮಂತ್ರಿಗಳಿದ್ದಲ್ಲಿ ರಾಜನು ಕ್ಲೇಶವನ್ನು ಹೊಂದುವುದು ಇರುವುದೇ ಇಲ್ಲ; ಮಹಾದೋಷ ಒದಗುವ ಸನ್ನಿವೇಶವೂ ಹತೋಟಿಯಲ್ಲಿರುತ್ತದೆ. ಸಂಖ್ಯೆ ಅದಕ್ಕಿಂತ ಹೆಚ್ಚಾದರೆ, ಚರ್ಚೆಗಳಲ್ಲಿ ತೀರ್ಮಾನಕ್ಕೆ ಬರುವುದು ಕಷ್ಟವಾಗುತ್ತದೆ; ಆಲೋಚನೆಯನ್ನು ರಹಸ್ಯವಾಗಿಡುವುದೂ ಸಹ ಸಾಧ್ಯವಿಲ್ಲ. (ಆದ್ದರಿಂದ) ದೇಶ, ಕಾಲ, ಕಾರ್ಯಸ್ವರೂಪ - ಇವುಗಳನ್ನು ಗಮನಿಸಿ, ಒಬ್ಬನೊಡನೆ, ಇಬ್ಬರೊಡನೆ ಅಥವಾ ಒಂಟಿಯಾಗಿ ಅವಶ್ಯಕತೆಯಿದ್ದಂತೆ ಸಾಮರ್ಥ್ಯಕ್ಕನುಗುಣವಾಗಿ ಆಲೋಚಿಸತಕ್ಕದ್ದು.

ಮಂತ್ರಾಲೋಚನಾಕ್ರಮ :

ಕರ್ಮಗಳನ್ನು ಆರಂಭಿಸಲು ಬೇಕಾದ ಪೂರ್ವಸಿದ್ಧತೆ, ಅವುಗಳಿಗೆ ಅಗತ್ಯವಾದ ಪುರುಷರ ಹಾಗೂ ವಸ್ತುಗಳ ಸಂಗ್ರಹ, ದೇಶ-ಕಾಲ-ವಿಭಾಗ, ಬರಬಹುದಾದ ಅಡಚಣೆಗಳಿಗೆ ನಿವಾರಣೋಪಾಯ, ಕಾರ್ಯಸಿದ್ಧಿ - ಇವು ಮಂತ್ರಾಲೋಚನೆಯ ಐದು ಅಂಶಗಳು. ರಾಜನು ಮಂತ್ರಿಗಳನ್ನು ಒಬ್ಬೊಬ್ಬನ್ನಾಗಿಯೂ ಒಟ್ಟಾಗಿಯೂ ಪ್ರಶ್ನಿಸಬೇಕು. ಅವರು ಕೊಡುವ ಉಪಪತ್ತಿ ಮೂಲಕ ಪ್ರಕೃಷ್ಟವಾದ ಸಲಹೆಗಳನ್ನು ತಿಳಿಯಬೇಕು. ನಿಶ್ಚಯಿಸಿದ ಮೇಲೆ ಕಾಲಕಳೆಯಬಾರದು. ದೀರ್ಘಕಾಲ ವಿಷಯವೊಂದನ್ನು ಚರ್ಚಿಸಬಾರದು. ಯಾರಿಗಾದರೂ ಅಪಕಾರವಾಗುವದಿದ್ದರೆ ಅಂಥವರ ಪಕ್ಷದವರೊಡನೆ ಅದರ ಚರ್ಚೆ ನಡೆಸಬಾರದು.

ಮಂತ್ರಿ ಪರಿಷತ್ :

'ಹನ್ನೆರಡು ಅಮಾತ್ಯರ ಮಂತ್ರಿ ಪರಿಷತ್ತನ್ನು ಮಾಡುವುದು' ಎಂದು ಮಾನವರು; "ಹದಿನಾರು" ಎಂದು ಬಾರ್ಹಸ್ಪತ್ಯರು; "ಇಪ್ಪತ್ತು" ಎಂದು ಔಶನಸರು; "ಸಾಮರ್ಥ್ಯಕ್ಕನುಗುಣವಾಗಿ ಎಂದು ಕೌಟಿಲ್ಯ."

CC-0. In Public Domain. Cuddalore Collection. TN.

Digitization by eGangotri-South Center

ಅವರು ರಾಜನ ಸ್ವಪಕ್ಷವನ್ನೂ ಪರಪಕ್ಷವನ್ನೂ ಚಿಂತಿಸಬೇಕು. ಕೈಗೊಳ್ಳದ ಕರ್ಮವನ್ನು ಪ್ರಾರಂಭಿಸುವುದನ್ನೂ, ಕೈಗೊಂಡುದರ ಪೂರೈಕೆಯನ್ನೂ, ಕರ್ಮಗಳ ನಿಯೋಗಸಂಪತ್ತನ್ನೂ ಮಾಡಬೇಕು. ಹತ್ತಿರದಲ್ಲಿರುವವರ ಕೆಲಸಕಾರ್ಯಗಳನ್ನು ಪರಿಶೀಲಿಸಬೇಕು. ಹತ್ತಿರದಲ್ಲಿ ಇಲ್ಲದವರೊಡನೆ ಪತ್ರ ಮುಖೇನ ವಿಚಾರ ಮಾಡಬೇಕು. ಇಂದ್ರನ ಮಂತ್ರಿಪರಿಷತ್ ಸಹಸ್ರ ಋಷಿಗಳಿಂದ ಕೂಡಿದ್ದು ಅವರೇ ಅವನ ಕಣ್ಣುಗಳು. ಆದ್ದರಿಂದಲೇ ಎರಡು ಕಣ್ಣಿನ ಇಂದ್ರನನ್ನು 'ಸಹಸ್ರಾಕ್ಷ' ಎನ್ನಲಾಗಿದೆ. ತುರ್ತಾದ ಕಾರ್ಯವಿರುವಾಗ ಮಂತ್ರಿಗಳನ್ನೋ ಮಂತ್ರಿಪರಿಷತ್ತನ್ನೋ ಕರೆದು ಹೇಳಬೇಕು. ಅಲ್ಲಿ ಯಾವುದನ್ನು ದೇಶ ಕಾಲ ಮತ್ತು ಕಾರ್ಯಸಿದ್ಧಿಕರವೆಂದು ಬಹುಜನರು ತಿಳಿಸುವರೋ, ಅದನ್ನು ನಡೆಸುವುದು. ಹಾಗೆ ಮಾಡುವಾಗ ತನ್ನ ಗುಟ್ಟನ್ನು ಶತ್ರುಗಳು ತಿಳಿಯಬಾರದು; ಶತ್ರುಗಳ ಛಿದ್ರಗಳನ್ನು ತಾನು ತಿಳಿಯಬೇಕು; ಯಾವ ತನ್ನ 'ಅಂಗಾಂಗಗಳು' ಹೊರಚಾಚಿವೆಯೋ ಅವುಗಳನ್ನೆಲ್ಲಾ ಆಮೆಯಂತೆ ಮುಚ್ಚಿಟ್ಟುಕೊಳ್ಳಬೇಕು. ಸಾಧುಗಳಿಂದ ಆಚರಿಸಲಾದ ಶ್ರಾದ್ಧವನ್ನು ಶ್ರೋತ್ರಿಯರಲ್ಲದವರು ಊಟ ಮಾಡಲು ಹೇಗೆ ಯೋಗ್ಯವಲ್ಲವೋ ಅದೇ ರೀತಿ ಶಾಸ್ತ್ರವಿಚಾರಗಳನ್ನು ಅರಿಯದವನು ಮಂತ್ರಾಲೋಚನೆಗೆ ಅರ್ಹನಾಗಿರುವುದಿಲ್ಲ.

2.1.2 ಟಿಪ್ಪಣಿ :

ಈ ಅಧ್ಯಾಯದಲ್ಲಿ ಮಂತ್ರಿಗಳ ಆವಶ್ಯಕತೆ, ಮಂತ್ರಿಗಳ ಸಂಖ್ಯೆ, ಮಂತ್ರಾಲೋಚನೆಯ ಪ್ರಕಾರ ಹಾಗೂ ಅದರಲ್ಲಿ ಮುನ್ನೆಚ್ಚರಿಕೆಯ ಕ್ರಮಗಳು - ಇವುಗಳನ್ನು ಚರ್ಚಿಸಲಾಗಿದೆ. ಮಂತ್ರಾಲೋಚನೆಯು ಅತ್ಯಂತ ಮಹತ್ವವುಳ್ಳದಾಗಿದ್ದು ರಾಜನ ಎಲ್ಲ ಕಾರ್ಯಗಳ ಯಶಸ್ಸಿಗೆ ಅದುವೇ ಮೂಲವಾಗಿದೆ. ರಾಮಾಯಣದಲ್ಲಿ मन्त्रो विजयमूलं हि राज्ञां भवति राघव ಎಂದಿದ್ದರೆ; ಮಹಾಭಾರತದಲ್ಲಿ विजयो मन्त्रमूलो हि राज्ञां भवति भारतः ಸ್ವತಃ ಕೌಟಿಲ್ಯನೇ एकं हन्यान्न वा हन्यादिषुः क्षिप्तो धनुष्मता। प्राज्ञेन तु मतिः क्षिप्ता हन्याद् गर्भगतानपि।। (ಪು.468) ಎಂದು ಒತ್ತಿ ಹೇಳಿದ್ದಾನೆ.

2 कार्यारम्भानचिन्तयेत् :

ಯಾವುದೇ ರಾಜಕೀಯ ಕಾರ್ಯವಾದರೂ ಅದನ್ನು ಸಾಕಷ್ಟು ಪೂರ್ವಭಾವಿ ಚಿಂತನೆಯಿಲ್ಲದೆ ಮಾಡಬಾರದು. ಆಗುಹೋಗುಗಳನ್ನು ಸಾಧಕ ಬಾಧಕಗಳನ್ನು

CC-0. In Public Domain. Cuddalore Collection. TN.

Digitization by eGangotri-South Center

ಕೂಲಂಕಷವಾಗಿ ಪರಿಶೀಲಿಸಿದ ಅನಂತರವೇ ಕಾರ್ಯಗಳನ್ನು ಪ್ರಾರಂಭಮಾಡಬೇಕು. ಈ ಕೆಳಗಿನ ಶ್ಲೋಕಗಳು ಇದೇ ವಿಷಯವನ್ನು ತಿಳಿಸುತ್ತದೆ.

1. न तच्छब्दैर्न नागेन्द्रैर्न हयैर्न न पदातिभिः।
कार्यसंसिद्धिमप्येति यथा बुद्धय प्रसाधनम्।। (पञ्चतन्त्रम्)

2. सहसा विदधीत न क्रियामविवेकः परमापदां पदम्।
वृणुते हि विमृश्यकारिणं गुणलुब्धाः स्वयमेव सम्पदः।।
(भारवीय किरातार्जुनीयम्)

3. गुणवदगुणवद्वा कुर्वता कार्यमादौ
परिणतिस्वधार्या यत्नतः पण्डितेन।
अतिरभसकृतानां कर्मणामविपत्ते-
र्भवति हृदयदाही शल्यतुल्यो विपाकः।।
(सुभाषितम्)

4. सुहृद्भिराप्तैरसकृद्विचारितं स्वयं बुद्धया प्रविचारिताश्रयम्।
करोति कार्यं खलु यः स बुद्धिमान्स एव लक्ष्म्या कशसां च भाजनम्।।
(पञ्चतन्त्रम्)

5. सुजीर्णमन्नं सुविचक्षणः सुतः सुशासिता स्त्री नृपतिः सुसेवितः।
सुचिन्त्य चोक्तं सुविचार्य यत्कृतं सुदर्घकालेऽपि न याति विक्रियाम्।।
(हितोपदेश)

3. संवृतः : ಮಂತ್ರಾಲೋಚನೆ ಮಾಡುವ ಸ್ಥಳ

ಈ ಕೆಳಗಿನ ಸುಭಾಷಿತವೂ ಅದೇ ವಿಚಾರವನ್ನು ತಿಳಿಸುತ್ತದೆ.

विषोधयेत्महीपालो मन्त्रशालामशेषतः।
अयुक्तो नार्हति स्थातुमस्यां मन्त्ररहस्यवित्।।

CC-0. In Public Domain. Cuddalore Collection. TN.

Digitization by eGangotri-South Center

4 पक्षिभिरप्यनालोक्य :

ಮಂತ್ರಾಲೋಚನೆ ಅತ್ಯಂತ ರಹಸ್ಯವಾಗಿರಬೇಕು. ಬಾಣನ ಹರ್ಷ ಚರಿತೆಯಲ್ಲಿ ನಾಗವಂಶದ ನಾಗಸೇನನು ಪದ್ಮಾವತಿಯಲ್ಲಿ ನಾಶಹೊಂದಿದ್ದು ಅವನ ರಹಸ್ಯಯೋಜನೆಯನ್ನು ಸಾರಿಕಾ ಪಕ್ಷಿಯು ಭೇದಿಸಿದ್ದರಿಂದ ಎಂದೂ, ಅದೇ ರೀತಿ ಗಿಳಿಯೊಂದು ತನ್ನ ರಹಸ್ಯವನ್ನು ಹೇಳಿದ್ದರಿಂದ ಶ್ರುತವರ್ಮನು ಶ್ರಾವಸ್ತಿಯಲ್ಲಿ ತನ್ನ ರಾಜ್ಯವನ್ನು ಕಳೆದುಕೊಂಡನೆಂದೂ ಹೇಳಲಾಗಿದೆ. (नागकुलजन्मनः सारिका श्रावितमन्त्रस्यासीन्नाशो नागसेनस्य पद्मावत्याम्। शुकश्रुतरहस्यस्य च श्रीरशीर्यत श्रुतवर्मणः श्रावत्याम्।) ಆದುದರಿಂದ ಮಂತ್ರಿಯೊಬ್ಬನು ಮಂತ್ರಾಲೋಚನೆಯ ರಹಸ್ಯವನ್ನು ಭೇದಿಸಿದರೆ ರಾಜನಿಗದು ಮರಣಾಂತಿಕವಾಗುತ್ತದೆ. ಈ ಕೆಳಗಿನ ಪಂಚತಂತ್ರದ ಶ್ಲೋಕಗಳನ್ನು ಗಮನಿಸಿ :

यो मन्त्रं स्वामिनो भिन्द्योस्साचिव्ये संनियोजितः।
स हत्वा नृपकार्यं तत्स्वयं च नरकं व्रजेत्।।
येन यस्य कृतो भेदः सचिवेन महीपतेः।
तेनाशस्त्रवधस्तस्य कृत इत्याह नारदः।। (पञ्चतन्त्रम्)

5 इङ्गितम् :

ಇಂಗಿತ ಶಬ್ದವು इङ्ग 'ಚಲಿಸು' ಧಾತುವಿನಿಂದ ನಿಷ್ಪತ್ತಿಯಾಗಿದ್ದು ವ್ಯಕ್ತಿಯ ಆಲೋಚನೆಯನ್ನು ಸೂಚಿಸುವ ನಡವಳಿಕೆ ಹಾಗೂ ಸಂಜ್ಞೆಗಳನ್ನು ನಿರ್ದೇಶಿಸುತ್ತದೆ. (R.P. Kangle P.33)

6 आकृति ग्रहणम् :

ಈ ಶಬ್ದವನ್ನು ಮುಖ ಬಿಳಿಚಿಕೊಳ್ಳುವುದು ಮೊದಲಾದ ಅಸಹಜವಾದ ಭಾವವೆಂಬುದಾಗಿ ಆರ್.ಪಿ.ಕಾಂಗ್ಲೆಯವರು ವಿವರಿಸಿದ್ದಾರೆ. (ಪು.33)

ಇವುಗಳನ್ನು ಗಮನಿಸಿ :

अकारैरिङ्गितैर्गत्या चेष्टया भाषणेन च।
नेत्रवक्त्रविकारैश्च लक्ष्यन्तेऽन्तर्गतं मनः।। (पञ्चतन्त्र)

CC-0. In Public Domain. Cuddalore Collection. TN.

Digitization by eGangotri-South Center

वर्णाकारप्रतिध्वानैर्नेत्रवक्त्रविकारतः ।
अव्यूह्यन्ति मनो धीरास्तस्माद्रहसि मन्त्रयेत् ।। (सुभाषित)

7. तस्माद्रक्षेन्मन्त्रम् :

ಆದ್ದರಿಂದ ರಾಜನು ಮಂತ್ರವನ್ನು ರಕ್ಷಿಸಬೇಕು. ಗಮನಿಸಿ :

(1) तत्र स्थितः प्रजा सर्वाः प्रतिनन्द्य विसर्जयेत्
विसृज्य च प्रजाः सर्वा मन्त्रयेत्सह मन्त्रिभिः ।।
गिरिपुष्टं समारुह्य प्रासादं वा रहोगतः ।
अरण्ये निःशलाके वा मन्त्रयेदविभाविताः ।।
यस्य मन्त्रं न जानन्ति समागम्य पृथक् जनाः ।
स कृत्स्नां पृथिवीं भुङ्क्ते कोशहानोऽपि पार्थिवः ।।
जडमूकान्धबधिरस्तैयग्योनान्वयोतिगान् ।
ऋस्त्रीम्लेच्छव्याधितव्यङ्गान्मन्त्रकालेऽपसारयेत् ।। (मनुस्मृति)

(2) अपि स्वल्पतरं कार्यं यद्भवेत्पृथिवीपतेः ।
तत्र वाच्यं सभामध्ये प्रोवाचेदं बृहस्पतिः ।।
षट्कर्णो भिधते मन्त्रश्चतुष्कर्णः स्थिरो भवेत् ।
तस्मात्सर्वप्रयत्नेन षट्कर्णं वर्जयेत्सुधीः ।।पञ्चतन्त्र ।।

(3) षट्कर्णो भिद्यते मन्त्रश्चतुष्कर्णः स्थिरो भवेत् ।
द्विकर्णस्य तु मन्त्रस्य बाह्याप्य तं न गच्छति ।।
मन्त्रबीजमिदं गुप्तं रक्षणीयं यथा तथा ।
मनागपि न भिद्येत तद्भिन्नं न प्ररोहति ।।

CC-0. In Public Domain. Cuddalore Collection. TN.

Digitization by eGangotri-South Center

मन्त्रभेदेऽपि ये दोषा भवन्ति पृथिवीपतेः।
न शक्यास्ते समाधातुमिति नीतिविदां मतम्॥ (सुभाषित)

(4) अम्भसा भिद्यते सेतुस्तथा मन्त्रोऽप्यरक्षितः॥ (पञ्चतन्त्र)

(5) महीभूतां सच्चरितैश्चरैः क्रियाः स वेद निःशेषमशेषितक्रियः।
महोदयैस्तस्य हितानुबन्धिभिः प्रतीयते धातुरिवेहितं फलैः॥
(भारवीय किरातार्जुनीयम्)

(6) तस्य संवृतमन्त्रस्य गूढाकारेङ्गितस्य च।
फलानुमेयाः प्रारम्भाः संस्काराः प्राक्तना इव॥ (रघुवंश)

8. सर्वस्य शृणुयान्मतम् :

ರಾಜನು ಎಲ್ಲರ ಅಭಿಪ್ರಾಯಗಳನ್ನೂ ಆಲಿಸಬೇಕು. ವಿವೇಕಿಯಾದವನು ಬಾಲನಾದರೂ ಸುಭಾಷಿತವನ್ನು ನುಡಿದಲ್ಲಿ ಗ್ರಹಿಸಬೇಕು. ಕೆಳಗಿನವುಗಳನ್ನು ಗಮನಿಸಿ:

(1) बालादपि सुभाषितं ग्राह्यम्॥ (सुभाषित)

(2) स्त्रीपुमानित्यनास्थैषा वृत्तं हि महितं सताम्॥ (कुमारसंभव)

(3) गुणाः पूजास्थानं गुणिषु न च लिङ्गं न चवयः॥ (उत्तररामचरित)

(4) युक्तियुक्तं प्रगृहीयाद्बालादपि विचक्षणः।
रवेरविषयं वस्तु किं न दीपः प्रकाशयेत्॥ (सुभाषित)

(5) बालादपि ग्रहीतव्यं युक्तमुक्तं मनीषिभिः।
रवेरविजये किं न प्रदीपस्य प्रकाशनम्॥ (हितोपदेश)

(6) युक्तियुक्तं वचो ग्राह्यं न ग्राह्यं गुरुगौरवात्॥ (सुभाषित)

(7) युक्तियुक्तं वचो ग्राह्यं बालादपि शुकादपि॥ (सुभाषित)

CC-0. In Public Domain. Cuddalore Collection. TN.

Digitization by eGangotri-South Center

9. त्रिषु चतुर्षुवा नैकान्तं कृच्छ्रेणोपपद्यते महादोषम्। उपपन्नं तु भवति।

ಈ ವಾಕ್ಯಗಳ ಅರ್ಥವು ಸ್ಪಷ್ಟವಾಗಿಲ್ಲ. ಬಹುಶಃ ಅದು ಮೂರು ಅಥವಾ ನಾಲ್ಕು ಮಂತ್ರಿಗಳನ್ನೂ ಒಪ್ಪುವುದಿಲ್ಲ. ಏಕೆಂದರೆ, ಮೊದಲನೆಯದಾಗಿ ಅವರೊಂದು ಒಮ್ಮತದ ನಿರ್ಣಯಕ್ಕೆ ಬರಲಾರರು. ಬಂದರೂ, ಯಾವುದೋ ಶಕ್ತಿಯ ಕಾರಣ ಮತ್ತು ತೊಂದರೆಯ ನಿಮಿತ್ತ ರಾಜನಿಗದು ಅನುಕೂಲವಾಗದು. ಆದರೆ ಅದಕ್ಕೊಂದು ಪ್ರಯೋಜನವಿದೆ; ಅದು ಉಪಪನ್ನವಾಗಿರುತ್ತದೆ. ಅಂದರೆ ಅದರ ಮೇಲೆ ಕೂಲಂಕಷ ಚರ್ಚೆ ನಡೆಯುತ್ತದೆ ಮತ್ತು ಆ ವಿಷಯವನ್ನು ಸಮುಚಿತವಾಗಿ ತೊಡಗಿಸಲ್ಪಡಲಾಗುತ್ತದೆ.

10. पञ्चाङ्गो मन्त्रः :

ಕರ್ಮಗಳನ್ನು ಆರಂಭಿಸಲು ಬೇಕಾದ ಪೂರ್ವಸಿದ್ಧತೆ, ಅವುಗಳಿಗೆ ಅಗತ್ಯವಾದ ಪುರುಷರ ಹಾಗೂ ವಸ್ತುಗಳ ಸಂಗ್ರಹ, ದೇಶ-ಕಾಲ-ವಿಭಾಗ, ಬರಬಹುದಾದ ಅಡಚಣೆಗಳಿಗೆ ನಿವಾರಣೋಪಾಯ, ಕಾರ್ಯಸಿದ್ಧಿ - ಇವು ಮಂತ್ರಾಲೋಚನೆಯ ಐದು ಅಂಶಗಳು. ಕಾಮಂದಕನು ಹೀಗೆ ಹೇಳುತ್ತಾನೆ :

सहायाः साधनोपायाः विभागो देशकालयोः।
विनिपातप्रतीकारः सिद्धिः पञ्चाङ्गमिष्यते।।

ಯಾವುದೇ ಒಂದು ಉದ್ಯಮದಲ್ಲೂ ಈ ಐದು ಅಂಗಗಳು ಅತ್ಯವಶ್ಯ. ರಾಜನಾದವನು ಮೊದಲು ಯಾವ ಕರ್ಮ ಉದ್ದಿಷ್ಟವಾಗಿದೆಯೋ ಅದರ ಆರಂಭೋಪಾಯವನ್ನು ತಿಳಿಯಬೇಕು. ಆ ಕರ್ಮದ ಒಂದು ಯೋಜನೆಯನ್ನು ಸಿದ್ಧಪಡಿಸಬೇಕು. ಕರ್ಮದಿಂದ ಆಗುವ ಪ್ರಯೋಜನ, ಅದರ ಅಗತ್ಯ, ಅದನ್ನು ನಡೆಸಲು ಬೇಕಾದ ಜನಶಕ್ತಿ, ವಸ್ತುಗಳು, ಆರ್ಥಿಕಶಕ್ತಿ ಇದೆಲ್ಲದರ ಪೂರ್ಣ ಜ್ಞಾನಬೇಕು. ಅನಂತರ ಅದು ಆಗತ್ಯ ಅಥವಾ ಪ್ರಯೋಜನದ ದೃಷ್ಟಿಯಿಂದ ನಡೆಸತಕ್ಕದೆಂದು ತೀರ್ಮಾನಿಸಿದರೆ ಕರ್ಮನಿರ್ವಹಿಸಲು ಅಂದಾಜಿನಂತೆ ಬೇಕಾದ ಜನಶಕ್ತಿ, ಸಾಮಗ್ರಿಗಳು - ಇತ್ಯಾದಿಗಳನ್ನು ಹೊಂದಿಸಲು ಸಾಧ್ಯವೇ ಎನ್ನುವುದನ್ನು ವಿಚಾರಮಾಡಬೇಕು. ಮೂರನೆಯದಾಗಿ, ಆ ಕರ್ಮವನ್ನು ರಾಜ್ಯದ ಯಾವ ಭಾಗದಲ್ಲಿ ಯಾವ ಕಾಲದಲ್ಲಿ, ಎಷ್ಟು ಕಾಲದೊಳಗೆ ಅದನ್ನು ಪೂರ್ಣಗೊಳಿಸಬೇಕೆಂಬುದನ್ನು ನಿರ್ಣಯಿಸಬೇಕು. ನಾಲ್ಕನೆಯದಾಗಿ ಆ ರೀತಿ ಕೈಗೊಂಡ ಆ ಕೆಲಸದಲ್ಲಿ ಏನಾದರೂ ಅಡಚಣೆ ಬರುವ ಸಂಭವ ಹಾಗೂ ಅದರ ನಿವಾರಣೋಪಾಯಗಳನ್ನು ಕುರಿತು

CC-0. In Public Domain. Cuddalore Collection. TN.

Digitization by eGangotri-South Center

ಚಿಂತಿಸಬೇಕು. ಇಷ್ಟೆಲ್ಲ ಸರಿಯಾಗಿ ಆದರೆ ನಂತರ ಬರುವ ಕಾರ್ಯಸಿದ್ಧಿಯು ನಿಶ್ಚಿತವಾದುದು. ಆದ್ದರಿಂದ ಪ್ರತಿಯೊಬ್ಬ ರಾಜನೂ ಈ ಪಂಚಾಂಗಗಳನ್ನು ಕುರಿತು ಜಾಗೃತನಾಗಿರಬೇಕು.

11. कालं नातिक्रामयेत् :

ಈ ಕುರಿತು ಪಂಚತಂತ್ರದ ಈ ಶ್ಲೋಕಗಳನ್ನು ಗಮನಿಸಿ :

श्रीघ्रकृत्येषु कार्येषु विलम्बयति यो नरः ।
तत्कृत्य देवतास्तस्य कोपाद्विघ्नत्यसंशयम् ।।
यस्य यस्य हि कार्यस्य फलितस्य विशेषतः ।
क्षिप्रमक्रियमाणस्य कालः पिबति तद्रसम् ।।

---

22 पाठ्यभागः

---

१२. प्रकरणम् - दूतप्रणिधिः १६-अध्यायः

दूतभेदाः -

उद्धृतमन्त्रो दूतप्रणिधिः । अमात्यसम्पदोपेतो निसृष्टार्थः । पादगुणहीनः परिमितार्थः । अर्धगुणहीनः शासनहरः ।।

दुतकर्मव्यांशाः -

सुप्रतिविहितयानवाहनपुरुषपरिवापः प्रतिष्ठेत । "शासनमेवं वाच्यः, परस्स वक्ष्यत्येवं, तस्येदं प्रतिवाक्यमेवमतिसन्धातव्यम्" इत्यधीयानो गच्छेत् । अटव्यन्तपालपुरराष्ट्रमुख्यैश्च प्रतिसंसर्गं गच्छेत् । अनीकस्थानयुद्धप्रतिग्रहा-पसारभूमीरात्मनः परस्य चावेक्षेत । दुर्गराष्ट्रप्रमाणं सारवृत्तिगुप्तिच्छिद्राणि चोपलभेत । पराधिष्ठानमनुज्ञातः प्रविशेत् । शासनं च यथोक्तं ब्रूयात् । प्राणाऽऽ-वाधेऽपि दृष्टे परस्य वाचि वक्त्रे दृष्ट्यां च प्रसादं वाक्यपूजनमिष्टपरिप्रश्नं

CC-0. In Public Domain. Cuddalore Collection. TN.

Digitization by eGangotri-South Center

गुणकथासङ्कमासन्नमासनं सत्कारमिष्टेषु स्मरणं विश्वासगमनं च लक्षयेत्तुष्टस्य। विपरीतमतुष्टस्य। तं ब्रूयात् - "दूतमुखा वै राजानस्त्वं चान्ये च। तस्मादुद्धृतेष्वपि शस्त्रेषु यथोक्तं वक्तारस्तेषामन्तावसायिनोऽप्यवध्याः। किमङ्ग पुनर्ब्राह्मणाः। परस्यैतद्वाक्यमेष दूतधर्मः" इति। वसेदविसृष्टः प्रपूजया नोत्सिक्तः। परेषु बलित्वं न मन्येत। वाक्यमनिष्टं सहेत। स्त्रियः पानं च वर्जयेत्। एकश्शयीत। सुप्तमत्तयोर्हि भावज्ञानं दृष्टम्। कृत्यपक्षोपजापमकृत्यपक्षे गूढप्रणिधानं, रागापरागौ भर्तरि, रन्ध्रं च प्रकृतीनां तापसवैदेहकव्यञ्जनाभ्यामुपलभेत। तयोरन्तेवासिभिश्चिकित्सकपाषण्डव्यञ्जनोभयवेतनैर्वा। तेषामसम्भाषायां याचकमत्तोन्मत्तसुप्तप्रलापैः पुण्यस्थानदेवगृहचित्रलेख्यसंज्ञाभिर्वा चारमुपलभेत। उपलब्धस्योपजापमुपेयात्। परेण चोक्तस्स्वासां प्रकृतीनां परिमाणं नाचक्षीत। "सर्वं वेद भवानिति" ब्रूयात्। कार्यसिद्धिकरं वा।।

असिद्धकार्यस्य दूतस्य चिरोपरोधे हेतुपरिशीलनविधिः -

कार्यस्यासिद्धावुपरुध्यमानस्तर्कयेत् - किं भर्तुर्मे व्यसनमासन्नं पश्यन्, स्वं वा व्यसनं प्रतिकर्तुकामः, पार्ष्णिग्राहासारावन्तः कोपमाटविकं वा समुत्थापयितुकामः, मित्रमाक्रन्दाभ्यां वा व्यापादयितुकामः, स्वं वा परतो विग्रहमन्तःकोपमाटविकं वा प्रतिकर्तुकामः, संसिद्धं मे भर्तुर्यात्रकालमभिहन्तुकामः, सस्यकुप्यपण्यसङ्ग्रहं दुर्गकर्म बलसमुत्थानं वा कर्तुकामः, स्वसैन्यानां व्यायामदेशकालावाकाङ्क्षमाणः, परिभवप्रमादाभ्यां वा संसर्गानुबन्धार्थी वा, मामुपरुणद्धीति।।

तदनन्तरक्रियाः -

ज्ञात्वा वसेदपसरेद्वा। प्रयोजनमिष्टमपेक्षेत वा। शासनमनिष्टमुक्त्वा बन्धवधभयादपि विसृष्टो व्यपगच्छेदन्यथा नियम्येत।

दूतकर्तव्यानां सङ्ग्रहः -

प्रेषणं सन्धिपालत्वं प्रतापो मित्रसङ्ग्रहः।
उपजापस्सुहृद्भेदो गूढदण्डातिसारणम्।।३३।।

CC-0. In Public Domain. Cuddalore Collection. TN.

Digitization by eGangotri-South Center

बन्धुरत्नापहरणं चारज्ञानं पराक्रमः।

समाधिमोक्षो दूतस्य कर्मयोगस्य चाश्रयः।।३४।।

स्वदूतैः कारयेदेतत् परदूतांश्च रक्षयेत्।

प्रतिदूतापसर्पाभ्यां दृश्यादृश्यैश्च रक्षिभिः।।३५।।

इति विनयाधिकारिके दूतप्रणिधिः षोडशोऽध्यायः (१६)

2.2.1 ಕನ್ನಡಾನುವಾದ

ಪ್ರಕರಣ - 12

ಅಧ್ಯಾಯ - 16

ದೂತಪ್ರಣಿಧಿ :

ಮಂತ್ರಾಲೋಚನೆಯಲ್ಲಿ ನಿರ್ಣಯವೊಂದನ್ನು ತೆಗೆದುಕೊಂಡ ಬಳಿಕ ರಾಜನು ದೂತನನ್ನು ನೇಮಿಸಬೇಕು. ಅಮಾತ್ಯ ಸಂಪತ್ತೆಲ್ಲವನ್ನೂ ಉಳ್ಳವನು ನಿಸೃಷ್ಟಾರ್ಥ ಎನಿಸುತ್ತಾನೆ. ಕಾಲುಭಾಗವಿಲ್ಲದವನು ಪರಿಮಿತಾರ್ಥ; ಅರ್ಧಭಾಗ ಗುಣವುಳ್ಳವನು ಶಾಸನಹರ.

ದೂತನ ಕಾರ್ಯಕ್ರಮ :

ಗಾಡಿ, ವಾಹನ, ಪರಿಚಾರಕ, ಆವಶ್ಯಕ ವಸ್ತುಗಳು - ಇವುಗಳನ್ನು ಸರಿಯಾಗಿ ಸಜ್ಜುಮಾಡಿಕೊಂಡು ಹೊರಡಬೇಕು. ದಾರಿಯಲ್ಲಿ, ರಾಜನ ಶಾಸನವನ್ನು ಪರರಾಜನಿಗೆ ಹೀಗೆ ಹೇಳಬೇಕು : ಅದಕ್ಕೆ ಹೀಗೆ ಉತ್ತರಿಸುತ್ತಾನೆ; ಅದಕ್ಕೆ ಉತ್ತರವಾಗಿ ಹೀಗೆ ಹೇಳಬೇಕು; ಹೀಗೆ ಅವನು ಒಪ್ಪುವಂತೆ ಮಾಡಬೇಕು - ಈ ಪ್ರಕಾರವಾಗಿ ವಿಚಾರಮಾಡುತ್ತಾ ಹೋಗಬೇಕು. ಹೋಗುವಾಗ ಅಡವಿಯ, ಸೀಮೆಯ, ಪುರದ ಹಾಗೂ ರಾಷ್ಟ್ರದ ಮುಖ್ಯರನ್ನೂ ಒಬ್ಬೊಬ್ಬರನ್ನು ಭೇಟಿಯಾಗಿ ಸ್ನೇಹಮಾಡಿಕೊಂಡು ಹೋಗಬೇಕು. ತನ್ನ (ರಾಜ್ಯದ) ಸೈನ್ಯದ ನೆಲೆ ಯುದ್ಧಸ್ಥಾನ, ಪ್ರತಿಗ್ರಹದ ಸ್ಥಳ, ಗುಟ್ಟಾಗಿ ತಪ್ಪಿಸಿಕೊಂಡುಹೋಗಬಹುದಾದ ಸ್ಥಳ - ಇವುಗಳನ್ನು ಶತ್ರುವಿನ ಆಯಾ

CC-0. In Public Domain. Cuddalore Collection. TN.

Digitization by eGangotri-South Center

ಸ್ಥಳಗಳೊಂದಿಗೆ ಹೋಲಿಸಿಕೊಳ್ಳಬೇಕು. ಶತ್ರುವಿನ ದುರ್ಗ ಹಾಗೂ ರಾಷ್ಟ್ರದ ವಿಸ್ತಾರಾದಿ ಪ್ರಮಾಣವನ್ನೂ ಅದರ ಫಲವತ್ತತೆ, ಜೀವಿಕೆಗಳು, ಸುರಕ್ಷಿತ ಸ್ಥಾನಗಳು ಛಿದ್ರಗಳು ಒಡಕುಗಳು (ದೋಷಗಳು) - ಇವುಗಳನ್ನು ಗಮನಿಸಿ ತಿಳಿಯಬೇಕು.

ಶತ್ರುಗಳ ನೆಲೆಯನ್ನು ಅವರ ಅನುಜ್ಞೆ ಪಡೆದು ಪ್ರವೇಶಿಸಬೇಕು. ತನ್ನ ರಾಜನ ಶಾಸನ (ಸಂದೇಶ)ವನ್ನು, ಪ್ರಾಣಾಪಾಯದ ಸನ್ನಿವೇಶ ಕಂಡು ಬಂದರೂ ಯಥೋಕ್ತವಾಗಿ ಹೇಳಬೇಕು. ಶತ್ರುವಿನ ಮಾತಿನಲ್ಲಿ ಸೌಮ್ಯತೆ, ಮುಖ-ಕಣ್ಣುಗಳ ಅರಳುವಿಕೆ, ಮಾತನ್ನು ಕಿವಿಗೊಟ್ಟು ಕೇಳುವುದು, ಇಷ್ಟವಾದ ವಿಚಾರಗಳನ್ನು ಕುರಿತು ಚರ್ಚಿಸುವುದು, ಗುಣಗಳ ನಿರೂಪಣೆಯಲ್ಲಿ ಪಾಲ್ಗೊಳ್ಳುವುದು, (ತನ್ನ) ಹತ್ತಿರದಲ್ಲಿ ಕುಳ್ಳಿರಿಸುವುದು, ಸತ್ಕಾರ, ಮಿತ್ರರನ್ನು ನೆನೆಸಿಕೊಳ್ಳುವುದು, ವಿಶ್ವಾಸವನ್ನು ಹೊಂದುವುದು - ಇವುಗಳನ್ನು ತುಷ್ಟನಾದವನ ಲಕ್ಷಣವೆಂದು ಕಾಣಬೇಕು ಮತ್ತು ಇವುಗಳಿಗೂ ವಿರುದ್ಧವಾದ ಲಕ್ಷಣಗಳನ್ನು ಅತುಷ್ಟನವೆಂದು ಅರಿಯಬೇಕು. ಅವನನ್ನು (ಅತುಷ್ಟ ನನ್ನು) ಕುರಿತು ಹೇಳಬೇಕು. ರಾಜರೆಲ್ಲರೂ ದೂತನ ಮೂಲಕವೇ ಸಂಪರ್ಕಿಸುವುದು. ತಾವೂ ಅಷ್ಟೇ ಇತರರೂ ಅಷ್ಟೇ. ಆದ್ದರಿಂದ ಶಸ್ತ್ರಗಳನ್ನು ಎತ್ತಿದರೂ ದೂತರು ಯಥೋಕ್ತವಾಗಿ ನುಡಿಯುವವರೇ ಆಗಿರುತ್ತಾರೆ; ಅವರು (ದೂತರ) ಆಪ್ತ ಸಹಾಯಕರೂ ಅವಧ್ಯರು; ಅಂದಮೇಲೆ ದೂತರಾದ ಬ್ರಾಹ್ಮಣರು ವಧ್ಯರಾಗುವರೇ? ಇದು ಇನ್ನೊಬ್ಬರ ಮಾತು. ಇದನ್ನು ಯಥಾವತ್ ಹೇಳುವುದು ದೂತನ ಕರ್ತವ್ಯ.

(ಶತ್ರುರಾಜನು) ಬೀಳ್ಕೊಡದಿದ್ದರೆ (ಅವನ ಪಟ್ಟಣದಲ್ಲಿಯೇ) ವಾಸಿಸುವುದು; (ಅವನು ಕೊಟ್ಟ) ವಿಶೇಷ ಗೌರವದಿಂದ ಉಬ್ಬಿಹೋಗಬಾರದು; ಶತ್ರುಗಳಲ್ಲಿ ಶಕ್ತಿಶಾಲಿತ್ವವನ್ನು ತೋರ್ಪಡಿಸಬಾರದು; ಅವರು ಆಡಿದ ಮಾತು ಹಿಡಿಸದಿದ್ದರೂ ಸಹಿಸಿಕೊಳ್ಳಬೇಕು; ಸ್ತ್ರೀಯರನ್ನೂ, ಮಾದಕಪೇಯವನ್ನೂ ವರ್ಜಿಸಬೇಕು. ಒಂಟಿಯಾಗಿ ಮಲಗಬೇಕು. ಮಲಗಿರುವಾಗ ಅಥವಾ ಮತ್ತರಾಗಿರುವಾಗ ಭಾವ ಪ್ರಕಟವಾಗುವುದು ಎಲ್ಲರಿಗೂ ತಿಳಿದಿದೆ. (ತನಗೆ) ಅನುಕೂಲರಾದವರಿಗೆ ಕಿವಿಮಾತು, ಅನಾನುಕೂಲರಾದವ ರಲ್ಲಿ ಗೂಢಪುರುಷರ ಕರ್ತವ್ಯ; ಆ ದೇಶದ ಅಮಾತ್ಯರಲ್ಲಿ ಅವರ ಒಡೆಯನ ಬಗೆಗೆ ಪ್ರೀತಿ ಇರುವುದು, ಇಲ್ಲದಿರುವುದು; ಅವರಲ್ಲಿನ ಒಡಕು - ಈ ಮಾಹಿತಿಗಳನ್ನು ತಾಪಸವ್ಯಂಜನ ಮತ್ತು ವೈದೇಹಕ ವ್ಯಂಜನರಾದ ಗೂಢಚಾರರಿಂದ ಪಡೆಯುವುದು ಅಥವಾ ಅವರುಗಳ ಆಪ್ತ ಸಹಾಯಕರಾದ ಚಿಕಿತ್ಸಕ, ಪಾಷಂಡ ವ್ಯಂಜನ ಅಥವಾ ಉಭಯ ವೇತನರಿಂದ ತಿಳಿಯಬೇಕು. ಅವರೊಡನೆ ನೇರವಾಗಿ ಮಾತಾಡಲು ಸಾಧ್ಯವಾಗದಿದ್ದರೆ, ಯಾಚಕ, ಮತ್ತು ಬಂದವನ, ಹುಚ್ಚನ, ಮಲಗಿದವನ ಗಳಹುವಿಕೆ ಯಿಂದ ಅಥವಾ ಪುಣ್ಯಸ್ಥಾನ ಹಾಗೂ ದೇವಗೃಹಗಳಲ್ಲಿ ಚಿತ್ರ, ಗೂಢಬರವಣಿಗೆ

CC-0. In Public Domain. Cuddalore Collection. TN.

Digitization by eGangotri-South Center

ಅಥವಾ ಸಂಜ್ಞೆಗಳಿಂದ ವಿಷಯಗಳನ್ನು ಸಂಗ್ರಹಿಸಬೇಕು. ಉಪಲಬ್ದವಾದ ಸಮಾಚಾರಗಳನ್ನು ಪರೀಕ್ಷಿಸಬೇಕು. ಶತ್ರುವು ಕೇಳಲಾಗಿ, ತನ್ನ ಪ್ರಕೃತಿಗಳ ಪರಿಮಾಣವನ್ನು ಬಹಿರಂಗ ಪಡಿಸಬಾರದು. 'ಎಲ್ಲವೂ ತಮ್ಮ ಗಮನಕ್ಕೆ ಬಂದೇ ಇದೆ' ಎಂದು ಹೇಳಬೇಕು. ಅಥವಾ (ತನ್ನ) ಕಾರ್ಯ ಸಿದ್ಧಿಸಲು ಎಷ್ಟು ಹೇಳಬೇಕೋ ಅಷ್ಟು ಹೇಳಬೇಕು.

ತಾನು ಬಂದ ಕೆಲಸವಾದ ಮೇಲೂ (ಪರರಾಜ) ಉಳಿಸಿಕೊಂಡಿದ್ದರೆ, "ನನ್ನ ಒಡೆಯನಿಗೆ ಸನ್ನಿಹಿತವಾದ ಅಪಾಯವನ್ನು ಮನಗಂಡು, ಅಥವಾ ತನ್ನ ಅಪಾಯವನ್ನು ಪರಿಹರಿಸಲು, ಪಾರ್ಷ್ಣಿಗ್ರಾಹ-ಅಸಾರರನ್ನು ಇಲ್ಲವೇ ಒಳಗೇ ಕುದಿಯುತ್ತಿರುವ ಅಟವಿಕನನ್ನು ಚಿತಾವಣೆ ಮಾಡಲು; ಮಿತ್ರನನ್ನು ಇಲ್ಲವೇ ಆಕ್ರಂದರನ್ನು ಧ್ವಂಸಮಾಡಲು, ತನ್ನ ರಾಜ್ಯದೊಳಗಿನ ಉಪದ್ರವ ಅಥವಾ ಹೊರಗಿನ ಧಾಳಿಯನ್ನು ಅಥವಾ ಒಳಗೇ ಕುದಿಯುತ್ತಿರುವ ಆಟವಿಕನನ್ನು ಹತ್ತಿಕ್ಕಲು, ನನ್ನೊಡನೆಯ ಸನ್ನಿಹಿತವಾದ ವಿಜಯಯಾತ್ರೆಯ ಕಾಲವನ್ನು ಮುಂದೆ ಹಾಕುವಂತೆ ಮಾಡಲು, ಸಸ್ಯಗಳು ಅರಣ್ಯ ಸಂಪತ್ತು ವ್ಯಾಪಾರದ ವಸ್ತುಗಳು-ಇವುಗಳನ್ನು ಸಂಗ್ರಹಿಸಲು, ದುರ್ಗವನ್ನು ಸರಿಪಡಿಸಲು, ಸೈನ್ಯವನ್ನು ಸಜ್ಜುಮಾಡಲು, ತನ್ನ ಸೈನ್ಯದ ವ್ಯಾಯಾಮ ದೇಶ-ಕಾಲ-ಸನ್ನಿವೇಶಗಳನ್ನು ನಿರೀಕ್ಷಿಸುವವನಾಗಿ, ಅವಮಾನ ಪಡಿಸಲು ಅಥವಾ ಅನವಧಾನದಿಂದ ಅಥವಾ ವಿವಾಹಾದಿ ಸಂಬಂಧವನ್ನು ಇಚ್ಛಿಸುವವನಾಗಿ' - ನನ್ನನ್ನು ಉಳಿಸಿಕೊಂಡಿದ್ದಾನೆಯೇ" ಎಂದು ಚಿಂತಿಸಬೇಕು.

(ಪರರಾಜನ ಆಶಯವನ್ನು) ತಿಳಿದು ಅಲ್ಲಿಯೇ ಇರಬಹುದು ಇಲ್ಲವೇ ಹೊರಟು ಹೋಗಬಹುದು ಅಥವಾ ತಾನು ಬಂದ ಉದ್ದೇಶವನ್ನು ಕುರಿತು ಅವನ ತೀರ್ಮಾನವನ್ನು ಶೀಘ್ರವಾಗಿ ಕೊಡುವಂತೆ ಒತ್ತಾಯಿಸಬಹುದು. (ಪರನಿಗೆ) ಇಷ್ಟವಲ್ಲದ ಶಾಸನವನ್ನು ಹೇಳಿ, ಬಂಧನ, ವಧದ ಭಯವಿರುವುದಾದರೆ, ಅವನು ಬೀಳ್ಕೊಡದೆಯೂ ಹೊರಟು ಹೋಗುವುದು; ಇಲ್ಲವಾದರೆ ಶಿಕ್ಷೆಗೆ ಒಳಗಾಗುತ್ತಾನೆ.

ದೂತನ ಕೆಲಸಗಳ ಸಂಗ್ರಹ :

ಸಂದೇಶಗಳನ್ನು ಒಯ್ಯುವುದು, ತರುವುದು; ಮಾಡಿಕೊಂಡ ಸಂಧಿಗಳ ಪಾಲನೆ; ಪರಾಕ್ರಮದ ಖ್ಯಾತಿ; ಮಿತ್ರಸಂಗ್ರಹ; ಉಪಜಾಪ, ಸ್ನೇಹಿತರನ್ನು ಒಡೆಯುವುದು; ಗುಟ್ಟಾಗಿ ಸೈನ್ಯವನ್ನು ನುಗ್ಗಿಸುವುದು; ಬಂಧುಗಳನ್ನು ರತ್ನ ಇತ್ಯಾದಿಗಳನ್ನು ಅಪಹರಿಸುವುದು; ಸಮಾಚಾರ ಸಂಗ್ರಹ; ಪರಾಕ್ರಮ; ಸಮಾಧಿ ಮೋಕ್ಷ; ಆಭಿಚಾರ ಕ್ರಿಯೆಗಳ ಆಚರಣೆ - ಇವು ದೂತನ ಕೆಲಸಗಳು.

CC-0. In Public Domain. Cuddalore Collection. TN.

Digitization by eGangotri-South Center

ತನ್ನ ದೂತರಿಂದ ಇವೆಲ್ಲವನ್ನೂ ಮಾಡಿಸುವುದು, ಶತ್ರು ದೂತರು ಅವುಗಳನ್ನು ಮಾಡದಂತೆ, ಪ್ರತಿ ದೂತ - ಗೂಢಚಾರರಿಂದಲೂ, ಸಮ ವಸ್ತ್ರದಲ್ಲಿರುವ (ದೃಶ್ಯ), ಸಾಮಾನ್ಯ ವಸ್ತ್ರದಲ್ಲಿರುವ (ಅದೃಶ್ಯ) ರಕ್ಷಿಪುರುಷರಿಂದಲೂ ತಡೆಯಬೇಕು.

2.2.2 ಟಿಪ್ಪಣಿ :

1 ಶ್ಲೋ : ಈ ಅಧ್ಯಾಯದಲ್ಲಿ ದೂತನ ವ್ಯಾಪಾರವನ್ನು ತಿಳಿಸಲಾಗಿದೆ. ದೂತನಾದವನು ತನ್ನ ಸ್ವಾಮಿಯ ಆದೇಶಾನುಸಾರ ಕರ್ತವ್ಯಗಳನ್ನು ನಿರ್ವಹಿಸುತ್ತಿರುತ್ತಾನೆ. ಚಾರರು ರಾಜನ ಕಣ್ಣಾದರೆ ದೂತರು ರಾಜನ ವದನ. ಹಾಗೆಂದೇ दूतमुखा वै राजानः ಎನ್ನಲಾಗಿದೆ. ಹಾಗಾಗಿ ದೂತನು "ಅವನ ಸ್ವಾಮಿಯ ಧ್ವನಿ". ದೂತನ ಅರ್ಹತೆಯ ಬಗೆಗೆ ಹಲವು ಗ್ರಂಥಗಳು ತಿಳಿಸಿವೆ. ಮಹಾಭಾರತವು ದೂತನಿಗಿರಬೇಕಾದ ಎಂಟು ಅರ್ಹತೆಗಳನ್ನು ತಿಳಿಸಿದೆ. ಸ್ಥಬ್ದನಲ್ಲದವನೂ, ಕ್ಲೀಬನಲ್ಲದವನೂ, ವಿಳಂಬ ಮಾಡದವನೂ, ದಯಾವಂತನೂ, ವಿಶ್ವಾಸಾರ್ಹನೂ, ಬೇರೆಯವರಿಂದ ವಶೀಕರಿಸಲ್ಪಡದವನೂ, ರೋಗರಹಿತನೂ, ಉದಾರವಾಕ್ಯನೂ ಆದವನು ದೂತನ ಗುಣವನ್ನು ಹೊಂದಿದವನೆನ್ನುತ್ತಾರೆ. (आस्तब्धमक्लीबमदीर्घसूत्रं सानुक्रोशं श्लक्ष्णमहार्यमन्यैः। अरोगजातीयमुदारवाक्यं दूतं वदन्त्यष्टगुणोपपन्नम्।। ಇವುಗಳನ್ನು ಗಮನಿಸಿ.)

दूतं चैव प्रकुर्वीत सर्वशास्त्रविशारदम्।
इङ्गिताकारचेष्टज्ञं शुचिं दक्षकुलोद्गतम्।।
अनुरक्तः शुचिर्दक्षः स्मृतिमान्देशकालवित्।
वपुष्मान्वीतभीर्वाग्मी दूतो राज्ञः प्रशस्यते।। (मनुस्मृति)

ಮಂತ್ರಿಪರಿಷತ್ತಿನಲ್ಲಿ ಚರ್ಚಿಸಿ ಕಾರ್ಯಾನುಷ್ಠಾನವನ್ನು ತೀರ್ಮಾನಿಸಿದ ಬಳಿಕ ದೂತರನ್ನು ಕಳುಹಿಸಬೇಕೆಂದು ಕೌಟಿಲ್ಯನು ಇಲ್ಲಿ ತಿಳಿಸಿರುವನು. ಹೀಗೆ ಕಳುಹಿಸುವ ದೂತರು ಮೂರು ಬಗೆಯಾಗಿರುತ್ತಾರೆ.

1. निःसृष्टार्थ : ಅಮಾತ್ಯ ಸಂಪತ್ತು (ಇಪ್ಪತ್ತು ಗುಣಗಳು : ಅಧ್ಯಾಯ 9 ನೋಡಿರಿ.)ಗಳಿಂದ ಕೂಡಿರುತ್ತಾನೆ. ಇವನು ಸ್ವತಂತ್ರನಾಗಿ ವರ್ತಿಸಲು ಸಮರ್ಥನಾಗುತ್ತಾನೆ. 2 परिमितार्थ - ಇವನು ಒಂದು ಗೊತ್ತಾದ ಕೆಲಸವನ್ನು ಮಾಡಬಲ್ಲವನಾಗಿದ್ದು ಕಾಲುಭಾಗ ಗುಣಗಳನ್ನು ಹೊಂದಿರುವುದಿಲ್ಲ. 3. शासनहर

CC-0. In Public Domain. Cuddalore Collection. TN.

Digitization by eGangotri-South Center

- ಇವನ್ನು ಅರ್ಧದಷ್ಟು ಗುಣಗಳನ್ನು ಮಾತ್ರ ಹೊಂದಿರುತ್ತಾನೆ. ಇವನ ಕೆಲಸಗಳು, ಮಾತುಗಳು ಇವನ ಸ್ವಾಧೀನವಲ್ಲ. ಇವನು ಇವನಿಗೆ ಕೊಡಲಾದ ಸಂದೇಶಗಳನ್ನು ಒಯ್ಯುಬಲ್ಲವನಾಗಿರುತ್ತಾನಷ್ಟೆ. ಯಾಜ್ಞವಲ್ಕ್ಯಸ್ಮೃತಿಯ ಮೇಲಿನ ಮಿತಾಕ್ಷರಾ ವ್ಯಾಖ್ಯಾನವು ಈ 3 ಬಗೆಯ ದೂತರ ಕುರಿತು ಹೀಗೆ ಹೇಳಿದೆ : दूताश्च ये प्रकटमेव राजान्तरं प्रति गतागतमाचरन्ति। ते च त्रिविधाः। निःसृष्टार्थाः, सन्दिष्टार्थाः, शासनहरश्चेति। तत्र निःसृष्टार्था राजकार्याणि देशकालोचितनि स्वयमेव कथयितुं क्षमाः। उक्तमात्रं ये परस्मै निवेदयन्ति ते सन्दिष्टार्थाः। शासनहरस्तु राजलेखहारिणः॥

2 **अधिष्टान** : ಶತ್ರುರಾಜನು ದೂತನನ್ನು ಕಾಣುವ ಸ್ಥಳಕ್ಕೆ ಅಧಿಷ್ಟಾನ ಎನ್ನುವರು. ಬೇರೆ ರಾಜರು ಕಳುಹಿಸುವ ದೂತರನ್ನು ರಾಜನು ಭೇಟಿ ಮಾಡಬೇಕಾದದ್ದು ಅನಿವಾರ್ಯ. ಈ ಭೇಟಿಗಾಗಿ ಒಂದು ನಿಗದಿತ ಸ್ಥಳ ಅಥವಾ ಕೋಣೆಯಿದ್ದು ಅದನ್ನು ಎಲ್ಲ ಔಪಚಾರಿಕ ಕ್ರಮಗಳನ್ನು ಪಾಲಿಸಿ ಪ್ರವೇಶಿಸಬೇಕು.

3 **परेषुबलित्वं न मन्यते** : ಇದು ಬಹಳ ಮುಖ್ಯ. ದೂತನು ಶತ್ರು ರಾಜನ ಹತ್ತಿರವಿದ್ದು ತನ್ನ ರಾಜನು ಹೆಚ್ಚು ಶಕ್ತಿಶಾಲಿ ಎಂದು ತಿಳಿಯಬಾರದು; ಒಂದೊಮ್ಮೆ ಶಕ್ತಿಶಾಲಿಯಾಗಿದ್ದರೂ, ಒರಟಾಗಿ ವರ್ತಿಸಿ ತೊಂದರೆಗೆ ಆಹ್ವಾನಕೊಡಬಾರದು. ವೈದ್ಯ ಬಳಿ ಇದ್ದಾಗ್ಯೂ ಯಾರೂ ವಿಷವನ್ನು ಸೇವಿಸಬಾರದೆಂಬ ಪಂಚತಂತ್ರದ ಉಪದೇಶವು ಅತ್ಯಂತ ಸೂಕ್ತವಾಗಿದೆ.

बलोपपन्नो हि बुद्धिमान्नरः परं नयेन्न स्वयमेव वैरिताम्।
भिषङ्ममास्तीति विचिन्त्य भक्ष्येदकारणात्को हि विचक्षणे विषम्॥

4 **सुप्तमत्तयोर्हि भावज्ञानं दृष्टम्** : ಕುಡಿದು ಮತ್ತನಾದಾಗ ಮತ್ತು ನಿದ್ರೆಯಲ್ಲಿ ಮನದಾಳದ ಭಾವಗಳು ಹೊರಹೊಮ್ಮುತ್ತವೆ. ಗಮನಿಸಿ :

यद्वाञ्छति दिवा मर्त्यो वीक्षते वा करोति वा।
तत्स्वप्नेऽपि तदभ्यासाद्ब्रूते वाऽथ करोति वा॥
शुभं वा यदि वा पापं यन्नृणां हृदि संस्थितम्।
सुगूढमपि तज्ज्ञेय स्वप्नवाक्यात्तथा मदात्॥ (पञ्चतन्त्र)

CC-0. In Public Domain. Cuddalore Collection. TN.

Digitization by eGangotri-South Center

5. दूतस्य कर्म : ಕೌಟಿಲ್ಯನು ದೂತರ ಕರ್ಮಗಳನ್ನು ತಿಳಿಸಿದ್ದಾನೆ. ಕಾಮಂದಕನು ಅವುಗಳನ್ನು ಹೀಗೆ ಹೇಳಿದ್ದಾನೆ.

रिपोः शत्रुपरिच्छेदः सुहृद्बन्धुविभेदनम्।
दुर्गकोशबलज्ञानं कृत्यपक्षोपसंग्रहः।
राष्ट्राव्यपेतपालानामात्मसात्करणं तथा।
युद्धापसारभूज्ञानं दूतकर्मेति कथ्यते।।नीतिसार।।

ಮನುವಿನ ಮತಾನುಸಾರ ದೂತನು ರಾಜರಿಬ್ಬರ ಮಧ್ಯೆ ಮೈತ್ರಿ ಅಥವಾ ವೈರತ್ವವನ್ನು ತರುವವನು :

अमात्ये दण्ड आयात्तो दण्डे वैनायिकी क्रिया।
नृपतौ कोशराष्ट्रे च दूते सन्धिविपर्ययौ।।
दूत एव हि संधत्ते भिनक्त्येव च संहतान्।
दूतस्तत्कुरुते कर्म भिद्यन्ते येन मानवाः।।

ಇದನ್ನೂ ಗಮನಿಸಿ :

दूतेनैव नरेन्द्रस्तु कुर्वीतारिविकर्षणम्।
स्वपक्षे च विजानीयात्परदूतविचेष्टितम्।। (कामन्दकीय नीतिसार)

CC-0. In Public Domain. Cuddalore Collection. TN.

Digitization by eGangotri-South Center

NOTES :

CC-0. In Public Domain. Cuddalore Collection. TN.

Digitization by eGangotri-South Center

UNIT 3
राजपुत्ररक्षणम्

3.1 पाठ्यभागः

32 पाठ्यभागः

CC-0. In Public Domain. Cuddalore Collection. TN.

Digitization by eGangotri-South Center

UNIT 3
राजपुत्ररक्षणम्

3.1 पाठ्यभागः

१३. प्रकरणम् राजपुत्ररक्षणम् १७ - अध्यायः

राज्ञा स्वपुत्रादिभ्यः स्वरक्षणविधिः -

रक्षितो राजा राज्यं रक्षत्यासन्नेभ्यः परेभ्यश्च। पूर्वं दारेभ्यः पुत्रेभ्यश्च। दाररक्षणं निशान्तप्रणिधौ वक्ष्यामः॥

तत्क्रमविषये मतभेदाः -

पुत्ररक्षणं - जन्मप्रभृति राजपुत्रान् रक्षेत्। कर्कटकसधर्माणो हि जनकभक्षाः राजपुत्राः।

'तेषामजातस्नेहे पितर्युपांशुदण्डश्श्रेयान्' इति भारद्वाजः।

'नृशंसमदृष्टवधः क्षत्रबीजविनाशश्चेति' विशालाक्षः। तस्मादेकस्थानावरोधश्श्रेयानिति।

'अहिभयमेतदिति' पाराशराः। कुमारो हि विक्रमभयान्मां पिता रुणद्धीति ज्ञात्वा तमेवाङ्के कुर्यात्तस्मादन्तपालदुर्गे वासश्श्रेयानिति।

'औरभ्रकं भयमेतत्' इति पिशुनः। 'प्रत्यापत्तेर्हि तदेव कारणं ज्ञात्वाऽन्तपालसखस्स्यात्। तस्मात् स्वविषयादपकृष्टे सामन्तदुर्गे वासश्श्रेयानिति'।

'वत्सस्थानमेतदिति' कौणपदन्तः। वत्सेनेव हि धेनुं पितरमस्य सामन्तो दुह्यात्। तस्मान्मातृबन्धुषु वासश्श्रेयानिति।

'ध्वजस्थानमेतत्' इति वातव्याधिः। तेन हि ध्वजेनादितिकौशिकवदस्य मातृबान्धवा भिक्षेरन्। तस्मात् ग्राम्यधर्मेष्वेनमवसृजेयुः। सुखोपरुद्धा हि पुत्राः पितरं नाभिद्रुह्यन्तीति॥

CC-0. In Public Domain. Cuddalore Collection. TN.

Digitization by eGangotri-South Center

स्वमतम् -

'जीवन्मरणमेतत्' इति कौटिल्यः। काष्ठमिव ही घुणजग्धं राजकुलमविनीतपुत्रमभियुक्तमात्रं भज्येत। तस्मादृतुमत्यां महिष्यां ऋत्विजश्चरुमैन्द्राबार्हस्पत्यं निर्वपेयुः। आपन्नसत्त्वायां कौमारभृत्यो गर्भभर्मणि प्रजनने च वियतेत। प्रजातायाः पुत्रसंस्कारं पुरोहितः कुर्यात्। समर्थ तद्विदो विनयेयुः।।

पुत्रबुद्धौ पितृद्रोहालोचननिवृत्त्युपायः -

'सत्रिणामेकश्चैनं मृगयाद्यूतमद्यस्त्रीभिः प्रलोभयेत् - पितरि विक्रम्य राज्यं गृहाणेति। तदन्यस्सत्री प्रतिषेधयेत्' इत्याम्भीयाः।

'महादोषमबुद्धबोधनमिति' कौटिल्यः। नवं हि द्रव्यं येन येनार्थजातेनोपदिह्यते तत्तदाचूषति। एवमयं नवबुद्धिर्यद्यदुच्यते तत्तच्छास्त्रोपदेशमिवाभिजानाति। तस्माद्धर्ममर्थं चास्योपदेशेनाधर्ममनर्थं च। सत्रिणस्त्वेनं 'तव स्मः' इति वदन्तः पालयेयुः।।

परस्त्रीमद्यादिप्रवृत्तराजपुत्रसमीकरणविधिः -

यौवनोत्सेकात् परस्त्रीषु मनः कुर्वाणं आर्याव्यञ्जनाभिस्स्त्रीभिरमेध्याभिश्शून्यागारेषु रात्रावुद्वेजयेयुः। मद्यकामं योगपानेनोद्वेजयेयुः। द्यूतकामं कापटिकैः पुरुषैरुद्वेजयेयुः। मृगयाकामं प्रतिरोधकव्यञ्जनैस्त्रासयेयुः।।

राजपुत्रे राजानुरक्ते अननुरक्ते च कर्तव्यविशेषाः -

पितरि विक्रमबुद्धिं तथेत्यनुप्रविश्य भेदयेयुः। "अप्रार्थनीयो राजा, विपन्ने घातः, सम्पन्ने नरकपातः, संक्रोशः, प्रजाभिरेकलोष्टवधश्चेति"। विरागं प्रियमेकपुत्रं वा बध्नीयात्। बहुपुत्रः प्रत्यन्तमन्यविषयं वा प्रेषयेद्यत्र गर्भः पण्ड्यं डिमवो वा न भवेत्। आत्मसम्पन्नं सेनापत्ये यौवराज्ये वा स्थापयेत्।।

CC-0. In Public Domain. Cuddalore Collection. TN.

Digitization by eGangotri-South Center

पुत्रभेदाः -

बुद्धिमानाहार्यबुद्धिर्दुर्बुद्धिरिति पुत्रविशेषाः। शिष्यमाणो धर्मार्थावुपलभते चानुतिष्ठति च बुद्धिमान्। उपलभमानो नानुतिष्ठत्याहार्यबुद्धिः। अपायनित्यो धर्मार्थद्वेषी चेति दुर्बुद्धिः।।

राज्ञः दुर्मार्गैकपुत्रत्वे कर्तव्यांशाः -

स यद्येकपुत्रः पुत्रोत्पत्तावस्य प्रयतेत। पुत्रिकापुत्रानुत्पादयेद्वा। वृद्धस्तु व्याधितो वा राजा मातृबन्धुतुल्यगुणवत्सामन्तानामन्यतमेन क्षेत्रे बीजमुत्पादयेत्। न चैकपुत्रमविनीतं राज्ये स्थापयेत्।।

राज्यभागित्वनिर्णयः -

बहूनामेकसंरोधः पिता पुत्रहितो भवेत्।
अन्यत्रापद ऐश्वर्यं ज्येष्ठभागी तु पूज्यते।।३६।।

कुलस्य वा भवेद्राज्यं कुलसङ्घो हि दुर्जयः।
अराजव्यसनाबाधः शश्वदावसति क्षितिम्।।३७।।
इति विनयाधिकारिके राजपुत्ररक्षणं सप्तदशोऽध्यायः (१७)

3.1.1 ಕನ್ನಡಾನುವಾದ

ಪ್ರಕರಣ - 13

ಅಧ್ಯಾ, - 17

ರಾಜಪುತ್ರ ರಕ್ಷಣಮ್

ಬಳಿಯಲ್ಲಿರುವವರಿಂದಲೂ ದೂರದಲ್ಲಿರುವವರಿಂದಲೂ ರಕ್ಷಿತನಾದ ರಾಜ ರಾಜ್ಯವನ್ನು ಬಳಿಯಲ್ಲಿರುವವರಿಂದಲೂ, ದೂರದಲ್ಲಿರುವವರಿಂದಲೂ ರಕ್ಷಿಸುತ್ತಾನೆ.

CC-0. In Public Domain. Cuddalore Collection. TN.

Digitization by eGangotri-South Center

ಮೊತ್ತ ಮೊದಲು ರಾಣಿಯರಿಂದಲೂ ಪುತ್ರರಿಂದಲೂ ರಕ್ಷಿತನಾಗಿರಬೇಕು. ದಾರ ರಕ್ಷಣವನ್ನು ನಿಶಾಂತಪ್ರಣಿಧಿ (ಪ್ರಕರಣದಲ್ಲಿ) ಹೇಳಲಾಗುತ್ತದೆ. ಈಗ ಪುತ್ರರಕ್ಷಣವನ್ನು ಹೇಳುತ್ತೇವೆ.

ಹುಟ್ಟಿನಿಂದ ಹಿಡಿದು ರಾಜಪುತ್ರರನ್ನು ರಕ್ಷಿಸಬೇಕು. ಏಡಿಗಳಂತೆ ರಾಜಪುತ್ರರೂ ಜನಕಭಕ್ಷರಾಗಿರುತ್ತಾರೆ. ಅವರಲ್ಲಿ ತಂದೆಗೆ ಸ್ನೇಹವುಂಟಾಗುವ ಮೊದಲೇ ಗುಟ್ಟಾಗಿ ವಧಿಸುವುದು ಒಳ್ಳೆಯದು ಎಂದು ಭಾರಧ್ವಾಜ ಹೇಳುತ್ತಾನೆ.

ಮುಗ್ಧರಾದವರನ್ನು ವಧಿಸುವುದು ಕ್ರೌರ್ಯವಾಗುತ್ತದೆ. ಮಾತ್ರವಲ್ಲ ಕ್ಷಾತ್ರಬೀಜದ ನಾಶವೂ ಆಗುತ್ತದೆ. ಆದುದರಿಂದ ಒಂದು ಕಡೆ ಅಡ್ಡಿಯಲ್ಲಿಡುವುದು ಒಳ್ಳೆಯದೆಂದು ವಿಶಾಲಾಕ್ಷನ ಅಭಿಮತ.

ಇದು ಹಾವಿನ ಭಯ ಎಂದು ಪಾರಾಶರರು (ಭಾವಿಸುತ್ತಾರೆ). ತನ್ನ ವಿಕ್ರಮದ ಭಯದಿಂದ ತಂದೆ ತನ್ನನ್ನು ಅಡ್ಡಿಯಲ್ಲಿಟ್ಟಿರುವನೆಂದು ತಿಳಿದು ಕುಮಾರನು ಅವನನ್ನೇ (ತಂದೆ) ತನ್ನ ಹಿಡಿತದಲ್ಲಿ ಇಟ್ಟುಕೊಳ್ಳುತ್ತಾನೆ. ಆದ್ದರಿಂದ ಅಂತಪಾಲನ ದುರ್ಗದಲ್ಲಿ ಇರಿಸುವುದು ಶ್ರೇಯಸ್ಕರ.

ಹಾಗೆ ಮಾಡುವುದು ಟಗರಿನ ಭಯ ಆಗುತ್ತದೆ ಎಂದು ಪಿಶುನನ ಮತ. ಸ್ವಾತಂತ್ರ್ಯ ಮೊಟಕು ಆಗಿರುವುದಕ್ಕೆ ಅದೇ ಕಾರಣವೆಂದು ತಿಳಿದು ಅಂತಪಾಲನ ಸ್ನೇಹಬೆಳೆಸಬಹುದು. ಆದ್ದರಿಂದ ತನ್ನ ರಾಜ್ಯದಿಂದ ದೂರವಿರುವ ಸಾಮಂತದುರ್ಗದಲ್ಲಿ ವಾಸಮಾಡಲು ಬಿಡಬೇಕು.

ಅದು ವತ್ಸಸ್ಥಾನ ಎಂದು ಕೌಣಪದಂತ. ಕರುವಿನ ಸಹಾಯದಿಂದ ಹಸುವನ್ನು (ಹಾಲು) ಕರೆಯುವಂತೆ ಸಾಮಂತನು ರಾಜಕುಮಾರನ ತಂದೆಯನ್ನು ಕರೆಯುತ್ತಾನೆ. ಆದ್ದರಿಂದ ಪುತ್ರನ ತಾಯಿ ಸಂಬಂಧಿಗಳಲ್ಲಿ ಬಿಡುವುದು ಒಳ್ಳೆಯದು.

ಅದು ಧ್ವಜಸ್ಥಾನವೆಂದು ವಾತವ್ಯಾಧಿ (ನುಡಿಯುತ್ತಾನೆ). ಅವನನ್ನು (ಪುತ್ರನನ್ನು) ಧ್ವಜವನ್ನಾಗಿ ಮಾಡಿಕೊಂಡು ಅದಿತಿ-ಕೌಶಿಕರಂತೆ ಮಾತೃ ಬಾಂಧವರು ಭಿಕ್ಷೆ ಬೇಡುತ್ತಾರೆ. ಆದ್ದರಿಂದ ಗ್ರಾಮ್ಯಧರ್ಮಗಳಲ್ಲಿರುವಂತೆ ಬಿಟ್ಟುಬಿಡಬೇಕು. ಸುಖದಲ್ಲಿ ಮುಳುಗಿದ ಪುತ್ರರು ತಂದೆಯ ಬಗೆಗೆ ದ್ರೋಹ ಬಗೆಯುವುದಿಲ್ಲ.

ಇದು ಬದುಕಿದ್ದು ಸತ್ತಂತೆ ಎಂದು ಕೌಟಿಲ್ಯನ ಮತ. ಕುಟ್ಟೆಹಿಡಿದ ಮರದಂತೆ ಅವಿನೀತ ರಾಜಪುತ್ರನಿರುವ ರಾಜಕುಲವು ರಾಜಶತ್ರುವಿನ ದಾಳಿಯ ಯತ್ನದಿಂದಲೇ ಮುರಿದು ಬೀಳುತ್ತದೆ. ಆದ್ದರಿಂದ ಮಹಿಷಿಯು ಋತುಮತಿಯಾದಾಗ ಋತ್ವಿಜರು ಐಂದ್ರ-ಬಾರ್ಹಸ್ಪತ್ಯ ಹೋಮ ಮಾಡುತ್ತಾರೆ. ಗರ್ಭವತಿಯಾದಾಗ ಶಿಶುವೈದ್ಯರು

CC-0. In Public Domain. Cuddalore Collection. TN.

Digitization by eGangotri-South Center

ಗರ್ಭದ ಪೋಷಣೆಗೂ ಸುಖಪ್ರಸವಕ್ಕೂ ಪ್ರಯತ್ನಿಸಬೇಕು. ಮಗು ಹೆತ್ತ ಮೇಲೆ ಪುರೋಹಿತನು ಪುತ್ರಸಂಸ್ಕಾರವನ್ನು ಮಾಡಬೇಕು. ಸಮರ್ಥನಾದ ಅವನಿಗೆ ಪರಿಣಿತರಿಂದ ಶಿಕ್ಷಣವನ್ನು ಕೊಡಿಸಬೇಕು.

ಬೇಟೆ, ಜೂಜು, ಮದ್ಯ, ಸ್ತ್ರೀ - ಇವುಗಳ ಆಸೆ ತೋರಿಸಿ 'ತಂದೆಯನ್ನು ಬಲಾತ್ಕರಿಸಿ ರಾಜ್ಯವನ್ನು ತೆಗೆದುಕೋ' ಎಂದು ಸತ್ರಿಯೊಬ್ಬನು ಹೇಳಬೇಕು; ಅದನ್ನು ಇನ್ನೊಬ್ಬ ಸತ್ರಿ ವಿರೋಧಿಸಬೇಕು ಎಂದು ಆಂಭೀಯರು (ಅಭಿಪ್ರಾಯ ಪಡುತ್ತಾರೆ).

(ದ್ರೋಹ) ತಿಳಿಯದವನಿಗೆ ತಿಳಿಸಿಕೊಡುವುದು ಮಹಾದೋಷವೆಂದು ಕೌಟಿಲ್ಯ ಹೇಳುತ್ತಾನೆ. ಹೊಸದಾದ ದ್ರವ್ಯ (ಉದಾ. ಗಡಿಗೆ) ಯಾವ ಯಾವ ವಸ್ತುವಿನೊಡನೆ ಲೇಪಿಸಲ್ಪಡುತ್ತದೆಯೋ ಅದನ್ನು ಅದು ಹೀರಿಕೊಳ್ಳುತ್ತದೆ. ಅದೇ ರೀತಿ ಏನೂ ಅರಿಯದ ಯುವಕ ತಾನು ಕೇಳಿದ್ದನ್ನೆಲ್ಲಾ ಶಾಸ್ತ್ರೋಪದೇಶವೆಂಬಂತೆ ತಿಳಿಯುತ್ತಾನೆ. ಆದ್ದರಿಂದ ಧರ್ಮವನ್ನು ಅರ್ಥವನ್ನು ಮಾತ್ರ ಅವನಿಗೆ ಉಪದೇಶಿಸಬೇಕು. ಅಧರ್ಮ-ಅನರ್ಥಗಳನ್ನು ಬೋಧಿಸಬಾರದು.

ಸತ್ರಿಗಳು 'ನಾವು ನಿನ್ನವರು' ಎಂದು ಹೇಳುತ್ತಾ ಅವನನ್ನು ನೋಡಿಕೊಳ್ಳುತ್ತಾರೆ. ಯೌವನದ ಕಾರಣ ಪರಸ್ತ್ರೀಯಲ್ಲಿ ಮನಸ್ಸು ಮಾಡುತ್ತಿರುವ ಅವನನ್ನು ಆರ್ಯೆಯ ರಂತೆ ಕಾಣುವ ಅಗಮ್ಯರಾದ ಸ್ತ್ರೀಯರ ಮೂಲಕ ಅವನು ಒಂಟಿಯಾಗಿರುವಾಗ ರಾತ್ರಿಯವೇಳೆ ಗಾಬರಿಪಡಿಸುವರು. ಮದ್ಯದ ಚಪಲವಿದ್ದರೆ, ಔಷಧಯುಕ್ತ ಪಾನದಿಂದ ಭಯಪಡಿಸುವರು, ಜೂಜಿನಲ್ಲಿ ಆಸಕ್ತಿತೋರಿದರೆ, ಕಪಟರಾದ ಪುರುಷರ ಮೂಲಕ ಅವನಲ್ಲಿ ಭೀತಿ ಹುಟ್ಟಿಸುವರು. ಬೇಟೆಯಾಡಲು ಇಚ್ಛಿಸಿದರೆ ದರೋಡೆಗಾರರ ವೇಷದಿಂದ ಅವನಿಗೆ ತ್ರಾಸಕೊಡುವರು. ತಂದೆಯ ಬಗ್ಗೆ ದ್ರೋಹಬುದ್ಧಿಯಿದ್ದರೆ, ಮೇಲ್ನೋಟಕ್ಕೆ ಒಪ್ಪಿ, ಒಳಹೊಕ್ಕು, 'ರಾಜನನ್ನು ದ್ವೇಷಿಸುವುದು ಸುಲಭವಲ್ಲ; (ಪ್ರಯತ್ನಿಸಿ) ಒಂದು ವೇಳೆ ವಿಫಲನಾದರೆ, ಹತನಾಗುತ್ತೀಯೆ; ಸಫಲನಾದರೆ, ನರಕಪ್ರಾಪ್ತಿ, ಲೋಕನಿಂದೆ, ಪ್ರಜೆಗಳು ಕೂಗಾಟ ಮತ್ತು ಮಣ್ಣಿನ ಹೇಂಟೆಯಂತೆ ನಿನ್ನ ನಾಶವಾಗುತ್ತದೆ' ಎಂದು ಹೇಳಿ ಬುದ್ಧಿಯನ್ನು ನಿವಾರಿಸಬೇಕು.

ತಂದೆಯಲ್ಲಿ ವಿದ್ರೋಹಾತ್ಮಕ ಸ್ವಭಾವುಳ್ಳ ಪ್ರೀತಿಯ ಅಥವಾ ಒಬ್ಬನೇ ಮಗನಾದಲ್ಲಿ ಅವನನ್ನು ಬಂಧನದಲ್ಲಿಡಬೇಕು. ಅನೇಕ ಪುತ್ರರಿದ್ದಲ್ಲಿ (ವಿದ್ರೋಹಾತ್ಮಕ ಸ್ವಭಾವವುಳ್ಳ ಮಗನನ್ನು) ಪ್ರಾಂತ ಪ್ರದೇಶಕ್ಕೆ ಅಥವಾ ಬೇರೆ ದೇಶಕ್ಕೆ ಕೊಂಡಯ್ದು ಅಲ್ಲಿ ಅವನು ಗರ್ಭ, ಪಂಡ್ಯ ಅಥವಾ ಡಿಂಭ - ವಾಗದಂತೆ ಕಳುಹಿಸಬೇಕು. ಆತ್ಮಗುಣ ಸಂಪನ್ನನಾದ ಪುತ್ರನನ್ನು ಸೇನಾಪತಿ ಅಥವಾ ಯುವರಾಜನನ್ನಾಗಿ ಮಾಡಬೇಕು.

CC-0. In Public Domain. Cuddalore Collection. TN.

Digitization by eGangotri-South Center

ಪುತ್ರರು ಮೂರು ಬಗೆ - ಬುದ್ಧಿಮಾನ್, ಆಹಾರ್ಯಬುದ್ಧಿ ಮತ್ತು ದುರ್ಬುದ್ಧಿ. ಬುದ್ಧಿವಂತನು (ಗುರುಗಳಿಂದ) ಉಪದಿಷ್ಟವಾದ ಧರ್ಮ ಅರ್ಥಗಳನ್ನು ಕಲಿಯುತ್ತಾನೆ; ಅನುಷ್ಠಾನಕ್ಕೆ ತರುತ್ತಾನೆ. ಆಹಾರ್ಯ ಬುದ್ಧಿಯುಳ್ಳವನು ಕಲಿತರೂ ಆಚರಿಸುವುದಿಲ್ಲ. ದುರ್ಬುದ್ಧಿಯು ಅಪಾಯ (ಕಾರಣ)ಗಳಲ್ಲಿ ಇರುತ್ತಾನೆ ಮತ್ತು ಧರ್ಮ-ಅರ್ಥಗಳನ್ನು ದ್ವೇಷಿಸುತ್ತಾನೆ.

ಅವನು (ದುರ್ಬುದ್ಧಿಯಿರುವವನು) ಒಬ್ಬನೇ ಮಗನಾದರೆ, ಅವನಿಗೆ ಪುತ್ರಸಂತಾನವಾಗುವಂತೆ ಯತ್ನಿಸಬೇಕು. ರಾಜನು ವೃದ್ಧನೋ ರೋಗಿಯೋ ಆದರೆ, ತಾಯಿ ಕಡೆಯ ಬಂಧು, ರಕ್ತಸಂಬಂಧಿ, ಗುಣವಂತನಾದ ಸಾಮಂತ - ಇವರಲ್ಲಿ ಒಬ್ಬನಿಂದ (ತನ್ನ) ಕ್ಷೇತ್ರದಲ್ಲಿ (ಮಹಿಷಿ) ಸಂತಾನ ಪಡೆಯುವುದು. ಅವಿನೀತನಾದ ಒಬ್ಬ ಮಗನನ್ನು ಎಂದಿಗೂ ರಾಜ್ಯದಲ್ಲಿ ಕೂರಿಸಬಾರದು.

ಅನೇಕ ಪುತ್ರರು ಅವಿನೀತರಾದರೆ, ಅವರನ್ನೆಲ್ಲಾ ಒಂದೇ ಕಡೆ ಸೇರಿಸಬೇಕು. ತಂದೆಯು ಮಕ್ಕಳಿಗೆ ಹಿತಕಾರಿಯಾಗಿರಬೇಕು. ಶರೀರ ವೈಕಲ್ಯಾದಿ (ಕಾರಣ)ಗಳನ್ನು ಹೊರತುಪಡಿಸಿ ರಾಜ್ಯವು ಜ್ಯೇಷ್ಠನಿಗೆ ದೊರೆಯುವುದು ಪ್ರಶಂಸಾರ್ಹ.

ಅಥವಾ ರಾಜ್ಯವು ಕುಲಕ್ಕೆ ಸೇರಿದುದು ಕುಲದ ಒಗ್ಗಟ್ಟು ದುರ್ಜಯವಾದುದು. ಅರಾಜಕತೆ ವ್ಯಸನ ಹಾಗೂ ಪರಬಾಧೆಗಳಿಲ್ಲದೆ ಯಾವತ್ತೂ ಈ ಲೋಕದಲ್ಲಿ ಉಳಿಯುತ್ತಾರೆ.

3.1.2 ಟಿಪ್ಪಣಿ :

(1) रक्षितो राजा.............. ।

ಜಯಮಂಗಲಾ ವ್ಯಾಖ್ಯಾನವು ಈ ಮಾತನ್ನು ಸೇರಿಸುತ್ತದೆ. अमित्रादयो हि बाह्या राज्यं हत्वा प्राणान् हन्युः वा; पार्श्वस्थाः प्राणान् हत्वा राज्यं हन्युः वा; पार्श्वस्थाः प्राणान् हत्वा राज्यं हन्युः न वा; अतः पूर्वं दारेभ्यः रहोविहारिभ्यः पुत्रेभ्यः साधारणैश्वरेभ्यः रक्ष्यः .... आत्मरक्षार्थं पुत्रान् रक्षेत् वक्ष्यमाणैः उपायैः ।

(2) अदितिकौशिकवद् :

"According to commentators mendicants earning their

CC-0. In Public Domain. Cuddalore Collection. TN.

Digitization by eGangotri-South Center

livelihood by showing images of gods (aditi) and snake-charmers (Kauśika) Aditivad devādhvajam darśayitvā aditigṛhaṇam aditiputrāṇām kālādidevānām purigrahanārathām. Kauśikastvāhituṇḍikaḥ kośena sarpagraheṇa caratīti." It may be that aditikauśika conveys a single idea, that of a sect of mendicants who make demands (which can be refused) in the name of some god whose flag, along with the image, they carry. Snake-charmers do not carry flags". (R.P. Kangle. P.40)

(3) कौमारभृत्य :

ಕೌಮಾರಭೃತ್ಯವೆಂದರೆ ಬಾಲಚಿಕಿತ್ಸೆ. ಇದು ಭ್ರೂಣದ ಸರಿಯಾದ ಬೆಳವಣಿಗೆ, ಗರ್ಭಿಣಿಯ ಆರೈಕೆ ಮತ್ತು ನವಜಾತ ಶಿಶುವಿನ ಸಂರಕ್ಷಣೆಯ ಕುರಿತದ್ದು.

(1) कौमारभृत्यं नाम कुमारभरण धात्रीशोधनार्थं दुष्टस्तन्यग्रहसमुत्थानां च व्याधीनामुपशमनार्थम् ।

(2) कुमारभृत्या नाम कुमारस्य गर्भस्य निर्विघ्न प्रसवार्थं गर्भचिकित्साकुशलैः भिषग्भिः धात्र्या भृत्या पालनम् ।। (शब्दकल्पद्रुम)

(4) "यत्र गर्भः पण्ड्यं हिम्भोवा न भवेत् :

It explains 'where the prince is not likely to be as a son or son-in-law to the people there (making them take his side against the father) or where he would not be treated as a commodity for disposal (the people there increasing their own power at his expense) or where no trouble would be caused by people there by finding support in him and trying to win over others on his behalf" [- R.P. Kangle, P.42]

CC-0. In Public Domain. Cuddalore Collection. TN.

Digitization by eGangotri-South Center

(5) आत्मसम्पन्नं .... स्थापयेत।

ಈ ಕುರಿತು ಮತ್ಸ್ಯಪುರಾಣದಲ್ಲಿ ಹೀಗೆ ಬಂದಿದೆ,

अधिकारेषु सर्वेषु विनीतं विनियोजयेत।

आदौ स्वल्पे ततः पश्चात्क्रमेणाथ महत्स्वपि।।

(6) "Kulasya :

This is the group of all sons (cbcs). All male members of the royal family forming a sort of ruling council may appear better. It seems to understand a division of the kingdom forming a sort of confederation (sarveṣā;mva vibhaktam bhaved rājyam anyonyāsamśrayam) A council formed by a number of noble families is possible as the meaning of Kulasaṅgha, but does not seem intended here" [- R.P.Kangle, P.43]

ಗಮನಿಸಿ : "Kautilya (1.17) states that the King should first secure his personal safety against his sons and wives and then the security of the kingdom against near and distant enemies. He first deals with safety from his own sons, the princes. The opinions of various authors on polity are cited .... This symposium show how the problem of the Kings safty against bad princes taxed the ingenuity of all ancient writers on Aratasāstra and how Kauṭilya advocated the only reasonable course possible. The Matsyapurāṇa Chapter 220, also relies on training, discipline and gradual transfer of responsibility and advises the imprisonment of a bad prince in a well guarded place furnished with comforts suitable to his position :

CC-0. In Public Domain. Cuddalore Collection. TN.

Digitization by eGangotri-South Center

गुणाधानशक्यं तु तस्य कर्तुं स्वभावतः। बन्धनं तस्य कर्तव्यं गुप्तदेशे सुखान्वितम्।। अविनीतकुमारं हि कुलमाशुविशीर्यति। अधिकारेषु सर्वेषु विनीतं विनियोजयेत्। आदौस्वल्पे ततः पश्चात्क्रमेणाथ महत्स्वपि।।

Read also : राजपुत्रा मदोद्धूता गजाश्वश्च निरंकुशाः। भ्रातरं वाभिनिघ्नन्ति पितरं वाभिमानिनः।। विनयोपग्रहान् भृत्यैः कुर्वीत नृपतिः सुतान्। अविनीतकुमारेण हि कुलामाशु विनश्यति।। विनीतमौरसं पुत्रं यौवराज्येभिषेचयेत्। दुष्टं गजमिवोद्वृत्तं कुर्वीत सुखबन्धनम्।। (कामन्दकीय नीतिसार)" [- P.V.Kane, History of Dharmaśastra, Vol. II, P. 83-84]

---

32 पाठ्यभागः

१४-१५. प्रकरणे - अवरुद्धवृत्तम्, अवरुद्धे च वृत्तिः

१८ - अध्यायः

राजविवासितराजपुत्रवर्तनम् -

राजपुत्रः कृच्छ्रवृत्तिरसदृशे कर्मणि नियुक्तः पितरमनुवर्तेत, अन्यत्र प्राणाबाधकप्रकृतिकोपपातकेभ्यः, पुण्यकर्मणि नियुक्तः पुरुषमधिष्ठातारं याचेत। पुरुषाधिष्ठितश्च सविशेषमादेशमनुतिष्ठेत्। अभिरूपं च कर्मफलमौपायनिकं च लाभं पितुरुपनाययेत्।।

सर्वथा अतुष्यति राज्ञि पुत्रकर्तव्यांशाः -

तथाऽप्यतुष्यन्तमन्यस्मिन् पुत्रे दारेषु वा स्निह्यन्तमरण्याय आपृच्छेत। बन्धवधभयाद्वा यस्सामन्तो न्यायवृत्तिर्धार्मिकः सत्यवागविसंवादकः प्रतिगृहीता मानयिता चाभिपन्नानां तमाश्रयेत। तत्रस्थः कोशदण्डसम्पन्नः प्रवीरपुरुषकन्यासम्बन्धमटवीसम्बन्धं कृत्यपक्षोपग्रहं वा कुर्यात्।

CC-0. In Public Domain. Cuddalore Collection. TN.

Digitization by eGangotri-South Center

सर्वथाऽप्यसहायपुत्रकर्तव्यानि -

एकचरस्सुवर्णपाकमणिरागहेमरूप्यपण्याकरकर्मान्तानाजीवेत्। पाषण्डसङ्घद्रव्यमश्रोत्रियभोग्यं देवद्रव्यमाढ्यविधवां वा गूढमनुप्रविश्य सार्थयानपात्राणि च मदनरसयोगेनातिसन्धायापहरेत्। पारग्रामिकं वा योगमातिष्ठेत्। मातुः परिजनोपग्रहेण वा चेष्टेत। कारुशिल्पिकुशीलवचिकित्सकवाग्जीवनपाषण्डच्छद्मभिर्वा नष्टरूपस्तद्व्यञ्जनसखः छिद्रे प्रविश्य राज्ञः शस्त्ररसाभ्यां प्रहृत्य ब्रूयात् - "अहमसौ कुमारः, सहभोग्यमिदं राज्यमेको नार्हति भोक्तुं तत्र ये कामयन्ते भर्तुम्; नहं द्विगुणेन भक्तवेतनेनोपस्थास्ये" इति। इत्यवरुद्धवृत्तम्।।

अवरुद्धे पुत्रे राज्ञो वर्तनक्रमः -

अवरुद्धं तु मुख्यपुत्रमपसर्पाः प्रतिपाद्यानयेयुः। माता वा प्रतिगृहीता। त्यक्तं गूढपुरुषाः शस्त्ररसाभ्यां हन्युः। अत्यक्तं तुल्यशीलाभिस्त्रीभिः पानेन मृगयया वा प्रसज्य रात्रावुपगृह्यानयेयुः।

उपस्थितं च राज्येन मधूर्ध्वमिति सान्त्वयेत्।

एकस्थमथ संरुन्ध्यात् पुत्रवान् वा प्रवासयेत्।।३८।।

इति विनयाधिकारिके अवरुद्धवृत्तमवरुद्धे च वृत्तिः

अष्टादशोऽध्यायः (१८)

3.2.1 ಕನ್ನಡಾನುವಾದ

ಪ್ರಕರಣ 14 ಮತ್ತು 15

ಅಧ್ಯಾಯ 18

ಅವರುದ್ಧನ ಹಾಗೂ ಅವರುದ್ಧನ ಬಗೆಗಿನ ನಡೆವಳಿಕೆ

ತೊಂದರೆಗೊಳಗಾದಾಗ ಮತ್ತು (ತನಗೆ) ಅನನುರೂಪವಾದ, ಆದರೆ (ತನ್ನ) ಪ್ರಾಣಹಾನಿ ಮಾಡುವ, ಪ್ರಜೆಗಳಿಗೆ ಕೋಪವುಂಟುಮಾಡುವ ಹಾಗೂ ಪಾತಕಗಳಾದ

CC-0. In Public Domain. Cuddalore Collection. TN.

Digitization by eGangotri-South Center

ಕೆಲಸಗಳನ್ನು ಹೊರತಾದ, ಕರ್ಮದಲ್ಲಿ ನಿಯುಕ್ತನಾದ ರಾಜಪುತ್ರ ತಂದೆಗೆ ವಿಧೇಯತೆಯಿಂದ ನಡೆದುಕೊಳ್ಳಬೇಕು.

ಪುಣ್ಯ ಕೆಲಸಗಳಲ್ಲಿ ನಿಯುಕ್ತನಾದ (ರಾಜಪುತ್ರನು) ವೀಕ್ಷಕ ಪುರುಷನನ್ನು (ನಿಯೋಜಿಸಬೇಕೆಂದು ರಾಜನನ್ನು) ಪ್ರಾರ್ಥಿಸಬೇಕು. ಪುರುಷನೊಬ್ಬನನ್ನು ವೀಕ್ಷಕನನ್ನಾಗಿ ಹೊಂದಿ (ರಾಜನ) ಆಜ್ಞೆಯನ್ನು ಅತಿಶಯದೊಂದಿಗೆ ನಡೆಸಬೇಕು. ಸಮರ್ಥವಾದ ಕರ್ಮಫಲವನ್ನೂ ತನ್ನ ಬುದ್ಧಿವಂತಿಕೆಯಿಂದ ದೊರೆತ ಲಾಭವನ್ನೂ ತಂದೆ ಕಳುಹಿಸಬೇಕು.

ಹಾಗಾದರೂ ಸಂತೋಷಗೊಳ್ಳದ ಅಥವಾ ಇನ್ನೊಬ್ಬ ಮಗನಲ್ಲಿಯಾಗಲೀ ಹೆಂಡತಿಯಲ್ಲಾಗಲೀ (ತನ್ನ ತಾಯಿಯನ್ನಲ್ಲದೆ) ಸ್ನೇಹವುಳ್ಳ ತಂದೆಯನ್ನು ಅರಣ್ಯಕ್ಕೆ ಹೋಗಲು ಅಪ್ಪಣೆ ಕೇಳಬೇಕು. ಅಥವಾ ಬಂಧನ-ವಧಗಳ ಭಯವಿದ್ದರೆ ಯಾವ ಸಾಮಂತನು ನ್ಯಾಯಮಾರ್ಗದಲ್ಲಿರುವವನೂ, ಧಾರ್ಮಿಕನೂ, ಸತ್ಯವನ್ನು ನುಡಿಯುವವನೂ, ನುಡಿದಂತೆ ನಡೆದುಕೊಳ್ಳುವವನೂ, ಆಶ್ರಯಕ್ಕೆ ಬಂದವರನ್ನು ಸ್ವಾಗತಿಸಿ, ಗೌರವದಿಂದ ನೋಡಿಕೊಳ್ಳುವವನೂ ಆಗಿರುವನೋ ಅಂಥವನನ್ನು ಆಶ್ರಯಿಸಬೇಕು.

ಅಲ್ಲಿದ್ದುಕೊಂಡು ಕೋಶದಂಡಗಳನ್ನು ಕೂಡಿಸಿಕೊಂಡು ಬಲಿಷ್ಠರೊಡನೆ ಕನ್ಯಾಸಂಬಂಧವನ್ನೂ, ಆಟವಿಕನೊಡನೆ ಸಂಬಂಧವನ್ನೂ ಮಾಡಬೇಕು; ತಂದೆಯ ಕೃತ್ಯಪಕ್ಷವನ್ನು ತನ್ನೆಡೆಗೆ ಸೆಳೆದುಕೊಳ್ಳಬೇಕು. ಒಂಟಿಯಾಗಿರುವವನಾದರೆ, ಸುವರ್ಣಪಾಕ, ಮಣಿರಾಗ, ಚಿನ್ನ ಬೆಳ್ಳಿ (ಆಭರಣಾದಿ) ವ್ಯಾಪಾರ, ಗಣಿ - ಈ ಕೆಲಸಗಳಲ್ಲಿ ತೊಡಗಬೇಕು.

ಗೂಢವಾಗಿ ಪ್ರವೇಶಿಸಿ ವಿಷಪ್ರಯೋಗದಿಂದ ವಂಚಿಸಿ, ಪಾಷಂಡ ಸಂಘದ ದ್ರವ್ಯ, ಶ್ರೋತ್ರಿಯರು ಬಳಸುವ ದೇವದ್ರವ್ಯ; ಅಥವಾ ಧನಿಕಳಾದ ವಿಧವೆಯ ದ್ರವ್ಯವನ್ನು, ವರ್ತಕನ ಯಾನ (ಸಂಚಾರ ಸಾಧನ) ಪಾತ್ರಗಳನ್ನೂ ಸಹ ಅಪಹರಿಸಬೇಕು ಅಥವಾ ಪರರಾಜನ ದುರ್ಗವನ್ನು ಹಿಡಿಯಲು ಅನುಸರಿಸುವ ಕ್ರಮಗಳನ್ನು ಕೈಗೊಳ್ಳಬೇಕು. ಬಡಗಿ, ಶಿಲ್ಪಿ, ಕುಶೀಲವ (ನಟಗಾಯಕಾದಿ), ವೈದ್ಯ, ಕಥಕ, ಪಾಷಂಡ - ಇವುಗಳೊಬ್ಬರ ವೇಷದಿಂದ ರೂಪಮರೆಸಿಕೊಂಡು ಆಯಾ ಬಗೆಯ ವೇಷದವರೊಡನೆ ಸ್ನೇಹಗಳಿಸಿ ರಾಜನ ಸಮಯ ಕಾದು ಒಳಹೊಕ್ಕು (ರಾಜನ ಪಕ್ಷದವರನ್ನು) ಶಸ್ತ್ರ-ರಸ (ವಿಷ)ಗಳಿಂದ ಹೆಸರು (ಮಧ್ಯಸ್ಥರನ್ನು ಕುರಿತು) ನಾನೇ ಆ (ನಿರಾಕೃತ) ರಾಜಕುಮಾರ. ಸಹಭೋಗ್ಯವಾದ ಈ ರಾಜ್ಯವನ್ನು ಒಬ್ಬನೇ ಅನುಭವಿಸುವುದು ತರವಲ್ಲ; ಇಲ್ಲಿ ಯಾರು ಪೋಷಣೆ ಇಚ್ಛಿಸುತ್ತಾರೆಯೋ ಅವರಿಗೆ ಇಮ್ಮಡಿ ಊಟವೇತನ ಕೊಟ್ಟು, ಇರಿಸಿಕೊಳ್ಳುತ್ತೇನೆ" ಎಂದು ಹೇಳಬೇಕು. ಇದುವರೆಗೆ ಅವರುದ್ಧನ (ನಿರಾಕೃತನ) ನಡವಳಿಕೆ.

CC-0. In Public Domain. Cuddalore Collection. TN.

Digitization by eGangotri-South Center

ಅವರುದ್ಧನ ವಿಷಯದಲ್ಲಿ ರಾಜನ ನಡವಳಿಕೆ :

(ನಿರಾಕೃತನಾಗಿ) ನಿರ್ಬಂಧದಲ್ಲಿರುವ ಹಿರಿಯ ಮಗನನ್ನು ಗೂಢಚಾರರು ಅಥವಾ ಸ್ವಂತ ತಾಯಿ ಅಥವಾ ದತ್ತು ತೆಗೆದುಕೊಂಡವಳು ಅವನನ್ನು ಒಪ್ಪಿಸಿ (ರಾಜನ ಬಳಿಗೆ) ಕರೆತರಬೇಕು. ಪರಿತ್ಯಕ್ತನಾದ (ಕುಮಾರನನ್ನು) ಗೂಢಪುರುಷರು ಶಸ್ತ್ರರಸಗಳಿಂದ ಕೊಲ್ಲಬೇಕು. ಪರಿತ್ಯಕ್ತನಲ್ಲದವನನ್ನು ರಾತ್ರಿವೇಳೆ ಒಂದೇ ಶೀಲವುಳ್ಳ ಸ್ತ್ರೀಯರ ಮೂಲಕ ಪಾನದಲ್ಲಿ ಅಥವಾ (ಒಂದೇ ಶೀಲವುಳ್ಳ ರಾಜಪುತ್ರರ ಮೂಲಕ) ಬೇಟೆಯಲ್ಲಿ ತೊಡಗಿಸಿ (ಗೂಢಚಾರರು) ಹಿಡಿದು ತರಬೇಕು. ರಾಜ್ಯವನ್ನು ಪ್ರಾರ್ಥಿಸಿ ಬಂದವನನ್ನು ನನ್ನ ಅನಂತರ" ಎಂದು ಸಮಾಧಾನ ಪಡಿಸಬೇಕು. [ದುಷ್ಟವೃತ್ತನಾದ] ಮಗನು ಒಬ್ಬನೇ ಆದರೆ ಅವನನ್ನು ಬಂಧಿಸತಕ್ಕದ್ದು; ಅನೇಕ ಪುತ್ರರಿದ್ದರೆ ಅಂಥವನನ್ನು ಗಡೀಪಾರು ಮಾಡತಕ್ಕದ್ದು.

3.2.2 ಟಿಪ್ಪಣಿ :

ದುರ್ವಿನೀತ ಪುತ್ರರ ಹತೋಟಿಯನ್ನು ಕುರಿತು ಹಿಂದಿನ ಅಧ್ಯಾಯದಲ್ಲಿ ವಿವರಿಸಲಾಗಿದೆ. ಈ ಅಧ್ಯಾಯದಲ್ಲಿ ರಾಜನೊಬ್ಬನು ನ್ಯಾಯವಿಲ್ಲದೆ ರಾಜಪುತ್ರನನ್ನು ನಿರಾಕರಿಸಿದ್ದರೆ ಅಥವಾ ನಿರಾಕರಿಸುವ ಇಚ್ಛೆಹೊಂದಿದ್ದರೆ ಅಂಥ ನಿರಾಕೃತನಾದ ಪುತ್ರ ಹೇಗೆ ವರ್ತಿಸಬೇಕು; ಅಂಥ ಮಗನ ವಿಷಯದಲ್ಲಿ ರಾಜ ಹೇಗೆ ವರ್ತಿಸಬೇಕೆಂಬುದನ್ನು ಹೇಳಿದೆ. ಈ ಪ್ರಕರಣದಲ್ಲಿ ಅವರುದ್ಧ, ತ್ಯಕ್ತ, ಅತ್ಯಕ್ತ ಎಂದು ಮೂರು ವಿಧವಾಗಿ ಪುತ್ರರನ್ನು ಹೇಳಿದ್ದಾರೆ. ನ್ಯಾಯ ಸಮ್ಮತವಾದ ಹಕ್ಕಿಗೆ ಧಕ್ಕೆಯೊದಗಿ ಅವರುದ್ಧ ದುಷ್ಟವೃತ್ತನಾದವನೆಂದು ತ್ಯಕ್ತನಾದವನು ತ್ಯಕ್ತ. ವಧಬಂಧಾದಿ ಶಂಕೆಯಿಂದ ಓಡಿ ಹೋಗಿರುವವನು ಅತ್ಯಕ್ತ.

CC-0. In Public Domain. Cuddalore Collection. TN.

Digitization by eGangotri-South Center

NOTES :

CC-0. In Public Domain. Cuddalore Collection. TN.

Digitization by eGangotri-South Center

UNIT-4
राजप्रणिधिः

4.1 पाठ्यभागः

4.2 पाठ्यभागः

4.3 पाठ्यभागः

4.4 स्वपरीक्षाप्रश्नाः

4.5 REFERENCE BOOKS :

CC-0. In Public Domain. Cuddalore Collection. TN.

Digitization by eGangotri-South Center

UNIT-4
राजप्रणिधिः

4.1 पाठ्यभागः

१६. प्रकरणम् - राजप्रणिधिः

१९-अध्यायः

राज्ञः उत्थानावश्यकता -

राजानमुत्तिष्ठमानमनूत्तिष्ठन्ते भृत्याः। प्रमाद्यन्तमनुप्रमाद्यन्ति। कर्माणि चास्य भक्षयन्ति। द्विषद्भिश्चातिसन्धीयते। तस्मादुत्थानमात्मनः कुर्वीत॥

कालविभागेन कार्यक्रमविधिः -

नाळिकाभिरहरष्टधा रात्रिं च विभजेत्। छायाप्रमाणेन वा। त्रिपौरुषी पौरुषी चतुरङ्गुलाऽच्छायो मध्याह्न इति पूर्वे दिवसस्याष्टभागाः। तैः पश्चिमाः व्याख्याताः॥

अहःकार्याणि -

तत्र पूर्वे दिवसस्याष्ठभागे रक्षाविधानमायव्ययौ च शृणुयात् द्वितीये पौरजानपदानां कार्याणि पश्येत्। तृतीये स्नानभोजनं सेवेत। स्वाध्यायं च कुर्वीत। चतुर्थे हिरण्यप्रतिग्रहमध्यक्षांश्च कुर्वीत। पञ्चमे मन्त्रिपरिषदा पत्रसंप्रषेणेन मन्त्रयेत। चारगुह्य बोधनीयानि च बुद्ध्येत। षष्ठे स्वैरविहारं मन्त्रं वा सेवेत। सप्तमे हस्त्यश्वरथायुधीयान् पश्येत्। अष्टमे सेनापतिसखो विक्रमं चिन्तयेत्। प्रतिष्ठितेऽहनि सन्ध्यामुपासीत॥

CC-0. In Public Domain. Cuddalore Collection. TN.

Digitization by eGangotri-South Center

रात्रिकार्याणि -

प्रथमे रात्रिभागे गूढपुरुषान् पश्येत्। द्वितीये स्नानभोजनं कुर्वीत, स्वाध्यायं च। तृतीये तूर्यघोषेण संविष्टः, चतुर्थपञ्चमौ शयीत। षष्ठे तूर्यघोषेण प्रतिबुद्धः शास्त्रमितिकर्तव्यतां च चिन्तयेत्। सप्तमे मन्त्रमध्यासीत। गूढपुरुषांश्च प्रेषयेत्। अष्टमे ऋत्विगाचार्यपुरोहितसखः स्वस्त्ययनानिप्रतिगृह्णीयात्। चिकित्सकमाहानसिकमौहूर्तिकांश्च पश्येत्। सवत्सां धेनुं वृषभं च प्रदक्षिणीकृत्योपस्थानं गच्छेत्। आत्मबलानुकूल्येन वा निशाऽहर्भागान् प्रतिविभज्य कार्याणि सेवेत।।

प्रजानां राजदर्शनकालनिर्णयस्य कार्यता -

उपस्थानगतः कार्यार्थिनामद्वारसङ्गं कारयेत्। दुर्दर्शो हि राजा कार्याकार्यविपर्यासमासन्नैः कार्यते। तेन प्रकृतिकोपमरिवशं वा गच्छेत्। तस्माद्देवताश्रमपाषण्डश्रोत्रियपशुपुण्यस्थानानां बालवृद्धव्याधितव्यसन्यनाथानां स्त्रीणां क्रमेण कार्याणि पश्येत्। कार्यगौरवादात्ययिकवशेन वा।।

कार्यकालातिक्रमनिषेधः -

सर्वमात्ययिकं कार्यं शृणुयान्नातिपातयेत्।
कृच्छ्रसाध्यमतिक्रान्तमसाध्यं वा विजायते।।३९।।

अग्न्यगारगतः कार्यं पश्येद्वैद्यतपस्विनाम्।
पुरोहिताचार्यसखः प्रत्युत्थायाभिवाद्य च।।४०।।

तपस्विनां तु कार्याणि त्रैविद्यैस्सह कारयेत्।
मायायोगविदां चैव न स्वयं कोपकारणात्।।४१।।

CC-0. In Public Domain. Cuddalore Collection. TN.

Digitization by eGangotri-South Center

राज्ञो हि व्रतमुत्थानं यज्ञः कार्यानुशासनम्।
दक्षिणा वृत्तिसाम्यं च दीक्षितस्याभिषेचनम्।।४२।।

प्रजासुखे सुखं राज्ञः प्रजानां च हिते हितम्।
नात्मप्रियं हितं राज्ञः प्रजानां तु प्रियं हितम्।।४३।।

राज्ञः सततोत्थानावश्यकता -

तस्मान्नित्योत्थितो राजा कुर्यादर्थानुशासनम्।
अर्थस्य मूलमुत्थानमनर्थस्य विपर्ययः।।४४।।

अनुत्थाने ध्रुवो नाशः प्राप्तस्यानागतस्य च।
प्राप्यते फलमुत्थानाल्लभते चार्थसम्पदम्।।४५।।

इति विनयाधिकारिके राजप्रणिधिः एकोनविंशोऽध्यायः (१९)

4.1.1 ಕನ್ನಡಾನುವಾದ

ಪ್ರಕರಣ - 16

ಅಧ್ಯಾಯ - 19

ರಾಜನ ಕರ್ತವ್ಯಗಳು

ರಾಜನು ಜಾಗೃತನಾಗಿದ್ದರೆ, ಸೇವಕರೂ ಜಾಗೃತರಾಗಿರುತ್ತಾರೆ. ಅಜಾಗರೂಕನಾಗಿದ್ದರೆ ಸೇವಕರೂ ಅಜಾಗರೂಕರಾಗುತ್ತಾರೆ; ಅವನ ಕೆಲಸವನ್ನೆಲ್ಲಾ ಹಾಳುಮಾಡುತ್ತಾರೆ; (ಅಂಥ ರಾಜ) ಶತ್ರುಗಳಿಂದ ಸುಲಭವಾಗಿ ವಶೀಕೃತನಾಗುತ್ತಾನೆ. ಆದ್ದರಿಂದ ತಾನು (ರಾಜ) ಜಾಗರೂಕತೆ ವಹಿಸಬೇಕು.

CC-0. In Public Domain. Cuddalore Collection. TN.

Digitization by eGangotri-South Center

ದಿನದ ವಿಭಾಗ :

ನಾಲಿಕಾಗಳಾಗಿ ಅಥವಾ ನೆರಳಿನ ಪ್ರಮಾಣದಿಂದ ಹಗಲನ್ನೂ ರಾತ್ರಿಯನ್ನೂ ಎಂಟೆಂಟಾಗಿ ವಿಭಾಗಸಿತಕ್ಕದ್ದು. ಮೂರು ಪುರುಷ ಪ್ರಮಾಣದ, ಒಂದು ಪುರುಷ ಪ್ರಮಾಣದ್ದು, ನಾಲ್ಕು ಅಂಗುಲದ ನೆರಳು ಬೀಳುವ ಹೊತ್ತು ಮತ್ತು ಮಧ್ಯಾಹ್ನ ಎಂಬುದಾಗಿ ಹಗಲಿನ ಮೊದಲ ಎಂಟನೇ ಒಂದು ಭಾಗಗಳು ಅವುಗಳಿಂದ ಎರಡನೇ ಅರ್ಧವನ್ನು ಹೇಳಿದಂತಾಯಿತು.

ರಾಜನ ದಿನಚರಿ - ಹಗಲು :

ಅವುಗಳಲ್ಲಿ ಹಗಲಿನ ಮೊದಲ ಎಂಟನೆ ಒಂದು ಭಾಗದಲ್ಲಿ ರಕ್ಷಾವಿಧಾನವನ್ನೂ ಆಯವ್ಯಯವನ್ನು ಕೇಳಿ ತಿಳಿಯುವುದು; ಎರಡನೆಯದರಲ್ಲಿ ಪೌರಜಾನಪದರ ಕೆಲಸಗಳನ್ನು ಪರಿಶೀಲಿಸುವುದು; ಮೂರನೆಯದರಲ್ಲಿ ಸ್ನಾನ, ಭೋಜನ ಮತ್ತು ಅಧ್ಯಯನ; ನಾಲ್ಕನೆಯದರಲ್ಲಿ ಹಿರಣ್ಯ (ಕರ)ವನ್ನು ಸ್ವೀಕರಿಸುವುದು; ಅಧ್ಯಕ್ಷರನ್ನು ನಿಯೋಜಿಸುವುದು; ಐದನೆಯದರಲ್ಲಿ ಮಂತ್ರಿ ಪರಿಷತ್ತಿನೊಡನೆ ಪತ್ರವ್ಯವಹಾರದ ಬಗೆಗೆ ಆಲೋಚಿಸಬೇಕು; ಚಾರರಿಂದ ಗುಹ್ಯ ಸಮಾಚಾರಗಳನ್ನು ತಿಳಿಯಬೇಕು; ಆರರಲ್ಲಿ ಇಷ್ಟಬಂದಂತೆ ವಿಹರಿಸಬಹುದು ಅಥವಾ ಮಂತ್ರಾಲೋಚನೆ ಮಾಡಬಹುದು; ಏಳನೆಯದರಲ್ಲಿ ಆನೆ, ಕುದುರೆ, ರಥ ಕಾಲಾಳು - ಇವುಗಳ ಪರಿಶೀಲನೆ ಮಾಡಬೇಕು; ಎಂಟನೆಯದರಲ್ಲಿ ಸೇನಾಪತಿಯೊಡನೆ ಸೈನ್ಯಕಾರ್ಯಾಚರಣೆಯನ್ನು ಕುರಿತು ಚಿಂತಿಸಬೇಕು. ಸೂರ್ಯಾಸ್ತವಾದ ಮೇಲೆ ಸಂಧ್ಯೋಪಾಸನೆ ಮಾಡಬೇಕು.

ರಾಜನ ದಿನಚರಿ - ರಾತ್ರಿ :

ರಾತ್ರಿಯ ಮೊದಲ ಭಾಗದಲ್ಲಿ ಗೂಢ ಪುರುಷರನ್ನು ಭೇಟಿಮಾಡಬೇಕು. ಎರಡನೆಯದರಲ್ಲಿ ಸ್ನಾನ ಭೋಜನ ಹಾಗೂ ಅಧ್ಯಯನ. ಮೂರನೆಯದರಲ್ಲಿ ತೂರ್ಯಘೋಷದೊಡನೆ ಮಲಗುವ ಕೋಣೆಗೆ ಹೋಗಿ, ನಾಲ್ಕು ಮತ್ತು ಐದನೆಯ ಭಾಗಗಳು ಪೂರ್ತಿ ಇದ್ದೆ ಮಾಡಬೇಕು. ಆರನೇ ಭಾಗದಲ್ಲಿ ತೂರ್ಯಾಘೋಷದಿಂದ ಎಚ್ಚರಗೊಂಡು ಶಾಸ್ತ್ರವಿಚಾರಗಳನ್ನು (ಆದಿನ) ಮಾಡಬೇಕಾದ ಕೆಲಸಗಳನ್ನು ನೆನೆಸಿಕೊಳ್ಳಬೇಕು. ಏಳನೆಯದರಲ್ಲಿ ಮಂತ್ರಾಲೋಚನೆ ನಡೆಸಿ ಗೂಢಪುರುಷರನ್ನು ನಿಯೋಜಿಸತಕ್ಕದ್ದು. ಎಂಟನೆಯದರಲ್ಲಿ ಋತ್ವಿಕ್-ಆಚಾರ್ಯ-ಪುರೋಹಿತರುಗಳಿಂದ ಆಶೀರ್ವಾದವನ್ನು ಪಡೆಯಬೇಕು; ಚಿಕಿತ್ಸಕ, ಮಹಾನಸಿಕ (ಅಡಿಗೆಯವರು) ಹಾಗೂ

CC-0. In Public Domain. Cuddalore Collection. TN.

Digitization by eGangotri-South Center

ಜ್ಯೋತಿಷ್ಕರನ್ನು ಕಾಣಬೇಕು; ಕರುವಿನೊಡನೆ ಹಸುವನ್ನೂ ಹೋರಿಯನ್ನೂ ಪ್ರದಕ್ಷಿಣೆ ಬಂದು ಉಪಸ್ಥಾನ (ಆಸ್ಥಾನ ಮಂಟಪ)ಕ್ಕೆ ಹೋಗಬೇಕು.

ತನ್ನ ಶಕ್ತಿ ಸಾಮರ್ಥ್ಯಕ್ಕೆ ಅನುಗುಣವಾಗಿ ರಾತ್ರಿ ಹಗಲುಗಳ ಭಾಗಗಳನ್ನು ಮಾಡಿಕೊಂಡು ಕೆಲಸಕಾರ್ಯಗಳನ್ನು ಅಳವಡಿಸಿ ಕೊಳ್ಳಬೇಕು.

ರಾಜನ ದಿನಚರಿ-ಕೆಲವು ವಿವರಣೆಗಳು :

ಆಸ್ಥಾನ ಮಂಟಪದಲ್ಲಿರುವಾಗ ಕಾರ್ಯಾರ್ಥಿಗಳಿಗೆ ಬಾಗಿಲು ಸದಾ ತೆರೆದಿರಬೇಕು. ಪ್ರಜೆಗಳಿಗೆ ಕಾಣಿಸಿಕೊಳ್ಳದ ರಾಜ ಹತ್ತಿರದಲ್ಲಿರುವವರಿಂದ ಕಾರ್ಯ-ಆಕಾರ್ಯಗಳ ವಿಪರ್ಯಾಸವನ್ನು ಮಾಡಿಸುತ್ತಾನೆ. ಆದರಿಂದ ಪ್ರಜೆಗಳ ಕೋಪಕ್ಕೆ ಅಥವಾ ಶತ್ರುಗಳ ವಶಕ್ಕೆ ಬೀಳುತ್ತಾನೆ. ಆದ್ದರಿಂದ ದೇವತೆ, ಆಶ್ರಮಗಳು - ಪಾಷಂಡರು, ಶ್ರೋತ್ರಿಯರು, ಪಶುಗಳು, ಪುಣ್ಯಸ್ಥಾನಗಳು ಹಾಗು ಮಕ್ಕಳು, ವೃದ್ಧರು, ವ್ಯಾಧಿಗ್ರಸ್ಥರು, ದುಃಖದಲ್ಲಿರುವವರು, ಅನಾಥರು ಮತ್ತು ಹೆಂಗಸರು ಇವರುಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ಕ್ರಮವಾಗಿ ಅಥವಾ ಕಾರ್ಯಗೌರವದ ಕಾರಣ ಇಲ್ಲವೇ ತುರ್ತಾದ ಕಾರಣ ಮೊದಲು ವಿಚಾರ ಮಾಡಬೇಕಾದ್ದನ್ನು ಪರಿಶೀಲಿಸಬೇಕು.

ಆತ್ಯಯಿಕವಾದ (ಮುಂದೂಡಬಾರದ) ಕೆಲಸವನ್ನು ಆಗಲೇ ಮಾಡಬೇಕು; ಅತಿಕ್ರಮಿಸಬಾರದು; ವಿಳಂಬವಾದರೆ, ಅಂಥ ಕೆಲಸವನ್ನು ನಡೆಸಲು ಕಷ್ಟವಾಗಬಹುದು ಅಥವಾ ಸಾಧ್ಯವೇ ಆಗದಿರಬಹುದು. ಅಗ್ನಿಶಾಲೆಯಲ್ಲಿ ಪುರೋಹಿತ, ಆಚಾರ್ಯರೊಡಗೂಡಿ ಕಾರ್ಯಾರ್ಥಿಗಳಾದ ವೈದ್ಯರು, ತಪಸ್ವಿಗಳು - ಇವರನ್ನು ಗೌರವದಿಂದ ಬಳಮಾಡಿಕೊಂಡು ಅವರ ಕೆಲಸಗಳನ್ನು ಪರಿಶೀಲಿಸಬೇಕು. ತಪಸ್ವಿಗಳ ಕೆಲಸಗಳನ್ನೂ ತ್ರೈವಿದ್ಯರೊಡನೆ ಮಾಡಿಸಬೇಕು; ತಾನೊಬ್ಬನೇ ಮಾಡಬಾರದು; (ತಾನೇ ಮಾಡಿದರೆ) ಅವರುಗಳ ಕೋಪಕ್ಕೆ ಕಾರಣವಾದೀತು. ರಾಜರಿಗೆ ಉತ್ಥಾನವೇ ವ್ರತ; ಕಾರ್ಯಗಳನ್ನು ಅನುಶಾಸನ ಮಾಡುವೇ ಯಜ್ಞ; ಎಲ್ಲರ ಬಗೆಗೂ ಒಂದೇ ಸಮನಾಗಿ ನಡೆದುಕೊಳ್ಳುವುದೇ ದಕ್ಷಿಣೆ; ಅಭಿಷೇಕವೇ ಅವನ ದೀಕ್ಷೆ. ಪ್ರಜೆಗಳ ಸುಖದಲ್ಲಿ ರಾಜನ ಸುಖ; ಪ್ರಜೆಗಳ ಹಿತದಲ್ಲಿ ರಾಜನ ಹಿತ; ರಾಜನಿಗೆ ಪ್ರಿಯವಾದುದು ಅವನಿಗೆ ಹಿತವಲ್ಲ; ಪ್ರಜೆಗಳಿಗೆ ಯಾವುದು ಪ್ರಿಯವೋ ಅದೇ ರಾಜನಿಗೂ ಹಿತವಾದುದು. ಆದ್ದರಿಂದ ಯಾವತ್ತೂ ಎಚ್ಚರವಾಗಿರುವ ರಾಜನು ಅರ್ಥಾನುಶಾಸನವನ್ನು ಮಾಡಬೇಕು. ಉದ್ಯಮ ಶೀಲತೆಯೇ ಅರ್ಥಕ್ಕೆ ಮೂಲ; ಅದಕ್ಕೆ ವಿರುದ್ಧವಾದುದು (ಸೋಮಾರಿತನ) ಅನರ್ಥಕ್ಕೆ ಮೂಲ. ರಾಜನು ಕಾರ್ಯತತ್ಪರನಾಗದಿದ್ದರೆ ಪಡೆದುದರ,

CC-0. In Public Domain. Cuddalore Collection. TN.

Digitization by eGangotri-South Center

ಮುಂದೆ ಪಡೆಯಬಹುದಾದ - ಎಲ್ಲದರ ನಾಶ ಖಂಡಿತ. ಉತ್ಥಾನದಿಂದ ಫಲದೊರಕುತ್ತದೆ; ಅರ್ಥಸಂಪತ್ತಿಯೂ ದೊರೆಯುತ್ತದೆ.

4.1.2 ಟಿಪ್ಪಣಿ :

(1) उत्थान : ರಾಜನ ಸರ್ವಾಂಗೀಣ ಬೆಳವಣಿಗೆ ಹಾಗೂ ಸಮೃದ್ಧಿಯ ಮೂಲ ಉತ್ಥಾನ ಅಥವಾ ರಾಜನ ಜಾಗರೂಕತೆಯಿಂದ ಕೂಡಿದ ಉದ್ಯಮಶೀಲತೆಯೇ ಆಗಿದೆ. ಕೆಳಗಿನವುಗಳನ್ನು ಓದಿರಿ :

(1) उत्थानं हि नरेन्द्राणां बृहस्पतिरभाषत।
राजधर्मस्यतन्मूलं श्लोकांश्चात्र निबोध मे।।
उत्थानेनामृतं लब्धमुत्थानेन सुरा हताः।
उत्थानेन महेन्द्रेण श्रैष्ठ्यं प्राप्तं दिवीह च।।
उत्थानवीरः पुरुषो वाग्वीरानधितिष्ठति।
उत्थानवीरान्वाग्वीरा रमयन्त उपासते।। (शान्तिपर्व)

(2) तत्रालसा मनुष्याणां ये भवन्त्यमनस्विनः।
उत्थानं ते विगर्हन्ति प्रज्ञानां तत्र रोचते।।
वृद्धानां वचनं श्रुत्वा योभ्युत्थानं प्रयोजयेत्।
उत्थानस्य फलं सम्यक् तदा स लभतेऽचिरात्।।
(सोप्तिकपर्व–महाभारत)

(3) प्रमाणाभ्यधिकस्यापि महत्सत्वमधिष्टितः।
पदं मूर्ध्नि समा त्रै केसरी मत्तदन्तिनः।।
उत्साह शक्तिसंपन्नो हन्याच्छत्रुं लधुंगुरुम्।
यथा कण्ठीरवो नागं भारद्वाजः प्रज्चक्षते।। हितोपदेश

CC-0. In Public Domain. Cuddalore Collection. TN.

Digitization by eGangotri-South Center

(2) उपस्थानगतः .... कारयेत : ಪ್ರಜೆಗಳ ಅಹವಾಲುಗಳನ್ನು ರಾಜನು ತಾನೇ ಖುದ್ದು ಪರಿಶೀಲಿಸಿ ನ್ಯಾಯವನ್ನು ನೀಡಬೇಕಾದದ್ದು ಅವನ ಕರ್ತವ್ಯವಾಗಿತ್ತು. ಈ ವಿಷಯದಲ್ಲಿ ತಪ್ಪನ್ನೆಸಗಿದ ನಗ ರಾಜನನ್ನು ಬ್ರಾಹ್ಮಣರು ಶಪಿಸಿರುವುದನ್ನು ಪುರಾತನರು ಉಲ್ಲೇಖಿಸಿದ್ದಾರೆ. ಕೆಳಗಿನವುಗಳನ್ನು ಗಮನಿಸಿ :

1. अर्थिनामुपसन्नानां यस्तु नोपैति दर्शनम्।
सुखे प्रसक्तो नृपतिः स तप्येत नगो यथा।। (महाभारत)

2. अर्थिनां कार्यसिद्ध्यर्थं यस्मात्त्वं नैषि दर्शनम्।
अदृश्यः सर्वभूतानां कृकलासो भविष्यसि।
कार्यार्थिनां विमर्दो हि राज्ञां दोषाय कल्पते।। (रामायण)

3. पौरकार्याणि यो राजा न करोति सुखे स्थितः।
व्यक्तं स नरके घोरे पच्यते नात्र संशयः।। (शुक्रनीति)

4. राजा स्वाधीनवृत्तिरात्मप्रत्ययकोशः स्वयं कृत्यानुदर्शी
विप्रस्वतिवृत्तश्चिरं भद्राणि पश्यति।। (राजनीतिप्रकाश)

3. प्राप्यते फलमुत्थानाल्लभते चार्यसम्पदम् : ಪಿ.ವಿ. ರಾಣೆಯವರು ಈ ಕುರಿತು ತಮ್ಮ ಕೃತಿಯಲ್ಲಿ ಈ ರೀತಿ ಬರೆದಿದ್ದಾರೆ : "An extremely high ideal was placed before the King by Kautilya, the Mahabharata and other works. In the Arthaśāstra 1.19 Kauṭilya proclaims the magnificent ideal" in the happiness of the subjects lies the happiness of the King, in their welfare lies his welfare, the good of the King does not consist in what is pleasing to himself; but what is pleasing to the subjects constitutes his good." Similar words occur in the

CC-0. In Public Domain. Cuddalore Collection. TN.

Digitization by eGangotri-South Center

Viṣṇudharma sūtra III last verse

प्रजासुखे सुखी राजा तद्दुःखे यश्च दुखितः।
स कीर्तियुक्ता लोकेऽस्मिन् प्रेत्य स्वर्गे महीयते।।

The Mahabharata (Śanti 69, 72-73) purports to quote two verses of a Angiras (i.e., Bṛhaspati one of which says 'of what use is tapas to that King or of what use are even sacrifices to him who has well looked after his subjects? He is surely one who knows all dharmas'.

कृत्वा सर्वाणि कार्याणि सम्यक् सम्पाल्य मेदिनीम्।
पालयित्वा तथा पौरान्परत्र सुखमेधते।।
किं तस्य तपसा राज्ञः किं च तस्याध्वरैरपि।
सुपालितप्रजो यः स्यात्सर्वधर्मविदेव सः।।

Śantiparva (56.44 and 46) and Nītiprakaśikā VĪI-2 declare that a King like a pregnant women should not do what is pleasing to him but what would conduce to the good of the people and the ancient dharma for a King is to keep the subjects contented.

लोकरञ्जनमेवात्र राज्ञां धर्मः सनातनः।। यथा हि
गर्भिणी हित्वा स्वं प्रियं मनसोऽनुगम्।
गर्भस्य हितमाधत्ते तथा राज्ञाप्यसंशयम्।।
वर्तितव्यं कुरुश्रेष्ठ सदा धर्मानुवर्तिना
स्वं प्रियं तु परित्यज्य यद्यल्लोकहितं भवेत।।

In Śānti 1 and 5 it is said that the King is there, for the upholding of dharma and not for acting as he likes and that all beings have to depend on dharma which in its turn depends on the King. धर्माय राजा भवति न कामकरणाय तु। धर्मो

CC-0. In Public Domain. Cuddalore Collection. TN.

Digitization by eGangotri-South Center

राजनि तिष्ठति।

In Udyogaparva 118.13-14 a King explains 'the wealth I possess is for the benefit of the urban and rural population and not for my own enjoyment; for, that King who at his sweet will gives away what (really is not his, but) belongs to others does not become endowed with spiritual merit nor with fame'. पौरजानपदार्थं तु ममार्थो नात्मभोगतः। कामतो हि धनं राजा यः पारक्यं प्रयच्छति। न स धर्मेण धर्मात्मन्युज्येत यशसा न च।।

King Marutta is warned by his grandmother in the Mārkaṇḍeya purāṇa (13.3-34) that the King's body is not meant for pleasures but for undergoing great trouble in protecting the earth and carrying out his duties :

राज्ञां शरीरग्रहणं न भोगाय महीपते।
क्लेशाय महते पृथ्वीं स्वधर्मपरिपालने।।

Ancient writers loved to dwell upon the rule of the King as paternal. Read :

1. पिता भ्राता गुरुः शास्तावह्निवैश्रवणे यमः
सप्त राज्ञो गुणानेतान्मनुराह प्रजापतिः। पिता हि
राजा लोकस्य प्रजानां योऽनुकम्पिता।। (महाभारत)

2. वर्तेत पितृवन्नृषु। (मनुस्मृति)

3. अधर्मः सुमहान्नाथ भवेत्तस्य महीपतेः।
यो हरेद् बलिषड्भागं न च रक्षति पुत्रवत्।। (रामायण)

CC-0. In Public Domain. Cuddalore Collection. TN.

Digitization by eGangotri-South Center

4. प्रजानां विनयाधानाद्रक्षणाद्भरणादपि।
स पिता पितरस्तासां केवलं जन्महेतवः।। (रघुवंश)

5. प्रजाभिस्तु बन्धुमन्तो राजानो न ज्ञातिभिः।। (हर्षचरितम्)
- P.V.Kane, History of Dharmaśāstra III. PP61-62

१७. प्रकरणम् - निशान्तप्रणिधिः
२०-अध्यायः

राज्ञः अन्तःपुर-शय्यागृहादिनिर्माणविधिः -

वास्तुकप्रशस्ते देशे सप्राकारपरिखाद्वारमनेककक्ष्यापरिगतमन्तःपुरं कारयेत्। कोशगृहविधानेन वासगृहं, गूढभित्तिसञ्चारं मोहनगृहं तन्मध्ये वासगृहं, भूमिगृहं वा, आसन्नकाष्टचैत्यदेवताविधानद्वारमनेकसुरुङ्गासञ्चारं प्रासादं वा गूढभित्तिसोपानं, सुषिरस्तम्भप्रवेशापसारं वा वासगृहं यन्त्रबद्धतलावपातं कारयेत्। आपत्प्रतीकारार्थमापदि वा कारयेत्। अतोऽन्यथा वा विकल्पयेत् सहाध्यायिभयात्।।

तत्र अग्निभयपरिहारविधानम् -

मानुषेणाग्निना त्रिरपसव्यं परिगतमन्तःपुरमग्निरन्यो न दहति। न चात्रान्योऽग्निर्ज्वलति। वैद्युतेन भस्मना मृत्संयुक्तेन करकवारिणाऽवलिप्तं च।।

विषभयपरिहारविधानम् -

जीवन्तीश्वेतामुष्ककपुष्पवन्दाकाभिरक्षीपे जातस्याश्वत्थस्य प्रतानेन वा गुप्तं सर्पा विषाणि वा न प्रसहन्ते। मार्जारमयूरनकुलपृषतोत्सर्गः सर्पान् भक्षयति।

CC-0. In Public Domain. Cuddalore Collection. TN.

Digitization by eGangotri-South Center

शुकश्शारिका भृङ्गराजो वा सर्पविषशङ्कायां क्रोशति। क्रौञ्चो विषाभ्याशे माद्यति।

ग्लायति जीवञ्जीवकः। म्रियते मत्तकोकिलः। चकोरस्याक्षिणी विरज्येते। इत्येवं अग्निविषसर्पेभ्यः प्रतिकुर्वीत।।

भवने कल्पनीयाः मन्निवेशाः -

पृष्ठतः कक्ष्याविभागे स्त्रीनिवेशो गर्भव्याधिवैद्यप्रत्याख्यातसंस्थाः वृक्षोदकस्थानं च। बहिः कन्याकुमारपुरम्। पुरस्तादलङ्कारभूमिः मन्त्रभूमिरुपस्थानं कुमाराध्यक्षस्थानं च। कक्ष्यान्तरेष्वन्तर्वंशिकसैन्यं तिष्ठेत्।

राज्ञा राज्ञीदर्शनविधौ नियमाः -

अन्तर्गृहगतः स्थविरस्त्रीपरिशुद्धां देवीं पश्येत्। न काञ्चिदभिगच्छेत्। देवीगृहे लीनो हि भ्राता भद्रसेनं जघान। मातुश्शय्यान्तर्गतश्च पुत्रः कारूशम्। लाजान्मधुनेति विषेण पर्यस्य देवी काशिराजम्। विषदिग्धेन नूपुरेण वैरन्त्यं, मेखलामणिना सौवीरं, जालूधमादर्शेन, वेण्यागूढं शस्त्रं कृत्वा देवी विडूरथं जघान। तस्मादेतान्यास्पदानि परिहरेत्।।

राज्ञानां सन्मार्गरक्षणे आश्रयणीयाः नियमाः -

मुण्डजटिलकुहकप्रतिसंसर्ग बाह्याभिश्च दासीभिः प्रतिषेधयेत्। न चैनाः कुल्याः पश्येयुरन्यत्र गर्भव्याधिसंस्थाभ्यः। रूपाजीवाः स्नानप्रघर्षशुद्धशरीराः परिवर्तितवस्त्रालङ्काराः पश्येयुः। आशीतिकाः पुरुषाः, पञ्चाशत्काः स्त्रियो वा मातापितृव्यञ्जनाः स्थविरवर्षवराभ्यागारिकाश्चावरोधानां शौचाशौचं विद्युः, स्थापयेयुश्च स्वामिहिते।।

राज्ञा तत्परिवारेण च आश्रयणीयाः नियमाः -

स्वभूमौ च वसेत्सर्वः परभूमौ न सञ्चरेत्।
न च बाह्येन संसर्गं कश्चिदाभ्यन्तरो व्रजेत्।।४६।।

CC-0. In Public Domain. Cuddalore Collection. TN.

Digitization by eGangotri-South Center

सर्वं चावेक्षितं द्रव्यं निबद्धागमनिर्गमम्।
निर्गच्छेदधिगच्छेद्वा मुद्रासङ्क्रान्तभूमिकम्।।४७।।
इति विनयाधिकारिके निशान्तप्रणिधिः विंशोऽध्यायः (२०)

4.2.1 ಕನ್ನಡಾನುವಾದ

ಪ್ರಕರಣ - 17

ಅಧ್ಯಾಯ 20

ನಿಶಾಂತ ಪ್ರಣಿಧಿ

ಮನೆಕಟ್ಟಲು ಪ್ರಶಸ್ತವಾದ ಪ್ರದೇಶದಲ್ಲಿ ಸುತ್ತುಗೋಡೆ ಕಂದಕ ಬಾಗಿಲುಗಳಿಂದ ಕೂಡಿದ ಅನೇಕ ಕೊಠಡಿಗಳಿಂದ ಸುತ್ತುವರೆದ ಅಂತಃಪುರವನ್ನು ಕಟ್ಟಿಸಬೇಕು. ಕೋಶಗ್ರಹ ವಿಧಾನದಿಂದ ಮಧ್ಯದಲ್ಲಿ ವಾಸಗೃಹವನ್ನು ಅಥವಾ ಗೋಡೆಗಳಿಂದ ಮರೆಯಾದ ಒಳದಾರಿಗಳುಳ್ಳ ಮೋಹನ ಗೃಹ - ಅದರ ಮಧ್ಯೆ ವಾಸಗೃಹವನ್ನು ಅಥವಾ ನೆಲದ ಮೇಲೆ ಇಡಲಾದ ಮರದ ಜಗುಲಿಯ ಮೇಲಿನ ಚೈತ್ಯ ದೇವತಾ ಮೂರ್ತಿಯೇ ಬಾಗಿಲಾಗುಳ್ಳ ಮತ್ತು ಅನೇಕ ಸುರಂಗಮಾರ್ಗವುಳ್ಳ ಭೂಮಿ ಗೃಹವನ್ನು ಅಥವಾ ಗೋಡೆಯಲ್ಲಿ ಅಡಗಿಸಿದ ಮೆಟ್ಟಲುಳ್ಳ ಮಹಡಿಯನ್ನು ಅಥವಾ ಟೊಳ್ಳಾದ ಕಂಬಗಳ ಮೂಲಕ ಪ್ರವೇಶ ನಿರ್ಗಮವುಳ್ಳ ವಾಸಗ್ರಹವನ್ನು (ಬೇಕಾದಾಗ) ಕಳಚಿ ಬೀಳುವಂತೆ ಯಂತ್ರ ವ್ಯವಸ್ಥೆಯುಳ್ಳದ್ದಾಗಿ ಮಾಡಿಸಬೇಕು. ಇದು ಆಪತ್ತಿನ ಪ್ರತೀಕಾರಕ್ಕಾಗಿ ಅಥವಾ ಆಪತ್ತಿನ ಸಂದರ್ಭದಲ್ಲಿ ಮಾಡಿಸಬಹುದು. ಈ ಕ್ರಮಕ್ಕಿಂತ ಭಿನ್ನವಾಗಿ ಕಟ್ಟಿಸಬಹುದು. ಏಕೆಂದರೆ ಸಹಾಧ್ಯಾಯಿಗಳಿಂದ ಭಯವಿರುತ್ತದೆ.

ಮಾನುಷ ಅಗ್ನಿಯಿಂದ ಮೂರು ಬಾರಿ ಅಪ್ರದಕ್ಷಿಣವಾಗಿ ಸುತ್ತು ಬಂದ ಅಂತಃ ಪುರವನ್ನು ಬೇರಾವ ಬೆಂಕಿಯೂ ಸುಡುವುದಿಲ್ಲ. ಬೇರೆ ರೀತಿಯ ಬೆಂಕಿಯೂ (ಸಿಡಿಲು) ಇಲ್ಲಿ ಉರಿಯುವುದಿಲ್ಲ. ಸಿಡಿಲಿನಿಂದ (ಉರಿದುದರ) ಬೂದಿಯನ್ನು ಮಣ್ಣಿನೊಡನೆ ಆಲಿಕಲ್ಲಿನ ನೀರಿನಲ್ಲಿ ಕಲಸಿ ಹಚ್ಚಿದ (ಗೋಡೆಗಳಿಗೂ ಬೆಂಕಿ ಬೀಳುವುದಿಲ್ಲ)

ಜೀವಂತೀ, ಶ್ವೇತಾ, ಮುಷ್ಕರ ಪುಷ್ಪ, ವಂದಾಕಾ - ಇವುಗಳನ್ನು ಅಥವಾ ನೀರು ಇರುವ ಸ್ಥಳದಲ್ಲಿ ಬೆಳೆದ ಅಶ್ವತ್ಥದ ಚಿಗುರುಗಳನ್ನು (ಅಲ್ಲಲ್ಲಿ ಇಡುವುದರಿಂದ) ರಕ್ಷಿತವಾದ ಮನೆಯನ್ನು ಹಾವುಗಳಾಗಲಿ ವಿಷಗಳಾಗಲೀ ಪರಿಣಾಮ ಬೀರುವುದಿಲ್ಲ.

CC-0. In Public Domain. Cuddalore Collection. TN.

Digitization by eGangotri-South Center

ಸ್ವತಂತ್ರವಾಗಿ ಓಡಾಡಲು ಬಿಟ್ಟ ಬೆಕ್ಕು, ನವಿಲು, ಮುಂಗುಸಿ, ಕೃಷ್ಣಮೃಗ - ಇವು ಹಾವುಗಳನ್ನು ತಿನ್ನುತ್ತವೆ. ಗಿಳಿ, ಮೈನಾ (ಶಾರಿಕೆ) ಅಥವಾ ಭೃಂಗರಾಜ ಹಕ್ಕಿಯು ಹಾವಿನ ವಿಷದ ವಾಸನೆಗೆ ಅರಚುತ್ತದೆ. ವಿಷದ ಬಳಿ ಕೊಕ್ಕರೆ (ಕ್ರೌಂಚ) ಮೂರ್ಛೆ ಹೋಗುತ್ತದೆ; ಜೀವಂಜೀವಕವು ಒದ್ದಾಡುತ್ತದೆ; ಯುವ ಕೋಗಿಲೆಯು ಸಾಯುತ್ತದೆ; ಚಕೋರದ (ಕೆಂಪು) ಕಣ್ಣುಗಳು ಬಣ್ಣ ಕಳೆದುಕೊಳ್ಳುತ್ತವೆ - ಈ ಪ್ರಕಾರವಾಗಿ ಅಗ್ನಿ ವಿಷಸರ್ಪಗಳಿಗೆ ಪ್ರತೀಕಾರ ಮಾಡಬೇಕು.

ಹಿಂದುಗಡೆಯ ಕಕ್ಷ್ಯಾ ವಿಭಾಗದಲ್ಲಿ ಸ್ತ್ರೀಯರಿಗೆ ನಿವೇಶನ; ಗರ್ಭಿಣಿ, ವ್ಯಾಧಿಕರು, ವೈದ್ಯರುಗಳಿಗೆ ಮೀಸಲಾದ ಸ್ಥಳ, ಉದ್ಯಾನ ಹಾಗೂ ಭಾವಿ ಇರುತ್ತದೆ. ಹೊರಗೆ ರಾಜಕುಮಾರ - ಕುಮಾರಿಯರ ವಾಸ ಸ್ಥಳಗಳು. ಮುಂದುಗಡೆ ಅಲಂಕಾರ ಭೂಮಿ, ಆಸ್ಥಾನ ಮಂಟಪ ಕುಮಾರನ ಹಾಗೂ ಅಧ್ಯಕ್ಷರ ಸ್ಥಾನ, ಎಲ್ಲ ಕಕ್ಷ್ಯೆಗಳ ನಡುವೆ ಅಂತಃಪುರದ ಸೈನ್ಯ ಇತರಕ್ಕದ್ದು.

ಅಂತಃಪುರದೊಳಗೆ ಹೋದ ರಾಜನು ಸ್ಥವಿರಸ್ತ್ರೀಯಿಂದ (ಪರೀಕ್ಷಿತಳಾದ) ಪರಿಶುದ್ಧಳಾದ ದೇವಿಯನ್ನು ನೋಡಬೇಕು. (ಅಪರೀಕ್ಷಿತಳಾಗಿ) ಯಾವುದೇ ಸ್ತ್ರೀ ಯೊಡನೆ ಬೆರೆಯಬಾರದು. (ಏಕೆಂದರೆ) ದೇವಿಯ ಕೋಣೆಯಲ್ಲಿ ಅಡಗಿದ್ದ (ರಾಜನ) ಸಹೋದರ ಭದ್ರಸೇನನ್ನು ಕೊಂದನು; ತಾಯಿಯ ಹಾಸಿಗೆಯಲ್ಲಿ ಸೇರಿಕೊಂಡಿದ್ದ ಮಗ ಕಾರೂಶ ರಾಜನನ್ನು ಕೊಂದನು; ಅರಳಿಗೆ ಜೇನು ಬೆರೆಸುವೆನೆಂದು ವಿಷಬೆರೆಸಿ ಕಾಶಿರಾಜನನ್ನು ರಾಣಿ ಕೊಂದಳು; ವಿಷಲಿಪ್ತವಾದ ಕಾಲಂದಿಗೆಯಿಂದ ವೈರಂತ್ಯನನ್ನು (ರಾಣಿ ಕೊಂದಳು); ಮೇಖಲೆಯ ವಿಷಲಿಪ್ತ ಮಣಿಯಿಂದ ಸೌವೀರನನ್ನು (ರಾಣಿ ಕೊಂದಳು); ಜಾಲೂಥನನ್ನು (ಅವನ ರಾಣಿ) ವಿಷಲಿಪ್ತ ಕನ್ನಡಿಯಿಂದ (ಕೊಂದಳು); ತಲೆಗೂದಲಲ್ಲಿ ಶಸ್ತ್ರವನ್ನು ಬಚ್ಚಿಟ್ಟುಕೊಂಡಿದ್ದ ರಾಣಿ ವಿಡೂರಥನನ್ನು ಕೊಂದಳು. ಆದ್ದರಿಂದ ಅಂಥ ಸಂದರ್ಭಗಳನ್ನು ದೂರೀಕರಿಸಬೇಕು.

(ರಾಣಿಯರಿಗೆ) ಮುಂಡ, ಜಟಿಲ, ಕುಹಕರ ಹಾಗೂ ಹೊರಗಿನ ದಾಸಿಯರ ಸಂಪರ್ಕವನ್ನು ಪ್ರತಿಷೇಧಿಸಬೇಕು. ಕುಲಜರಾದ ಹೊರಗಿನ ಸ್ತ್ರೀಯರು ಸಹ ಅವರನ್ನು (ರಾಣಿಯರನ್ನು) ಗರ್ಭವ್ಯಾಧಿ ಸಂಸ್ಥಾನಗಳಿದ್ದಾಗ ಹೊರತು ನೋಡಬಾರದು. ವೇಶ್ಯೆ ಯರು ತಿಕ್ಕಿಕೊಂಡು ಸ್ನಾನ ಮಾಡುವುದರಿಂದ ಶುದ್ಧವಾದ ಶರೀರವುಳ್ಳವರಾಗಿ, ವಸ್ತ್ರ- ಅಲಂಕಾರಗಳನ್ನು ಬದಲಿಸಿಕೊಂಡು (ರಾಜನನ್ನು) ಕಾಣಬೇಕು. ತಂದೆ ತಾಯಿಗಳೆಂದು ಹೇಳಿಕೊಳ್ಳುವ ಎಂಭತ್ತರ ಪುರುಷರು, ಐವತ್ತರ ಹೆಂಗಸರೂ - ಇವರು;ಸ್ಥವಿರ, ವರ್ಷವರ, ಅಭ್ಯಾಗರಿಕ - ಇವರೂ ಸಹ ರಾಣಿ ವಾಸದ ಶೌಚಾಶೌಚವನ್ನು ತಿಳಿಯುತ್ತಾರೆ ಮತ್ತು ಸ್ವಾಮಿಗೆ ಅನುಕೂಲ..ಗಿರುವಂತೆ ಮಾಡುತ್ತಾರೆ.

CC-0. In Public Domain. Cuddalore Collection. TN.

Digitization by eGangotri-South Center

ಎಲ್ಲರೂ ತಮ್ಮ ತಮ್ಮ ಸ್ಥಳದಲ್ಲಿ ಇರಬೇಕು; ಇತರರ ಸ್ಥಳಗಳಿಗೆ ಹೋಗಬಾರದು; ಒಳಗಿನವರು ಯಾರೂ ಹೊರಗಿನವರೊಡನೆ ಸಂಪರ್ಕವಿಟ್ಟುಕೊಳ್ಳಬಾರದು. ಒಳಕ್ಕೆ ಬರುವುದೂ ಹೊರಕ್ಕೆ ಹೋಗುವುದೂ ನಿಯಂತ್ರಿತವಾಗಿದ್ದು ಎಲ್ಲ ಬಗೆ ದ್ರವ್ಯವೂ ಮುದ್ರೆಯಿರುವ ಭಾಂಡದಲ್ಲಿದ್ದು ಚೆನ್ನಾಗಿ ಪರೀಕ್ಷಿಸಲ್ಪಟ್ಟದ್ದಾಗಿ ಒಳಕ್ಕೆ ಬರಬೇಕು ಹಾಗೂ ಹೊರಕ್ಕೆ ಹೋಗಬೇಕು.

4.2.2 ಟಿಪ್ಪಣಿ :

ಈ ಅಧ್ಯಾಯದಲ್ಲಿ ರಾಜನ ವಾಸಗೃಹದ ಏರ್ಪಾಡು ಹಾಗೂ ರಾಣಿ ವಾಸದಲ್ಲಿ ಜನಸಂಚಾರ ನಿಯಂತ್ರಣ, ರಾಣಿಯರ ಬಗ್ಗೆ ರಾಜವಹಿಸಬೇಕಾದ ಎಚ್ಚರಿಕೆ - ಇವುಗಳನ್ನು ಕುರಿತು ಹೇಳಲಾಗಿದೆ.

1 अन्तःपुरः :

ಸಾಮಾನ್ಯವಾಗಿ ಅಂತಃಪುರವೆಂದರೆ ರಾಣಿಯರು ಮತ್ತು ಸ್ತ್ರೀಯರು ವಾಸಿಸುವ ಮನೆ ಎಂದರ್ಥ. ಆದರೆ ಇಲ್ಲಿ ರಾಜನ ಅರಮನೆ ಎಂಬ ವಿಶಾಲ ಅರ್ಥದಲ್ಲಿ ಬಳಸಲಾಗಿದೆ.

2 कोशगृहविधानेन :

ಇದನ್ನು ಎರಡನೇ ಅಧಿಕರಣದ 5ನೇ ಅಧ್ಯಾಯದಲ್ಲಿ ತಿಳಿಸಲಾಗಿದೆ.

3 मोहन गृह :

ಆರ್.ಪಿ.ಕಾಂಗ್ಲೆಯವರು ಇದರ ಕುರಿತು ಈ ರೀತಿ ಬರೆದಿದ್ದಾರೆ, "Mohanagṛha is a maze of labyrinth where a stranger would get lost. It is to have passages concealed in walks; vāsagṛaha is to be in its centre" - R.P.Kangle P.48.

CC-0. In Public Domain. Cuddalore Collection. TN.

Digitization by eGangotri-South Center

4 भूमि गृहम् :

ಆರ್.ಪಿ. ಕಾಂಗ್ಲೆಯ ಪ್ರಕಾರ "Bhumigṛham etc states another alternative arrangement for the vasagṛha. The idea is that an underground chamber is to be built with an emergency exit through a subterranean passage leading to an opening covered by the wooden image of the deity in a nearby sanctuary. A person escaping from the bhūmīgṛha would arrive at the opening under the image, which being made of wood can be easily pushed aside; thus he would make good his escape without being noticed by those besieging or searching the vāsagṛha. This is explanation and the only right one". - R.P.Kangle P.48.

4.3 पाठ्यभागः

१८. प्रकरणम् - आत्मरक्षितकम् २१-आध्यायः

योग्यकक्ष्यासु परिवारस्थापनेन आत्मरक्षणविधिः -

शयनादुत्थितः स्त्रीगणैर्धन्विभिः परिगृह्येत। द्वितीयस्यां कक्ष्यायां कञ्चुकोष्णीषिभिर्वर्षवराभ्यागारिकैः। तृतीयस्यां कुब्जवामनकिरातैः। चतुर्थ्यां मन्त्रिभिस्सम्बन्धिभिर्दौवारिकैश्च प्रासपाणिभिः।।

अङ्गरक्षायां अर्हाः अनर्हाश्च -

पितृपैतामहं महासम्बन्धानुबन्धं शिक्षितमनुरक्तं कृतकर्माणं जनमासन्नं कुर्वीत। नान्यतोदेशीयमकृतार्थमानं स्वदेशीयं वाऽप्यपकृत्योपगृहीतम्। अन्तर्वंशिकसैन्यं राजानमन्तःपुरं च रक्षेत्।।

CC-0. In Public Domain. Cuddalore Collection. TN.

Digitization by eGangotri-South Center

पाककर्मव्यवस्था -

गुप्ते देशे माहानसिकः सर्वमास्वादबाहुल्येन कर्म कारयेत्। तद्राजा तथैव प्रतिभुञ्जीत, पूर्वमग्नये वयोभ्यश्च बलिं कृत्वा।।

विषसम्पर्कपरिज्ञानोपायाः -

अग्नेर्ज्वालाधूमनीलता शब्दस्फोटनं च विषयुक्तस्य, वयसां विपत्तिश्च, अन्नस्योष्मा मयूरग्रीवाभः शैत्यम्, आशु क्लिष्टस्यैव वैवर्ण्यं सोदकत्वमक्लिन्नत्वं च, व्यञ्जनानामाशुशुष्कत्वं च क्वाथश्यामफेनपटलविच्छिन्नभावो गन्धस्पर्शरसवधश्च, द्रव्येषु हीनातिरिक्तच्छायादर्शनं फेनपटलसीमन्तोर्ध्वराजीदर्शनं च, रसस्य मध्ये नीला राजी, पयसस्ताम्रा, मद्यतोययोः काली, दध्नश्श्यामा च, मधुनश्श्वेता, द्रव्याणामार्द्राणामाशुप्रम्लानत्वमुत्पक्वभावः क्वाथनीलश्यावता च, शुष्काणामाशुशातनं वैवर्ण्यं च, कठिनानां मृदुत्वं मृदूनां कठिनत्वं च, तदभ्याशे क्षुद्रसत्ववधश्च, आस्तरणप्रावरणानां श्याममण्डलता तन्तुरोमपक्ष्मशातनं च, लोहमणिमयानां पाकलोपदेहता स्नेहरागगौरवप्रभाववर्णस्पर्शवधश्चेति विषयुक्तलिङ्गानि।।

विषप्रयोक्तृचिह्नानि -

विषप्रदस्य तु शुष्कश्यावक्त्रता वाक्सङ्गस्स्वेदो विजृम्भणं चातिमात्रं वेपथुः प्रस्खलनं वाक्यविप्रेक्षणमावेशः कर्मणि स्वभूमौ चानवस्थानमिति।।

विषवैद्यनियोजनावश्यकता -

तस्मादस्य जाङ्गलीविदो भिषजश्चासन्नास्स्युः। भिषग्भैषज्यागारादास्वाद-विशुद्धमौषधं गृहीत्वा पाचकपोषकाभ्यामात्मना च प्रतिस्वाद्य राज्ञे प्रयच्छेत्। पानं पानीयं चौषधेन व्याख्यातम्।।

CC-0. In Public Domain. Cuddalore Collection. TN.

Digitization by eGangotri-South Center

इतरपरिचारकवर्गाश्रयणीया नियमाः -

कल्पकप्रसाधकाः स्नानशुद्धवस्त्रहस्ताः समुद्रमुपकरणमन्तर्वंशिकहस्तादादाय परिचरेयुः। स्नापकसंवाहकास्तरकरजकमालाकारकर्म दास्यः कुर्युः। ताभिरधिष्ठिता वा शिल्पिनः आत्मचक्षुषि निवेश्य वस्त्रमाल्यं दद्युः। स्नानानुलेपनप्रघर्षचूर्णवासस्नानीयानि स्ववक्षोबाहुषु च। एतेन परस्मादागतकं च व्याख्यातम्। कुशीलवाः शस्त्राग्निरसवर्जं नर्मयेयुः। आतोद्यानि चैषामन्तस्तिष्ठेयुरश्वरथद्विपालङ्काराश्च।।

प्रयाणादिसमये राज्ञा पालनीयाः नियमाः -

मौलपुरुषाधिष्ठितं यानवाहनमारोहेत्। नावं चाप्तनाविकाधिष्ठिताम्। अन्यनौप्रतिबद्धां वातवेगवशां च नोपेयात्। उदकान्ते सैन्यमासीत। मत्स्यग्राहविशुद्धमवगाहेत। व्याळग्राहपरिशुद्धमुद्यानं गच्छेत्। लुब्धकैः श्वगणिभिरपास्तस्तेनव्याळपराबाधभयं च ललक्षपरिचयार्थं मृगारण्यं गच्छेत्। आप्तशस्त्रग्राहाधिष्ठितस्सिद्धतापसं पश्येत्। मन्त्रिपरिषदा सामन्तदूतम्। सन्नद्धोऽश्वं हस्तिनं रथं वाऽऽरूढस्सन्नद्धमनीकं गच्छेत्। निर्याणेऽभियाने च राजमार्गमुभयतः कृताऽऽरक्षं दण्डिभिरपास्तशस्त्रहस्तप्रव्रजितव्यङ्गं गच्छेत्। न पुरुषसम्बाधमवगाहेत। यात्रासमाजोत्सवप्रवहणानि च दशवर्गिकाधिष्ठितानि गच्छेत्।।

अधिकरणार्थनिगमनम् -

यथा च योगपुरुषैरन्यान् राजाऽधितिष्ठति।
तथाऽयमन्यबाधेभ्यो रक्षेदात्मानमात्मवान्।।४८।।

इति विनयाधिकारिके आत्मरक्षितकं एकविंशोऽध्यायः (21)

।।एतावता कौटिलीयस्यार्थशास्त्रस्य विनयाधिकारिकं प्रथममधिकरणं समाप्तम्।।

CC-0. In Public Domain. Cuddalore Collection. TN.

Digitization by eGangotri-South Center

4.3.1 ಕನ್ನಡಾನುವಾದ

ಪ್ರಕರಣ - 18

ಅಧ್ಯಾಯ - 21

ಆತ್ಮರಕ್ಷಣೆ

ಹಾಸಿಗೆಯಿಂದ ಎದ್ದು ಬಂದ ರಾಜನನ್ನು ಬಿಲ್ಲು ಹಿಡಿದ ಸ್ತ್ರೀಸಮೂಹ ಸುತ್ತುವರಿಯಬೇಕು. ಎರಡನೆಯ ಕಕ್ಷೆಯಲ್ಲಿ ನಿಲುವಂಗಿ ಪೇಟ ಧರಿಸಿದ ವರ್ಷವರ-ಅಭ್ಯಾಗಾರಿಕರು; ಮೂರನೆಯ ಕಕ್ಷೆಯಲ್ಲಿ ಕುಬ್ಜ-ವಾಮನ ಕಿರಾತರು; ನಾಲ್ಕನೆಯದರಲ್ಲಿ ಮಂತ್ರಿಗಳು, ಸಂಬಂಧಿಗಳು, ಪ್ರಾಸ ಹಿಡಿದ ದೌವಾರಿಕರು (ದ್ವಾರಪಾಲಕರು) ಸುತ್ತುವರಿಯಬೇಕು.

ತಾತ ಮುತ್ತಾತನ ಕಾಲದಿಂದಲೂ (ಸೇವೆ ಮಾಡುತ್ತಿರುವ) ರಾಜನಿಗೆ ಹತ್ತಿರದ ಸಂಬಂಧ ಹೊಂದಿದೆ, ಶಿಕ್ಷಣ ಪಡೆದ, ಅನುರಾಗವುಳ್ಳ, ಸಮರ್ಪಕವಾಗಿ ಕೆಲಸ ನಿರ್ವಹಿಸುವ ಜನಗಳನ್ನು ಆಪ್ತಜನರಾಗಿ ನೇಮಿಸಿಕೊಳ್ಳಬೇಕು. (ಹಣ ಅಥವಾ ಮರ್ಯಾದೆ ಪಡೆಯದ) ಹೊರದೇಶದವನನ್ನಾಗಲೀ, ಅಕೃತ್ಯದಲ್ಲಿ ತೊಡಗಿದ್ದಾಗ ಸಿಕ್ಕಿಕೊಂಡ ಸ್ವದೇಶಿಯನ್ನಾಗಲೀ ಆಪ್ತನನ್ನಾಗಿ ಇಟ್ಟುಕೊಳ್ಳಲಾಗದು. ಅಂತರ್ವಂಶಿಕ (ಅಂತಃಪುರದ) ಸೈನ್ಯವು ರಾಜನನ್ನೂ ಅಂತಃಪುರವನ್ನೂ ರಕ್ಷಿಸತಕ್ಕದ್ದು.

ರಕ್ಷಿತವಾದ ಪ್ರದೇಶದಲ್ಲಿ ಪ್ರಧಾನ ಅಡಿಗೆಯವನು ಎಲ್ಲ (ಅಡಿಗೆ) ಕೆಲಸವನ್ನು ಮತ್ತೆ ಮತ್ತೆ ಪರೀಕ್ಷಿಸಿ ಮಾಡಿಸಬೇಕು. ಅದನ್ನು ರಾಜನು ಅದೇ ರೀತಿ (ಬಿಸಿ ಬಿಸಿಯಾಗಿ) ಆಯಾ ವಸ್ತುಗಳನ್ನು ಮೊದಲು ಅಗ್ನಿಗೂ, ಪಕ್ಷಿಗಳಿಗೂ ಬಲಿ (ಒಂದು ತುತ್ತು) ಕೊಟ್ಟು ಊಟ ಮಾಡಬೇಕು.

ತಿನಿಸುಗಳಲ್ಲಿ ವಿಷ ಪರೀಕ್ಷೆ :

ವಿಷಯುಕ್ತವಾದುದನ್ನು (ಬೆಂಕಿಯಲ್ಲಿ ಹಾಕಿದಾಗ) ಬೆಂಕಿಯ ಉರಿ ಹೊಗೆಯಂತೆ ನೀಲಿಯಾಗಿರುವುದು, ಚಟಚಟ ಎಂಬ ಶಬ್ದ ಮಾಡುವುದು; (ವಿಷಯುಕ್ತವಾದುದನ್ನು ತಿಂದ) ಪಕ್ಷಿಗಳು ಸಾಯುವುದು; ಅನ್ನದ ಆವಿಯು ನವಿಲಿನ ಕತ್ತಿನ ಬಣ್ಣ ಹೊಂದಿರುವುದು, ಬಹಳ ಬೇಗನೆ ಆರಿಹೋಗುವುದು, ಕಲಸಿದಂತೆ ಬಣ್ಣಗೆಟ್ಟಿರುವುದು, ನೀರಾಗಿರುವುದು ಮತ್ತು ಚೆನ್ನಾಗಿ ಬೇಯದಿರುವುದು; ವ್ಯಂಜನಗಳು ಚೆನ್ನಾಗಿ

CC-0. In Public Domain. Cuddalore Collection. TN.

Digitization by eGangotri-South Center

ಬೇಯದಿರುವುದು; ಬೇಗನೆ ಒಣಗುವುದು; ಉಕ್ಕುವುದು ತಳಹತ್ತಿದಿದ್ದರೂ ಕಪ್ಪಾಗಿರುವುದು, ಆರಿದ್ದರೂ ನೊರೆನೊರೆಯಾಗಿರುವುದು, (ಹಾಲು ಒಡೆದಂತೆ) ತೆಂಡೆತೆಂಡೆಯಾಗಿರುವುದು ಮತ್ತು ವಾಸನೆ, ಸ್ಪರ್ಶ, ರುಚಿಗಳ ನಾಶ, ದ್ರವಗಳಲ್ಲಿ ಚಿಕ್ಕದಾಗಿ ಇಲ್ಲವೇ ದೊಡ್ಡದಾಗಿ ಪ್ರತಿಬಿಂಬ ಕಾಣುವುದು, ನೊರೆಯ ಪದರದ ಅಂಚಿನಲ್ಲಿ ಗೆರೆಗಳು ಕಾಣಿಸುವುವು; ರಸದ ಮಧ್ಯೆ ನೀಲಿಯಾದ ಗೆರೆ, ಹಾಲಿನಲ್ಲಿ ನಸಗೆಂಪು, ಮಧ್ಯ ಹಾಗೂ ನೀರಿನ ಮಧ್ಯೆ ಕಪ್ಪು, ಮೊಸರಿನಲ್ಲಿ ಶ್ಯಾಮ (ಮೋಡದ ಬಣ್ಣ) ಜೇನಿನಲ್ಲಿ ಬಿಳಿ; ಹಸಿಯಾದ ದ್ರವ್ಯಗಳು ಬೇಗನೆ ಬಾಡುವುದು, ಬೇಯಿಸಿದಂತೆ ಸೊರಗುವುದು, ಕಷಾಯದಂತೆ ನೀಲ ಹಾಗೂ ಕಪಿಶ ಬಣ್ಣವಾಗಿರುವುದು; ಒಣಗಿದ ದ್ರವ್ಯಗಳು ಬೇಗ ಸುರಟಿಗೊಳ್ಳುವುದು, ಬಣ್ಣಗೆಡುವುದು; ಗಟ್ಟಿಯಾದುದು ಮೆತ್ತಗೂ, ಮೆತ್ತಗಿರುವುದು ಗಟ್ಟಿಯಾಗಿ ಆಗುವುದು; ಅದರ ಬಳಿ ಕ್ಷುದ್ರ ಪ್ರಾಣಿಗಳು (ಇರುವೆ, ನೊಣ ಇತ್ಯಾದಿ) ಸತ್ತು ಬೀಳುವುದು; ಹಾಸು-ಹೊದಿಕೆಗಳ ಮೇಲೆ (ಬಿದ್ದಾಗ) ಕಪ್ಪುಬೊಟ್ಟು ಆಗುವುದು ಹಾಗೂ ಎಳೆ, ಕೂದಲು, ಅಂಚುಗಳು ಉದುರಿಹೋಗುವುದು; ಲೋಹ ಮತ್ತು ಮಣಿಮಯವಾದವುಗಳು ಕೆಸರಿನಂತೆ ಕೊಳೆ ಹೊಂದಿರುವುದು, ಹೊಳಪು-ಬಣ್ಣ-ಭಾರ-ಪ್ರಭಾವ-ವರ್ಣ-ಸ್ಪರ್ಶ-ಇವುಗಳ ನಾಶ - ಇವು ವಿಷ ಬೆರೆತಿರುವುದರ ಗುರುತುಗಳು.

ವಿಷ ಹಾಕಿದವನ (ಗುರುತುಗಳೆಂದರೆ) ಒಣಗಿದ ಹಾಗೂ ಕಂದು ಬಣ್ಣವಾಗಿರುವ ಬಾಯಿ, ಅರ್ಧ ಮಾತಾಡುವದು, ಅತಿಯಾದ ಬೆವರು ಹಾಗೂ ಆಕಳಿಕೆ, ನಡುಕ, ಮುಗ್ಗರಿಸುವುದು (ತಡವರಿಸುವುದು), ಆಲೋಚಿಸಿ ಮಾತುಗಳನ್ನಾಡುವುದು (ಅಥವಾ ಮಾತು ಹಾರಿಸುವುದು), ಕೈಕಾಲು ಸೋಲುವುದು (ಅಥವಾ ಮೈಮರೆಯುವುದು), ತನಗೆ ನಿಯಮಿತವಾದ ಕೆಲಸದಲ್ಲಿಯೂ ತನ್ನ ಸ್ಥಾನದಲ್ಲಿಯೂ ನಿಲ್ಲದಿರುವುದು. ಆದ್ದರಿಂದ ವಿಷತಂತ್ರಜ್ಞರು, ಚಿಕತ್ಸಕರು ಅವನ (ರಾಜನ) ಬಳಿ ಇರತಕ್ಕದ್ದು. ವೈದ್ಯನು ಔಷಧಿ ಭಂಡಾರದಿಂದ ಪರೀಕ್ಷಿಸಿ, ಶುದ್ಧವಾದ ಔಷಧಿಯನ್ನು ತಂದು ಪಾಚಕ, ಪೇಷಕ ಹಾಗೂ ತಾನು ಪರೀಕ್ಷಿಸಿ ರಾಜನಿಗೆ ಕೊಡಬೇಕು.

ಮದ್ಯ ಮತ್ತಿತರ ಪಾನೀಯಗಳಿಗೂ ಇದೇ ನಿಯಮ ಅನ್ವಯಿಸುತ್ತದೆ.

ನಾಪಿತರು ಮತ್ತು ಅಲಂಕಾರಕಾರರು ಸ್ನಾನಮಾಡಿ ಶುದ್ಧ ವಸ್ತ್ರಗಳನ್ನುಟ್ಟು, ಶುದ್ಧಹಸ್ತರಾದ ಅಂತರ್ವಂಶಿಕನಿಂದ ಮುದ್ರೆಹಾಕಿಸಿ (ಪೆಟ್ಟಿಗೆಯಲ್ಲಿನ) ಉಪಕರಣಗಳನ್ನು ತೆಗೆದುಕೊಂಡು ತಮ್ಮ ಕೆಲಸವನ್ನು ಮಾಡಬೇಕು. ಸ್ನಾಪಕ (ಸ್ನಾನಮಾಡಿಸುವವ), ಸಂವಾಹಕ (ಮೈ ಒತ್ತುವವ), ಆಸ್ತರಕ (ಹಾಸಿಗೆ ಹಾಸುವವ), ರಜಕ (ಬಟ್ಟೆ ಮಡಿ ಮಾಡುವವ), ಮಾಲಾಕಾರ (ಹೂವಾಡಿಗ) - ಇವರುಗಳ ಕೆಲಸವನ್ನು ದಾಸಿಯರೇ

CC-0. In Public Domain. Cuddalore Collection. TN.

Digitization by eGangotri-South Center

ಮಾಡುವುದು ಇಲ್ಲವೇ ಆಯಾ ಕಲೆಗಳಲ್ಲಿ ನಿಪುಣರಾದವರು ದಾಸಿಯರ ಉಸ್ತುವಾರಿಯಲ್ಲಿ ವಸ್ತ್ರಮಾಲ್ಯಗಳನ್ನು ಕಣ್ಣಿಗೆ ಒತ್ತಿಕೊಂಡೂ, ಸ್ನಾನ, ಅನುಲೇಪನ, ಪ್ರಘರ್ಷ, ಚೂರ್ಣ, ವಾಸ, ಸ್ನಾನೀಯ - ಇವುಗಳನ್ನು ತಮ್ಮ ಕಣ್ಣು, ಎದೆ, ತೋಳುಗಳಿಗೆ ಮುಟ್ಟಿಸಿಯೂ ರಾಜನಿಗೆ ಕೊಡಬೇಕು. (ಅರಮನೆಯ ಹೊರಗಡೆಯಿಂದ ಬಂದುದನ್ನೂ ಇದೇ ಕ್ರಮದಲ್ಲಿ ರಾಜನಿಗೆ ಅರ್ಪಿಸಬೇಕು.)

ಕುಶೀಲವರು ಶಸ್ತ್ರ, ಅಗ್ನಿ, ರಥಗಳನ್ನು ಬಳಸದೆ ಪ್ರದರ್ಶನ ನೀಡಬೇಕು. ಇವರುಗಳ ವಾದ್ಯಗಳೂ, ಆನೆ, ಕುದುರೆ, ರಥ, ಅಲಂಕಾರಗಳೂ ಅವರಮನೆಯೊಳಗೇ ಇರತಕ್ಕದ್ದು.

ವಂಶಪರಂಪರೆಯಿಂದ ಸೇವೆ ಮಾಡುತ್ತಿರುವ ಪುರುಷನ ಪರಿವೀಕ್ಷಣೆಯಲ್ಲಿರುವ ಯಾನವನ್ನಾಗಲೀ, ವಾಹನವನ್ನಾಗಲೀ, ಆಪ್ತನಾಗಿರುವ ನಾವಿಕನಿರುವ ನಾವೆಯನ್ನಾಗಲೀ ಏರಬೇಕು. ಮತ್ತೊಂದು ನಾವೆಯೊಡನೆ ಜೊತೆ ಮಾಡಲಾದ ಅಥವಾ ಗಾಳಿಯ ವೇಗದಿಂದ ನಡೆಯುವ ನಾವೆಯಲ್ಲಿ ಕುಳಿತುಕೊಳ್ಳಬಾರದು. ದಡದಲ್ಲಿ ಸೈನ್ಯವಿರಬೇಕು. ಬೆಸ್ತರು ಪರೀಕ್ಷಿಸಿದ ನೀರಿನಲ್ಲಿ ಇಳಿಯಬೇಕು. ಹಾವಾಡಿಗರು ಪರೀಕ್ಷಿಸಿದ ಉದ್ಯಾನದಲ್ಲಿ ಸಂಚರಿಸಬೇಕು. ಕಳ್ಳಕಾಕರು, ಹುಲಿ, ಶತ್ರುಗಳ ಬಾಧೆ- ಇವುಗಳ ಭಯವನ್ನು ಹಕ್ಕಿಪಕ್ಕಿಗಳು, ಬೇಡರು ದೂರೀಕರಿಸಿದ, ಜಿಂಕೆಗಳುಳ್ಳ ಕಾಡಿಗೆ ಚಲಿಸುವ ಲಕ್ಷ್ಯವನ್ನು ಹೊಡೆಯುವುದನ್ನು ಅಭ್ಯಸಿಸಲು ಹೋಗತಕ್ಕದ್ದು. ಆಪ್ತನಾದ ಶಸ್ತ್ರಪಾಣಿಯ ಜೊತೆಯಲ್ಲಿ ಸಿದ್ಧತಾಪಸನನ್ನೂ, ಮಂತ್ರಿ ಪರಿಷತ್ತಿನೊಡನೆ ಸಾಮಂತನಿಂದ ಬಂದಿರುವ ದೂತನನ್ನೂ ಭೇಟಿಯಾಗಬೇಕು. ಆಯುಧಾದಿಗಳನ್ನು ಧರಿಸಿ ಕುದುರೆ, ಆನೆ ಅಥವಾ ರಥವನ್ನು ಏರಿ ಸನ್ನದ್ಧವಾದ ಆಯುಧಾದಿಗಳನ್ನು ಧರಿಸಿರುವ) ತನ್ನ ಸೈನ್ಯವನ್ನು ನೋಡಬೇಕು. ಹೊರಕ್ಕೆ ಹೋಗುವಾಗ, ಒಳಕ್ಕೆ ಪ್ರವೇಶಿಸುವಾಗ ರಾಜಬೀದಿಯ ಇಕ್ಕೆಲಗಳಲ್ಲಿಯೂ ರಕ್ಷಣೆಯ ಏರ್ಪಾಡು ಮಾಡಿಸಿರಬೇಕು. ಬೆತ್ತ ಹಿಡಿದ ರಕ್ಷಕರು ಶಸ್ತ್ರಗಳನ್ನು ಹಿಡಿದಿರುವವರನ್ನೂ ಪರಿವ್ರಾಜಕರನ್ನೂ ವಿಕಲಾಂಗರನ್ನೂ (ಆ ಬೀದಿಯಿಂದ) ಹೊರಹಾಕಬೇಕು. (ರಾಜನು) ಜನರ ಗುಂಪಿನಲ್ಲಿ ಸೇರಿಕೊಳ್ಳಬಾರದು. ದೇವತಾ ಮೆರವಣಿಗೆ, ಸಮೂಹ, ಸಮಾರಂಭ, ಭೋಜನ ಕೂಟ (ಅಥವಾ ಯಜ್ಞಯಾಗಾದಿ) - ಇವುಗಳಿಗೆ (ಹೋಗಬೇಕಾದರೆ) ದಶವರ್ಗಿಕರ ಪರಿವೀಕ್ಷಣೆಯಲ್ಲಿ ಹೋಗಬೇಕು.

ಗೂಢಚಾರರಿಂದ ಇತರರನ್ನು ರಾಜನು ಹೇಗೆ ಬಾಧೆಪಡಿಸುತ್ತಾನೆಯೋ, ಅದೇ ರೀತಿ ಬುದ್ಧಿವಂತನಾದವನು ಇತರರ ಬಾಧೆಗಳಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಬೇಕು.

CC-0. In Public Domain. Cuddalore Collection. TN.

Digitization by eGangotri-South Center

4.3.2 ಟಿಪ್ಪಣಿ :

ಈ ಅಧ್ಯಾಯದಲ್ಲಿ ರಾಜನ ರಕ್ಷಣೆಯನ್ನು ಕುರಿತ ವಿಚಾರಗಳನ್ನು ತಿಳಿಸಲಾಗಿದೆ. ಅರಮನೆಯಲ್ಲಿ ರಾಜನು ಸಂಚರಿಸುವ ಕೊಠಡಿಗಳಲ್ಲಿ ಸನ್ನಿವೇಶಕ್ಕೆ ಅನುಗುಣವಾದ ರಕ್ಷಕರು ಇರಬೇಕು. ಅಂತಃಪುರದ ರಕ್ಷಣೆಗಾಗಿ ಒಂದು ಸೈನ್ಯವೂ ಒಳಗಡೆ ಇರಬೇಕು. ಪರಂಪರೆಯಿಂದ ರಾಜನ ಊಳಿಗದಲ್ಲಿರುವ ಕುಲದವರನ್ನು ಅಂಗರಕ್ಷಕರನ್ನಾಗಿ ತೆಗೆದುಕೊಳ್ಳಬೇಕು.

1. **पूर्वमग्नये वयोभ्यश्च बलिं कृत्वा :**

ರಾಜನಿಗೆ ವಿಷ ಹಾಕುವ ಸನ್ನಿವೇಶಗಳು ಇರುತ್ತವೆಯಾದ್ದರಿಂದ ಆಹಾರದ ವಿಷಯದಲ್ಲಿ ಎಚ್ಚರಿಕೆ ವಹಿಸಬೇಕು. ಈ ಕುರಿತು ಪಿ.ವಿ.ಕಾಣೆಯವರು ಹೀಗೆ ಬರೆದಿದ್ದಾರೆ; "Manu (VĪ.216-220) warns the King against poisoning. The King should partake of food that is well exmined and prepared by servants that are trustworthy (Lit. as if they were his own self), that know the proper times for dining, that cannot be won over and over the food spells destroying poision should have been muttered. He should mix up in all that he partakes medicines that are antidotes against poison. Only women devoted to him and well examined and found safe as regard their dress and ornaments should be allowed to touch him when fanning or bathing him or applying perfumes to his body. The King should take care in this way as regards his vehicles, bed, food, bath, applying perfumes and all ornamentation". Kam VĪ.8 and Matsya 219.10 are very similar to Manu VĪ.220. Read :

एवं सर्वमिदं राजा सह संमन्त्र्य मन्त्रिभिः ।
व्यायम्याप्लुत्य मध्याह्ने भोक्तुमन्तःपुरं विशेत् ।।

CC-0. In Public Domain. Cuddalore Collection. TN.

Digitization by eGangotri-South Center

तत्रात्मभूतैः कालज्ञैरहार्यैः परिचारकैः।
सुपरीक्षितमन्नाद्यमद्यान्मन्त्रैर्विषापहैः।।
विषघ्नैरगदैश्चास्य सर्वद्रव्याणि योजयेत्।
विषघ्नानि च रत्नानि नियतो धारयेत्सदा।।
परीक्षिताः स्त्रियश्चैनं व्यजनोदक धूपनैः।
वेषाभरणसंशुद्धाः स्पृशेयुः सुसमाहिताः।।
एवं प्रयत्नं कुर्वीत यानशय्यासनाशने।
स्नाने प्रसाधने चैव सर्वालङ्कारकेषु च।।

(मनुस्मृति VII:216-220)

Kauṭ 1.21, Kam.VII.15-26, Matsya 219.9-32 state that part of the food for the King should first be cast into fire and offered to birds and the effects noted, they at great length on the different tints of the flames of fire and of the smoke when different kinds of food cast into fire, they point out the actions and gestures of the poisoners, they prescribe that the cook and the doctor giving medicines for mixing in food as antidotes should be made to partake of the food and then the King should himself partake of it. The King has to be careful in the harem, when recieving presents or anything sent by others, when sitting in a conveyance or riding a horse or travelling in a boat or when attending festivals. (Kauṭ 1.20-21, Kam. VI. 28-47)". P.V.Kane, History of Dharmaśāstra Vol.II PP. 83-84.

2 वाक्यविप्रेक्षणम् :

ಆರ್.ಪಿ. ಕಾಂಗ್ಲೆಯವರು ಇದನ್ನು ಹೀಗೆ ವಿವರಿಸಿದ್ದಾರೆ;

CC-0. In Public Domain. Cuddalore Collection. TN.

Digitization by eGangotri-South Center

"Vākyaviprekṣaṇam : it has "taking a long time to find a suitable reply (kim vakṣyāmi iti viśeṣena prekṣaṇam nibhālanam) In "listening to anothrs speech being apprehensive that he may come to know about him and be talking about him (parvākyākarṇanam kim aham jñātośmi matkathām eva kurvantītyaśaṅkayā)' Meyer has 'casting glances all round when speaking; 'looking restlessly about when some one is speaking to him' is also possible" - R.P.Kangle - P.53.

3 मत्स्यग्राहः :

"matsyagrāha seems to mean 'a fish catcher' (cj) though 'fish and crocodiles' is also possible,". R.P.Kangle P.54.

4 व्यालग्रह :

"Vyalagrāha 'one who catches snakes' is clearly intended, though Cnn has vyāla i.e., lions etc and grāha, i.e., crocodile. Lions can hardly be though of as possible in an udyāna" - R.P.Kangle P.54.

4.4 स्वपरीक्षाप्रश्नाः

१. "चारचक्षुषः राजानः" - विशदयत।

२. स्वविषये कृत्याकृत्यवशीकरणमधिकृत्य लिखत।

३. परविषये कृत्याकृत्यवशीकरणं विमर्शयत।

४. "मन्त्रपूर्वास्सर्वारम्भाः" चर्चयत।

CC-0. In Public Domain. Cuddalore Collection. TN.

Digitization by eGangotri-South Center

५. मन्त्रणक्रममधिकृत्य लिखत।

६. दूतस्य कर्तव्यानि विमर्शयत।

७. "जन्म प्रभृति राजपुत्रान् रक्षेत्" किम्? कथम्?

८. दुर्मार्ग प्रवृत्तस्य राजपुत्रस्य सन्मार्गनयनं कौटिल्य मतमनुसृत्य विशदयत।

९. राज्ञः कार्यक्रम विधिमधिकृत्य विमर्शात्मक टिप्पणी लिखत।

१०. अर्थशास्त्रानुसारेण राजभवनसंरक्षणमधिकृत्य लिखत।

११. कौटिल्येन निरुपितम् आत्मरक्षण विधानं संगृह्यत।

II विवृणुत।

1. सर्वोपधाशुद्धान् मन्त्रिणः कुर्यात्।
2. परस्य चैते बोद्धव्याः तादृशैरेव तादृशाः।
3. मन्त्रपूर्वाः सर्वारम्भाः।
4. तस्माद्रक्षेन्मन्त्रम्।
5. सैषा मन्त्रिपरम्परा मन्त्रं भिनक्ति।
6. तानेकैकशः पृच्छेत्समस्तांश्च
7. आसन्नैः सह कार्याणि पश्येत।
8. तस्मादिमं द्व्यक्षं सहस्राक्षमाहुः।
9. जन्मप्रभृति राजपुत्रान् रक्षेत्।
10. काष्टमिव घुणजग्धं राजकुलमविनीतपुत्रमभियुक्तमात्रं भज्येत।
11. अपायनित्या धर्मार्थद्विषी चेति दुर्बुद्धिः।
12. न चैकपुत्रमविनीतं राज्ये स्थापयेत्।
13. उपस्थितं च राज्येन मदूर्ध्वमिति सान्त्वयेत्।

CC-0. In Public Domain. Cuddalore Collection. TN.

Digitization by eGangotri-South Center

14. तस्मान्नित्योत्थितो राजा कुर्यादर्थानुशासनम्।

15. तस्मादेतान्यास्पदानि परिहरेत्।

16. तथायमन्यबाधेभ्यो रक्षेदात्मानमात्मवान्।

4.5 REFERENCE BOOKS :

1. Aiyangar : Some aspects of Ancient Indian Polity, Madras, 1935.
2. Choudhary Radhakrishna : Kauṭilyas Political Ideas & Institutions, Varanasi, 1971.
3. Dikshitar V.R.R. : The Mauryan Polity, Madras 1932.
4. Ghoshal U.N. : A History of Indian Political Ideas Oxford, 1959.
5. Jayaswal K.P. : The Hindu Polity, A constitutional History of India in Hindu Times, III Edn. Bangalore, 1935.
6. Kane P.V. : History of Dharmaśāstra, Vol II & III, Pune, 1930.
7. Kangle R.P. : The Kauṭilya Arthaśāstra Part II, New Delhi, 1988.
8. Law N.N. : Studies in Indian History and Culture, London, 1925.
9. Saletore B.A. : Ancient Indian Political thought and Institutions, New York, 1963.
10. Shamasastry R. : Kauṭilyas Arthaśāstra, 9th Edn., Mysore, 1988.

CC-0. In Public Domain. Cuddalore Collection. TN.

Digitization by eGangotri-South Center

11. Dr. H.P. Malledevaru, (Editor) : कौटिलीयार्थशास्त्रम् (चन्द्रिकाख्यटिप्पण्यादिसमलङ्कृतम्), Oriental Research Institute, Mysore, 1986.

12. ಸಿದ್ದಪ್ಪಾರಾಧ್ಯ ಟಿ.ಜಿ. : ಅರ್ಥಶಾಸ್ತ್ರ (ಕನ್ನಡ ಅನುವಾದ) ಮೈಸೂರು ವಿ.ಶ್ವವಿದ್ಯಾನಿಲಯ.

13. ಕೆ.ಕೃಷ್ಣಭಟ್ಟ : ಕೌಟಿಲ್ಯನ ಅರ್ಥಶಾಸ್ತ್ರ (ಕನ್ನಡ ಅನುವಾದ) ಸಮಾಜ ಪುಸ್ತಕಾಲಯ, ಧಾರವಾಡ, 2000.

CC-0. In Public Domain. Cuddalore Collection. TN.

Digitization by eGangotri-South Center

NOTES

CC-0. In Public Domain. Cuddalore Collection. TN.

Digitization by eGangotri-South Center

NOTES

CC-0. In Public Domain. Cuddalore Collection. TN.

Digitization by eGangotri-South Center

NOTES

ಕರಾಮುವಿ/ಸಿಪಾವಿ/4–812/2007–2008 ದಿನಾಂಕ: 17–11–2007
ಮುದ್ರಕರು : ಸಪ್ತಗಿರಿ ಪ್ರಿಂಟರ್ಸ್, ಬೆಂಗಳೂರು. 400 ಪ್ರತಿಗಳು.
ಒಳಪುಟ : ಎಂ.ಪಿ.ಎಂ. 60 ಜಿ.ಎಸ್.ಎಂ. 15.2 ಕೆ.ಜಿ., ರಕ್ಷಾಪುಟ : 170 ಜಿ.ಎಸ್.ಎಂ. ಆರ್ಟ್‌ಕಾರ್ಡ್,
ಕ್ರಮಸಂಖ್ಯೆ : 1 ರಿಂದ 400

CC-0. In Public Domain. Cuddalore Collection. TN.

Digitization by eGangotri-South Center



CC-0. In Public Domain. Cuddalore Collection. TN.

Digitization by eGangotri-South Center



CC-0. In Public Domain. Cuddalore Collection. TN.